ಸಂಪುಟ: 06 ಸಂಚಿಕೆ: 45 ಪುಟಗಳು: 08 ಬುಧವಾರ 29 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ನಿಮ್ಮ ಮೊದಲ ಗೆಲುವಿನ ನಂತರ ವಿಶ್ರಾಂತಿ ತೆಗೆದುಕೊಳ್ಳಬೇಡಿ. ಏಕೆಂದರೆ ನೀವು ಎರಡನೇ ಪ್ರಯತ್ನದಲ್ಲಿ ವಿಫಲರಾದರೆ ನಿಮ್ಮ ಮೊದಲ ಗೆಲುವು ಕೇವಲ ಅದೃಷ್ಟವೆಂದು ಹೀಯಾಳಿಸಲು ಬಹಳಷ್ಟು ತುಟಿಗಳು ಕಾಯುತ್ತಿರುತ್ತವೆ.

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಹಸಿರು ಹೊದಿಕೆಗೆ ಮೆಗಾಪ್ಲ್ಯಾನ್, ರಾಜ್ಯಾದ್ಯಂತ 11 ಕೋಟಿ ಸಸಿಗಳ ನಾಟಿ


## ■ ನಗರದಲ್ಲಿ ಕನಿಷ್ಠ 10 ಕೋಟಿ ಮರಗಳನ್ನು ಪೋಷಿಸುವ ಅಗತ್ಯ ಇದೆ: ಸಚಿವ ಈಶ್ವರ ಖಂಡ್ರೆ

• ಬೆಂಗಳೂರು

ಬೆಂಗಳೂರಿನಲ್ಲಿ ಹಸಿರು ಹೊದಿಕೆ ಕ್ಷೀಣಿಸುತ್ತಿದ್ದು, 1.40 ಕೋಟಿ ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲಿ ಕನಿಷ್ಠ 10 ಕೋಟಿ ಮರಗಳನ್ನು ಪೋಷಿಸುವ ಅಗತ್ಯವಿದೆ ಎಂದು ಅರಣ್ಯ, ಪರಿಸರ ಜಾಗೂ ಜೀವಿಶಾಸ್ತ್ರ ಸಚಿವ ಈಶ್ವರ ಬಿ ಖಂಡ್ರೆ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ವೈಜ್ಞಾನಿಕವಾಗಿ ಪರಿಸರ ಸಮತೋಲನ ಕಾಪಾಡಿಕೊಳ್ಳಲು ಶೇ. 33% ರಷ್ಟು ಹಸಿರು ಹೊದಿಕೆ ಇದ್ದಾಗ ಮಾತ್ರ ಆರೋಗ್ಯಕರ ನಗರವನ್ನು ಕಟ್ಟಲು ಸಾಧ್ಯ ಎಂದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಅಸರ್ ಸೋಷಿಯಲ್ ಇಂಪ್ಯಾಕ್ಟ್ ಅಡ್ವೈಸರ್ ಸಂಸ್ಥೆಯ ಸಹಯೋಗದಲ್ಲಿ ಮಂಗಳವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಬೆಂಗಳೂರಿನಲ್ಲಿ ತಾಪಮಾನ ವೈಪರೀತ್ಯ ಹಾಗೂ ಅದರ ಪರಿಣಾಮಗಳ ಕುರಿತು ಮಾಧ್ಯಮ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಒಬ್ಬ ಮನಷ್ಯನಿಗೆ ಉತ್ತಮ ಆಮ್ಲಜನಕ ದೊರಕಲು ಕನಿಷ್ಠ 7 ಮರಗಳು ಇರಬೇಕು ಎಂದು ವಿಜ್ಞಾನ ಪ್ರತಿಪಾದಿಸುತ್ತದೆ ಎಂದರು.

**ಗತವೈಭವದ ಮರುಸ್ಥಾಪನೆ:** ಕೆಂಪೇಗೌಡರು ನಿರ್ಮಿಸಿದ ಹಸಿರು ಬೆಂಗಳೂರನ್ನು ಮರಳಿ ಪಡೆಯಲು ಅರಣ್ಯ ಇಲಾಖೆ ಬದ್ಧವಾಗಿದೆ.





ನಗರದ ಸುತ್ತಮುತ್ತಲ ಹಸಿರು ಹೊದಿಕೆಯನ್ನು ಮರುಸ್ಥಾಪಿಸಲು ಮತ್ತು ಪರಿಸರ ಮಾಲಿನ್ಯ ತಡೆಗಟ್ಟಲು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.

**ಮಾಲಿನ್ಯ ಮತ್ತು ಕೆರೆಗಳ ಅವನತಿ:** ಜಲ ಮತ್ತು ವಾಯು ಮಾಲಿನ್ಯ ಉಂಟಾಗುತ್ತಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಸಂಚಾರ ದಟ್ಟಣೆ ಮತ್ತು ವಾಹನಗಳ ಕಾರ್ಬನ್ ಡೈಆಕ್ಸೈಡ್ ಹೊರಸೂಸುವಿಕೆಯಿಂದ ತಾಪಮಾನ ಏರುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆಯ ಸಾಧನೆಯನ್ನು ಹಂಚಿಕೊಂಡ ಸಚಿವರು, ಕಳೆದ ಮೂರು ವರ್ಷಗಳಲ್ಲಿ ರಾಜ್ಯದಾದ್ಯಂತ ಸುಮಾರು 11 ಕೋಟಿ ಸಸಿಗಳನ್ನು ನೆಡಲಾಗಿದೆ. ಇವುಗಳಲ್ಲಿ ಎಷ್ಟು ಸಸಿಗಳು ಬದುಕುಳಿದಿವೆ ಎಂಬುದರ ಬಗ್ಗೆ ವೈಜ್ಞಾನಿಕ ಸಮೀಕ್ಷೆ ನಡೆಸಿ, ಆ ವರದಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಅಪ್ಲೋಡ್ ಮಾಡಲು ಸೂಚನೆ ನೀಡಿದ್ದೇನೆ, ಎಂದು ಮಾಹಿತಿ ನೀಡಿದರು. ಬೆಂಗಳೂರಿನ 'ಶ್ವಾಸ ತಾಣ'ಗಳ ರಕ್ಷಣೆಗೆ ಅರಣ್ಯ ಇಲಾಖೆ ಮೆಗಾ ಪ್ಲಾನ್ ರೂಪಿಸಿದ್ದು, ನಗರದ ಆಯಕಟ್ಟಿನ ಪ್ರದೇಶಗಳಾದ ಕಾಡುಗೋಡಿ ಮತ್ತು ತುರಹಳ್ಳಿ ಭಾಗದಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಸುಮಾರು ರೂ.10,000 ಕೋಟಿ ಮೌಲ್ಯದ ಅರಣ್ಯ ಭೂಮಿಯನ್ನು ಮರುವಶಪಡಿಸಿಕೊಳ್ಳಲಾಗಿದೆ. ಸಿಲಿಕಾನ್ ಸಿಟಿಯಲ್ಲಿ ದಿನೇ ದಿನೇ ಕುಸಿಯುತ್ತಿರುವ ಹಸಿರು ಹೊದಿಕೆಯನ್ನು ಹೆಚ್ಚಿಸಲು ಮತ್ತು ಪರಿಸರ ಸಮತೋಲನ ಕಾಯ್ದುಕೊಳ್ಳಲು ಕರ್ನಾಟಕ ಅರಣ್ಯ ಇಲಾಖೆ ಐತಿಹಾಸಿಕ ಹೆಜ್ಜೆ ಇರಿಸಿದೆ.

### ಬೆಂಗಳೂರಿಗೆ ಸಿಗಲಿದೆ ಮತ್ತೊಂದು 'ಲಾಲ್ಬಾಗ್'

ನಗರದ ಹಸಿರು ವಿಸ್ತೀರ್ಣ ಹೆಚ್ಚಿಸುವ ಸಲುವಾಗಿ ಬೆಂಗಳೂರು ಉತ್ತರ ತಾಲ್ಲೂಕಿನ ಮಾದಪ್ಪನಹಳ್ಳಿಯ 153 ಎಕರೆ ಪ್ರದೇಶದಲ್ಲಿ 'ವಿಶ್ವಗುರು ಬಸವಣ್ಣನವರ ಬೃಹತ್ ಜೈವಿಕ ಉದ್ಯಾನವನ' ತಲೆ ಎತ್ತಲಿದೆ ಎಂದು ಹೇಳಿದರು. ಪರಿಸರ ಮಾಲಿನ್ಯ ನಿಯಂತ್ರಣಕ್ಕಾಗಿ EMPRI ಸಂಸ್ಥೆ ರೂಪಿಸಿರುವ 'ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ'ಗೆ ಸರ್ಕಾರದ ಒಪ್ಪಿಗೆ ಸಿಕ್ಕಿದೆ. ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಹವಾಮಾನ ವೈಪರೀತ್ಯ ಎದುರಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತರಬೇತಿ ಮತ್ತು ಅನುಷ್ಠಾನ ಪ್ರಕ್ರಿಯೆಗಳು ಶೀಘ್ರವೇ ಆರಂಭವಾಗಲಿವೆ ಎಂದು ತಿಳಿಸಿದರು.
ವೃಕ್ಷೋ ರಕ್ಷಿತಃ ರಕ್ಷಿತಃ ಎಂಬ ಧ್ಯೇಯದೊಂದಿಗೆ ಬೆಂಗಳೂರಿನ ಕೆರೆಗಳ ಪುನರ್ನಿರ್ಮಾಣ ಮತ್ತು ನಗರದ ಹಸಿರು ವಲಯವನ್ನು ವಿಸ್ತರಿಸುವುದೇ ನಮ್ಮ ಅಂತಿಮ ಗುರಿಯಾಗಿದೆ ಎಂದು ಅವರು ತಿಳಿಸಿದರು.ಇಂದಿನ ಕಾರ್ಯಾಗಾರದಲ್ಲಿ ವಿಷಯ ತಜ್ಞರು ಮಂಡಿಸುವ ವಿಷಯ ಹಾಗೂ ಮಾಧ್ಯಮ ಪ್ರತಿನಿಧಿಗಳು ಚರ್ಚಿಸುವ ವಿಷಯದ ಕುರಿತು ವಿಸ್ತೃತ ವರದಿ ಸಲ್ಲಿಸಿದಲ್ಲಿ ಅರಣ್ಯ ಇಲಾಖೆ ವತಿಯಿಂದ ಕ್ರಮವಹಿಸಲಾಗುವುದು ಎಂದರು.

## ಉಗ್ರರನ್ನು ಸಮರ್ಥನೆ ಮಾಡಿಕೊಳ್ಳುವವರು ಸಿಎಂ ಆಗಲು ಹೊರಟಿರುವುದು ದುರಂತ

• ಉದಯವಾಹಿನಿ, ಬೆಂಗಳೂರು

ನಾಲ್ಕು ವೋಟಿಗೋಸ್ಕರ ಉಗ್ರ ಚಟುವಟಿಕೆಯಲ್ಲಿ ತೊಡಗಿಕೊಂಡವರನ್ನು ಬ್ರದರ್ಸ್ ಎಂದು ಸಮರ್ಥನೆ ಮಾಡಿಕೊಳ್ಳುವ ಸ್ವಾರ್ಥಿಗಳು ನಾಡಿನ ಮುಖ್ಯಮಂತ್ರಿ ಆಗಲು ಹೊರಟಿರುವುದು ಕರ್ನಾಟಕದ ದುರಂತ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ. ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟವನ್ನು ಕೇವಲ 'ಡೈವರ್ಶನ್ ಪಾಲಿಟಿಕ್ಸ್' ಎಂದು ಲೇವಡಿ ಮಾಡಿ ಉಗ್ರರ ಪರ ನಿಂತಿದ್ದ ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ನಾಯಕರಿಗೆ ಈಗ ಸತ್ಯದ ದರ್ಶನವಾಗಿದೆ ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಉಗ್ರ ಶಾರೀಕ್‌ನ ಕೃತ್ಯ ಸಾಬೀತಾಗಿದ್ದು, ಎನ್‌ಐಎ ನ್ಯಾಯಾಲಯ ಆತನಿಗೆ 10 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ. ರಾಷ್ಟ್ರೀಯ ಭದ್ರತೆಯಂತಹ ಗಂಭೀರ ವಿಚಾರದಲ್ಲೂ ತುಷ್ಟೀಕರಣ ಮತ್ತು ಓಲೈಕೆ ರಾಜಕಾರಣ ಮಾಡುವ ಕಾಂಗ್ರೆಸ್‌ನ ನೈಜ ಮುಖವಾಡ ಕಳಚಿದೆ ಎಂದು ಅವರು ಹೇಳಿದ್ದಾರೆ. 'ಕಾಂಗ್ರೆಸ್‌ಗೆ ದೇಶದ ಭದ್ರತೆಗಿಂತ ವೋಟ್ ಬ್ಯಾಂಕ್ ರಾಜಕಾರಣವೇ ಮುಖ್ಯವಾಗಿದೆ. ಕಾಂಗ್ರೆಸ್ ಇನ್ನಾದರೂ ಮತಾಂಧರನ್ನು ತಮ್ಮ ಬ್ರದರ್ಸ್ ಎಂದು ಸಮರ್ಥನೆ ಮಾಡಿಕೊಳ್ಳುವುದನ್ನು ಬಿಡಬೇಕಿದೆ' ಎಂದೂ ತಿಳಿಸಿದ್ದಾರೆ.

## ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಮುಂದುವರಿಯಲಿ

• ಉದಯವಾಹಿನಿ, ರಾಯಚೂರು

'ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರು ಮುಂದುವರಿಯಬೇಕೆಂಬ ಅಭಿಪ್ರಾಯವನ್ನು ನಾವೆಲ್ಲ ಹೈಕಮಾಂಡ್‌ಗೆ ಹೇಳಿದ್ದೇವೆ' ಎಂದು ಶಾಸಕ ಕೆ.ಎನ್. ರಾಜಣ್ಣ ಹೇಳಿದರು. 'ಸಿದ್ದರಾಮಯ್ಯ ಅವರು ಅಧಿಕಾರದಲ್ಲಿ ಮುಂದುವರಿಯಲು ಸಿದ್ದರಾಗಿದ್ದಾರೆ. ಪದತ್ಯಾಗಕ್ಕೂ ಸಿದ್ದರಾಗಿದ್ದಾರೆ. ಹೈಕಮಾಂಡ್ ಏನು ಹೇಳುತ್ತದೆಯೊ ಅದಕ್ಕೆ ಬದ್ದರಾಗಿದ್ದಾರೆ' ಎಂದರು. 'ಆದರೆ, ಇದು ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರ ಅಲ್ಲ. ಪಕ್ಷದ ಭವಿಷ್ಯ ಇದರಲ್ಲಿ ಅಡಗಿದೆ. ಹೀಗಾಗಿ, ಸೂಕ್ತ ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳುವ ವಿಶ್ವಾಸವಿದೆ' ಎಂದರು. 'ಹೈಕಮಾಂಡ್ ಗೊಂದಲಗಳನ್ನು ಬಗೆಹರಿಸಬೇಕು. ಗೊಂದಲ ಬೇಗ ಬಗೆಹರಿಸಿದಷ್ಟು ರಾಜ್ಯಕ್ಕೆ ಒಳ್ಳೆಯದು. ಗೊಂದಲ ಮುಂದುವರಿಯಲು ಹೈಕಮಾಂಡ್ ಅವಕಾಶ ನೀಡಬಾರದು. ಸಿದ್ದರಾಮಯ್ಯ ಅವರ ಜೊತೆಗೆ ಚರ್ಚೆ ಮಾಡಿದಾಗಲೂ ಅವರು ಮುಕ್ತ ಮನಸ್ಸಿನಲ್ಲಿದ್ದಾರೆ. ರಾಹುಲ್ ಗಾಂಧಿಯ ಸೂಚನೆ ಪಾಲಿಸುವುದಾಗಿ ಹೇಳಿದ್ದಾರೆ. ಆಗ ನಿಮ್ಮೆಲ್ಲರ ಸಹಕಾರ ಇರಬೇಕು ಎಂಬುದು ಅವರ ಅಭಿಮತ. ರಾಹುಲ್ ಗಾಂಧಿ ಏನು ತೀರ್ಮಾನ ಮಾಡ್ತಾರೊ ಅದರಂತೆ ನಡೆಯೋಣ ಎಂದಿದ್ದಾರೆ. ಅಧಿಕಾರ ಶಾಶ್ವತವಲ್ಲ, ಅಧಿಕಾರ ಕಳೆದುಕೊಂಡವರು ಗಳಿಸುತ್ತಾರೆ. ಸಿ.ಎಂ ಮನಸ್ಥಿತಿ ರಾಹುಲ್ ನಿರ್ದೇಶನದಂತೆ ಹೋಗಬೇಕು ಎಂಬುದಾಗಿದೆ' ಎಂದರು.

## ಬಾಲಕಿ ಮೇಲೆ ಅತ್ಯಾಚಾರ ಆರೋಪ ಸ್ವಾಮೀಜಿ ವಿರುದ್ಧ ಪೋಕ್ಸ್ ರದ್ದು

• ಉದಯವಾಹಿನಿ, ಬೆಂಗಳೂರು

ಬಾಲಕಿ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಆರೋಪಿಸಲಾದ ಪ್ರಕರಣದಲ್ಲಿ, ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿ ಹಂಗರಹಳ್ಳಿಯ ಶ್ರೀವಿದ್ಯಾ ಚೌಡೇಶ್ವರಿ ದೇವಸ್ಥಾನದ (ಶ್ರೀ ಮಠ) ಬಾಲ ಮಂಜುನಾಥ ಸ್ವಾಮೀಜಿ (36) ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ. ಈ ಕುರಿತಂತೆ ಬಾಲ ಮಂಜುನಾಥ ಸ್ವಾಮೀಜಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಆದೇಶಿಸಿದೆ. 'ಸ್ವಾಮೀಜಿ ವಿರುದ್ಧ ಹುಲಿಯೂರು ದುರ್ಗ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಆಧಾರರಹಿತ ಮತ್ತು ಕಾನೂನುಬಾಹಿರವಾಗಿದೆ. ಮೇಲ್ನೋಟಕ್ಕೆ ಇದು ದುರುದ್ದೇಶಪೂರಿತ ಮತ್ತು ಸುಳ್ಳು ಅಂಶಗಳಿಂದ ಕೂಡಿದೆ. ಸ್ವಾಮೀಜಿಯ ವ್ಯಕ್ತಿತ್ವಕ್ಕೆ ಮತ್ತು ಕೀರ್ತಿಗೆ ಧಕ್ಕೆ ತರುವಂತಿದೆ' ಎಂದು ಸ್ವಾಮೀಜಿ ಪರ ಹೈಕೋರ್ಟ್ ವಕೀಲೆ ಲೀಲಾ ಪಿ.ದೇವಾಡಿಗ ಅವರ ವಾದಾಂಶಗಳನ್ನು ನ್ಯಾಯಪೀಠ ಮನ್ನಿಸಿದೆ.

# ಬಣಗಳ ಬಡಿದಾಟ ಪಟ್ಟದಾಟ

## ಆತಂಕಕ್ಕೆ ಒಳಗಾದ್ರಾ ಅಹಿಂದ ಸಚಿವರು?



## ಕೆಎನ್ ರಾಜಣ್ಣ ಸ್ಫೋಟಕ ಸುಳಿವು





### ಮತ್ತೆ ತಾರಕಕ್ಕೇರಿದ ಸಿಎಂ ಕುರ್ಚಿಕದನ

## ಸಿದ್ದರಾಮಯ್ಯ ಅಧಿಕಾರ ಮುಂದುವರಿಕೆಗೂ ಜೈ ಪದತ್ಯಾಗಕ್ಕೂ ಸೈ!

### ಬದಲಾವಣೆಯತ್ತ ಡಿಕೆಶಿ ಬಣ ವಿಶ್ವಾಸ

ಇತ್ತ ಡಿಸಿಎಂ ಡಿ.ಕೆ.ಶಿವಕುಮಾರ್ ಬಣ ಮೇ ಎರಡನೇ ವಾರದಲ್ಲಿ ಬದಲಾವಣೆಯಾಗುವ ನಿರೀಕ್ಷೆಯಲ್ಲಿದ್ದಾರೆ. ಮೇ 15ರಂದು ಡಿಕೆಶಿ ಹುಟ್ಟುಹಬ್ಬದಂದು ಹೈಕಮಾಂಡ್‌ನಿಂದ ಗುಡ್ ನ್ಯೂಸ್ ಬರುವ ವಿಶ್ವಾಸದಲ್ಲಿ ಡಿಕೆಶಿ ಬಣದವರದ್ದಾಗಿದೆ. ಈಗಾಗಲೇ ಡಾ.ರಂಗನಾಥ್, ಇಕ್ಬಾಲ್ ಹುಸೇನ್ ಮೇ ಎರಡನೇ ವಾರದಲ್ಲಿ ನಾಯಕತ್ವ ಬದಲಾವಣೆಯ ಗುಡ್‌ನ್ಯೂಸ್ ಬರುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇತ್ತ ಡಿಕೆಶಿ ಆಪ್ತ ಬಣ ಮೇ ಡೆಡ್ ಲೈನ್ ನತ್ತ ಹೆಚ್ಚಿನ ನಿರೀಕ್ಷೆಯನ್ನು ಇಟ್ಟಿದ್ದಾರೆ.

ಕಳೆದ ವಾರ ಡಿಕೆ ಬ್ರದರ್ಸ್ ದೆಹಲಿ ಭೇಟಿ ಬಳಿಕ ನಾಯಕತ್ವ ಬದಲಾವಣೆ ಬಗ್ಗೆ ಡಿಕೆಶಿ ಆಪ್ತ ಬಣ ಹೆಚ್ಚಿನ ವಿಶ್ವಾಸ ವ್ಯಕ್ತಪಡಿಸುತ್ತಿದೆ. ದೆಹಲಿ ಹೈಕಮಾಂಡ್ ಭೇಟಿ ಬಳಿಕ ಮಾತನಾಡಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್, ಯಾವಾಗ ಏನು ಆಗಬೇಕು ಅದು ಆಗುತ್ತದೆ. ಸಮಯ ಬಂದಾಗ ತಾನಾಗಿಯೇ ಗೊತ್ತಾಗಲಿದೆ. ಏನೇನು ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ. ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡಲಿದೆ.

ಇತ್ತ ದೆಹಲಿಗೆ ಭೇಟಿ ನೀಡಿದ ಸಚಿವರು ಹೈಕಮಾಂಡ್ ಬಳಿ ಮುಖ್ಯವಾಗಿ ನಾಯಕತ್ವ ಬದಲಾವಣೆ ಗೊಂದಲಕ್ಕೆ ಆದಷ್ಟು ತೆರೆ ಎಳೆಯುವಂತೆ ಒತ್ತಾಯಿಸಿದ್ದಾರೆ. ನಾಯಕತ್ವ ಬದಲಾವಣೆ ತಿಕ್ಕಾಟದಿಂದ ಪಕ್ಷದಲ್ಲಿ ಗೊಂದಲ ಉಂಟಾಗುತ್ತಿದ್ದು, ಆಡಳಿತ ಹಾಗೂ ರಾಜ್ಯದ ಜನರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಹಾಗಾಗಿ ಕೂಡಲೇ ಈ ಗೊಂದಲಕ್ಕೆ ತೆರೆ ಎಳೆಯಬೇಕು ಎಂದು ಬಲವಾಗಿ ಹೈಕಮಾಂಡ್ ನಾಯಕರನ್ನು ಒತ್ತಾಯಿಸಿದ್ದಾರೆ.ಸಚಿವ ಕೆ.ಹೆಚ್.ಮುನಿಯಪ್ಪ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಭೇಟಿ ಮಾಡಿ ನಾಯಕತ್ವ ಬದಲಾವಣೆ ಗೊಂದಲಕ್ಕೆ ಆದಷ್ಟು ಬೇಗ ಇತಿಶ್ರೀ ಹಾಡುವಂತೆ ಮನವಿ ಮಾಡಿದ್ದಾರೆ.

• ಬೆಂಗಳೂರು

ಸಿಎಂ ಕುರ್ಚಿ ಕದನ ದಿನೇದಿನೇ ತಾರಕಕ್ಕೇರುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರ ಬಣಗಳ ನಡುವಿನ ಬಡಿದಾಟ ತೀವ್ರಗೊಂಡಿದೆ. ಮುಖ್ಯಮಂತ್ರಿ ಗದ್ದುಗೆ ಪಡೆಯಲು ಡಿಸಿಎಂ ಡಿ.ಕೆ.ಶಿವಕುಮಾರ್ ರವರು ತಮ ಕಸರತ್ತನ್ನು ಮುಂದುವರೆಸಿದ್ದಾರೆ. ಸಿಎಂ ಸ್ಥಾನದಲ್ಲಿ ಮುಂದುವರೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಆಪ್ತರ ಮೂಲಕ ತಂತ್ರ ಹೆಣೆಯುತ್ತಿದ್ದಾರೆ.

ತಂತ್ರ-ಪ್ರತಿತಂತ್ರಗಳ ಮೇಲಾಟಗಳು ಜೋರಾಗಿವೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ನಂತರ ರಾಜ್ಯ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳು ನಡೆಯುವ ಸಾಧ್ಯತೆ ಹೆಚ್ಚಾಗಿದೆ. ಪಂಚ ರಾಜ್ಯಗಳ ಚುನಾವಣೆ, ರಾಜ್ಯದಲ್ಲಿ ಉಪಸಮರದ ಹಿನ್ನೆಲೆ ಕೆಲ ದಿನಗಳ ಕಾಲ ಸೈಲೆಂಟ್ ಆಗಿದ್ದ ನಾಯಕತ್ವ ಬದಲಾವಣೆಯ ಚರ್ಚೆ ಈಗ ಮತ್ತೆ ಮುನ್ನೆಲೆಗೆ ಬಂದಿದೆ.

ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಅಂದರೆ ಮೇ ಮೊದಲ ವಾರದ ಬಳಿಕ ರಾಜ್ಯದ ಪವರ್ ಫೈಟ್‌ಗೆ ಹೊಸ ಸಂಚಲನೆ ಸಿಗಲಿದೆ ಎಂಬ ಮುನ್ಸೂಚನೆ ಸಿಗುತ್ತಿದೆ.

ಒಂದೆಡೆ ಡಿಸಿಎಂ ಡಿ.ಕೆ.ಶಿವಕುಮಾರ್ ಮೇ.15ರ ಹುಟ್ಟಹಬ್ಬದಂದು ಗುಡ್‌ನ್ಯೂಸ್ ಸಿಗಲಿದೆ ಎಂಬ ಅವರ ಆಪ್ತ ಶಾಸಕರ ಹೇಳಿಕೆಗಳು ಪಟ್ಟದಾಟ ಚುರುಕು ಪಡೆಯುವ ಲಕ್ಷಣಗಳು ಕಾಣುತ್ತಿವೆ. ಇನ್ನೊಂದೆಡೆ ಮೇ ತಿಂಗಳಾಂತ್ಯಕ್ಕೆ ಸಿದ್ದರಾಮಯ್ಯರ ಅಧಿಕಾರಕ್ಕೆ 3 ವರ್ಷ ತುಂಬಲಿದೆ. ಇದರ ಮಧ್ಯೆ ನಾಯಕತ್ವ ಬದಲಾವಣೆಯ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಕಳೆದ 10 ದಿನಗಳಲ್ಲಿ ನಡೆಯುತ್ತಿರುವ ಕಾಂಗ್ರೆಸ್‌ನಲ್ಲಿನ ಬೆಳವಣಿಗೆಗಳು, ನಾಯಕರ ಹೇಳಿಕೆಗಳು ಪವರ್ ಫೈಟ್ ಕುತೂಹಲವನ್ನು ಕೆರಳಿಸಿದೆ.

### ಒಂದು ನಿರ್ಧಾರಕ್ಕೆ ಬರುವಂತೆ ಒತ್ತಾಯ

ಸಿಎಂ ಆಪ್ತ ಸಚಿವರಿಂದ ದಿಢೀರ್ ದೆಹಲಿ ಭೇಟಿ: ಕರ್ನಾಟಕದಲ್ಲಿ ಸಚಿವ ಸಂಪುಟ ಪುನರ್‌ರಚನೆ ಕುರಿತು ಚರ್ಚೆಗಳು ತೀವ್ರಗೊಂಡಿರುವ ನಡುವೆ ಸಿಎಂ ಆಪ್ತ ಬಣದ ಸಚಿವರು ಸೇರಿದಂತೆ ಕೈ ನಾಯಕರು ದಿಢೀರ್ ದೆಹಲಿಗೆ ತೆರಳಿ ಹೈ ಕಮಾಂಡ್ ಭೇಟಿ ಮಾಡುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ. ಸಚಿವರಾದ ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ದೆಹಲಿ ಭೇಟಿ ನೀಡಿರುವುದು ರಾಜಕೀಯ ಬದಲಾವಣೆ ಚರ್ಚೆಗೆ ಮತ್ತಷ್ಟು ಇಂಬು ನೀಡಿದೆ. ಇತ್ತ ತಟಸ್ಥ ಬಣದ ಸಚಿವ ಕೆ.ಹೆಚ್.ಮುನಿಯಪ್ಪ ಕೂಡ ದೆಹಲಿ ಭೇಟಿ ನೀಡಿರುವುದು ಒಂದಷ್ಟು ರಾಜಕೀಯ ವ್ಯಾಖ್ಯಾನಗಳನ್ನು ಸೃಷ್ಟಿಸಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಇತ್ತೀಚಿನ ದೆಹಲಿ ಭೇಟಿಯ ಬಳಿಕ ಸಿಎಂ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರು ದೆಹಲಿ ಭೇಟಿ ನೀಡಿರುವುದು ರಾಜಕೀಯ ವಲಯದಲ್ಲಿ ಹೆಚ್ಚಿನ ಕುತೂಹಲಕ್ಕೆ ಕಾರಣವಾಗಿದೆ. ಡಿಕೆ ಬ್ರದರ್ಸ್ ಕಳೆದ ವಾರ ದೆಹಲಿಗೆ ಭೇಟಿ ನೀಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರನ್ನು ಭೇಟಿಯಾಗಿ ನಾಯಕತ್ವ ಬದಲಾವಣೆ ಬಗ್ಗೆ ಬಲವಾದ ಬೇಡಿಕೆ ಇಟ್ಟಿದ್ದಾರೆ ಎಂಬ ಮಾತುಗಳು ಕೇಳಿಬಂದಿತ್ತು. ಬೆಂಗಳೂರಿಗೆ ವಾಪಸಾದ ಬಳಿಕ ಡಿಸಿಎಂ ಡಿಕೆಶಿ ನೀಡಿದ ಹೇಳಿಕೆ ಪವರ್ ಫೈಟ್ ಕ್ಲೈಮ್ಯಾಕ್ಸ್ ಹಂತಕ್ಕೆ ಬಂತಾ ಎಂಬ ಪ್ರಶ್ನೆಗಳನ್ನು ಹುಟ್ಟು ಹಾಕಿತು.

ಇದರ ಬೆನ್ನಲ್ಲೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರು ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸುರ್ಜೇವಾಲ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿರುವುದು ಕುತೂಹಲ ಕೆರಳಿಸಿದೆ.



ಭೇಟಿ ವೇಳೆ ಸತೀಶ್ ಜಾರಕಿಹೊಳಿ ಅಲ್ಪಸಂಖ್ಯಾತ ನಾಯಕರ ವಿರುದ್ಧ ತೆಗೆದುಕೊಂಡಿರುವ ಕ್ರಮದ ಬಗ್ಗೆ ತಮ್ಮ ಅಸಮಾಧಾನ ಹೊರಹಾಕಿದ್ದಾರೆ ಎನ್ನಲಾಗಿದೆ. ಇದರ ಜೊತೆಗೆ ನಾಯಕತ್ವ ಬದಲಾವಣೆ ಸಂಬಂಧ ಇರುವ ಗೊಂದಲ ನಿವಾರಿಸುವಂತೆಯೂ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ. ಹಾಗೆಯೇ ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚೆ ನಡೆದಿರುವ ಮಾಹಿತಿ ಲಭ್ಯವಾಗಿದೆ.

### ದೆಹಲಿಗೆ ಹಾರಿದ ಸತೀಶ್-ಮಹದೇವಪ್ಪ

ಸಿಎಂ ಮೌನದಿಂದ ಕಂಗೆಟ್ಟ ಸತೀಶ್ ಜಾರಕಿಹೊಳಿ ಮತ್ತು ಮಹದೇವಪ್ಪ ತುರ್ತಾಗಿ ದೆಹಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸುರ್ಜೇವಾಲ ಅವರನ್ನು ಭೇಟಿಯಾಗಿದ್ದಾರೆ. ಒಂದು ವೇಳೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾದರೆ ಅಹಿಂದ ನಾಯಕರ ಭವಿಷ್ಯವೇನು ತಮ್ಮ ಸ್ಥಾನಮಾನಗಳು ರಕ್ಷಣೆಯಾಗುತ್ತವೆಯೇ ಎಂಬ ಬಗ್ಗೆ ಸ್ಪಷ್ಟತೆ ಕೇಳಿದ್ದಾರೆ ಎನ್ನಲಾಗಿದೆ. ವಿಶೇಷವೆಂದರೆ, ಸತೀಶ್ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದು, ಡಿಕೆಶಿಗೆ ನೀಡಿದಂತೆ ತಮಗೂ ಅಧಿಕಾರ ನೀಡಬೇಕು ಎಂಬ ಬೇಡಿಕೆಯನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ ಎನ್ನಲಾಗಿದೆ. ಏತನ್ಮಧ್ಯೆ, ಕಾಂಗ್ರೆಸ್ ಹೈಕಮಾಂಡ್‌ನಿಂದ ಡಿಕೆ ಶಿವಕುಮಾರ್‌ಗೆ ಬಿಗ್ ಬರ್ತ್‌ಡೇ ಗಿಫ್ಟ್ ಸಿಗಲಿದೆ ಎಂಬ ಊಹಾಪೋಹಗಳ ಬಗ್ಗೆ ಗೃಹ ಸಚಿವ ಜಿ ಪರಮೇಶ್ವರ ನೀಡಿರುವ ಪ್ರತಿಕ್ರಿಯೆ ಕೂಡ ಕುತೂಹಲಕ್ಕೆ ಕಾರಣವಾಗಿದೆ. ಇಷ್ಟು ದಿನ ''ಸಿಎಂ ಬದಲಾವಣೆ ಇಲ್ಲ'' ಎನ್ನುತ್ತಿದ್ದ ಪರಮೇಶ್ವರ್, ಈಗ ''ಹೈಕಮಾಂಡ್ ನಿರ್ಧಾರವೇ ಅಂತಿಮ'' ಎಂದಿರುವುದು ಗೊಂದಲವನ್ನು ಮತ್ತಷ್ಟು ಹೆಚ್ಚಿಸಿದೆ.

### ಸಿಎಂ ಸಿದ್ದರಾಮಯ್ಯ ಮೌನದ ರಹಸ್ಯವೇನು?

ಇತ್ತೀಚೆಗೆ ಸಚಿವ ಹೆಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಡಾ. ಜಿ. ಪರಮೇಶ್ವರ್, ಜಮೀರ್ ಅಹ್ಮದ್ ಖಾನ್ ಮತ್ತು ಕೆ.ಎನ್. ರಾಜಣ್ಣ ಸೇರಿದಂತೆ ಪ್ರಮುಖ ಅಹಿಂದ ನಾಯಕರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಿದ್ದರು. ರಾಜ್ಯ ರಾಜಕಾರಣದ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ಈ ನಾಯಕರು ಪ್ರಯತ್ನಿಸಿದರೂ, ಸಿಎಂ ಸಿದ್ದರಾಮಯ್ಯ ಮಾತ್ರ ಮನಬಿಚ್ಚಿ ಮಾತನಾಡದೆ ಮೌನಕ್ಕೆ ಶರಣಾಗಿದ್ದರು. ಸೀಕ್ರೆಟ್ ಮೀಟಿಂಗ್‌ನಲ್ಲೂ ಸಿಎಂ ಕಡೆಯಿಂದ ಯಾವುದೇ ಭರವಸೆ ಸಿಗದ ಕಾರಣ, ಸಿದ್ದರಾಮಯ್ಯ ಬಣದ ಸಚಿವರಿಗೆ ಒಳಗಿಂದೊಳಗೆ ಏನೋ ನಡೆಯುತ್ತಿದೆ ಎಂಬ ಅನುಮಾನ ಶುರುವಾಗಿದೆ.



# ರಾಜಕೀಯ ದುರುದ್ದೇಶಕ್ಕಾಗಿ ನನ್ನ ತಂದೆಯ ಆರೋಗ್ಯ ಸ್ಥಿತಿಯನ್ನು ಬಳಕೆ ಮಾಡದಿರಿ!

## ■ ಬಿಜೆಪಿ ಸರ್ಕಾರದ ಆಡಳಿತ ವಿರೋಧಿ ಅಲೆಯೇ ನನ್ನ ಗೆಲುವಿಗೆ ಶ್ರೀ ರಕ್ಷೆ– ಡಿ.ಸುಧಾಕರ್

• ಉದಯವಾಹಿನಿ, ಬೆಂಗಳೂರು

ರಾಜಕೀಯ ದುರುದ್ದೇಶಕ್ಕಾಗಿ ನನ್ನ ತಂದೆಯ ಆರೋಗ್ಯ ಸ್ಥಿತಿಯನ್ನು ಬಳಕೆ ಮಾಡದಿರಿ ಎಂದು ಸಚಿವ ಡಿ ಸುಧಾಕರ್ ಅವರ ಪುತ್ರ ಸುಹಾ ಸುಧಾಕರ್ ಮನವಿ ಮಾಡಿದ್ದಾರೆ. ಸುಧಾಕರ್ ಆರೋಗ್ಯ ಸ್ಥಿತಿಯ ಬಗ್ಗೆ ಉಲ್ಲೇಖಿಸುತ್ತಾ ಹೆಬ್ಬೆಟ್ಟಿಗೋಸ್ಕರ ಮುಚ್ಚಿಡಲಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಆರೋಪ ಮಾಡಿದ್ದರು.

ಇದು ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಎಚ್‌ಡಿಕೆಗೆ ಕೊಟ್ಟ ಡಿ ಸುಧಾಕರ್ ಪುತ್ರ, ಕೌಂಟರ್ ನೀಡಿದ್ದಾರೆ. ಈ ಕುರಿತಾಗಿ ಅವರು ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹಂಚಿಕೊಂಡಿದ್ದಾರೆ. ಡಿ ಸುಧಾಕರ್ ಅವರ ಫೇಕ್ ಬುಕ್ ಖಾತೆಯಲ್ಲೇ ಅವರು ವಿಡಿಯೋ ಹಂಚಿಕೊಂಡಿದ್ದಾರೆ.



ವಿಡಿಯೋದಲ್ಲಿ ಸಚಿವ ಸುಧಾಕರ್ ಅವರ ಆರೋಗ್ಯ ಸ್ಥಿತಿಯ ಬಗ್ಗೆ ಅವರು ಮಾಹಿತಿ ನೀಡಿದ್ದಾರೆ. ಅಲ್ಲದೆ, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ.

**ಸುಧಾಕರ್ ಪುತ್ರ, ಹೇಳಿದ್ದೇನು?**

ಮಾರ್ಚ್ 26 ರಂದು ಮೊಣಕಾಲು ಶಸ್ತ್ರಚಿಕಿತ್ಸೆಗಾಗಿ ಡಿ ಸುಧಾಕರ್ ಅವರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲು ಆಗಿದ್ದರು. 3 ದಿನಗಳ ಬಳಿಕ ಶ್ವಾಸಕೋಶದಲ್ಲಿ ಸಮಸ್ಯೆ ಉಂಟಾಗಿತ್ತು. ಬಳಿಕ ಮತ್ತೆ ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಾರೆ. 22 ದಿನಗಳ ಕಾಲ ಮಣಿಪಾಲ್ ಆಸ್ಪತ್ರೆಯಲ್ಲಿ ಇರುತ್ತಾರೆ. ಇದಾದ ಬಳಿಕ ಬೆಂಗಳೂರಿನ ಕಿಮ್ಸ್‌ಗೆ ದಾಖಲು ಮಾಡುತ್ತೇವೆ. ಇದೀಗ ಕಿಮ್ಸ್‌ನಲ್ಲಿ ಅವರು ಚಿಕತ್ಸೆ ಪಡೆದುಕೊಳ್ಳುತ್ತಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಆದರೆ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು, ತಂದೆಯ ಅನಾರೋಗ್ಯವನ್ನು ರಾಜಕೀಯ ಉದ್ದೇಶಕ್ಕಾಗಿ ಬಳಕೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ತಂದೆಯ ಆರೋಗ್ಯ ವಿಚಾರವನ್ನು ಮುಂದಿಟ್ಟುಮಕೊಂಡು ಹೆಬ್ಬೆಟ್ಟು ವಿಚಾರ ಪ್ರಸ್ತಾಪಿಸಿ ರಾಜಕೀಯಕ್ಕೆ ಬಳಕೆ ಮಾಡಲಾಗಿದೆ. ಇದು ನಮ್ಮ ಕುಟುಂಬಕ್ಕೆ ಬೇಸರ ಉಂಟು ಮಾಡಿದೆ.

ಈಗಾಗಲೇ ಸಿಎಂ ಸಿದ್ದರಾಮಯ್ಯ, ಡಿಕೆಶಿ ಆಸ್ಪತ್ರೆಗೆ ಬಂದಿದ್ದಾರೆ. ಹಾಗೂ ತಂದೆಯ ಆರೋಗ್ಯ ವಿಚಾರಿಸಿದ್ದಾರೆ. ಸಚಿವರು, ಶಾಸಕರು ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ಡಿ ಸುಧಾಕರ್ ಅವರು ಆದಷ್ಟು ಬೇಗ ಗುಣಮುಖವಾಗಿ ಬರುತ್ತಾರೆ ಎಂಬ ನಂಬಿಕೆ ಇದೆ ಎಂದು ವಿಡಿಯೋದಲ್ಲಿ ಹೇಳಿಕೊಂಡಿದ್ದಾರೆ.



### ಏನಂದಿದ್ದರು ಎಚ್‌ಡಿಕೆ?

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಚಿವ ಸುಧಾಕರ್ ಅವರ ಆರೋಗ್ಯದ ಬಗ್ಗೆ ರಾಜ್ಯ ಸರ್ಕಾರ ಸರಿಯಾದ ಮಾಹಿತಿ ನೀಡಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಒತ್ತಾಯಿಸಿದ್ದರು. ಸುಧಾಕರ್ ಸಾವು ಬದುಕಿನ ಬಗ್ಗೆ ಹೋರಾಟ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಜನರು ಬೇರೆ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಒಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು ಎಂದಿದ್ದರು. ಅಲ್ಲದೆ, ಆ ವ್ಯಕ್ತಿ ಎಷ್ಟು ನೋವು ಅನುಭವಿಸುತ್ತಿದ್ದಾರೆ, ಯಾವ ಕಾರಣಕ್ಕೆ ಕೆಲ ವಿಷಯಗಳನ್ನು ಮುಚ್ಚಿಟ್ಟಿದ್ದಾರೆ? ಅವರಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಎಲ್ಲಾ ವಿಷಯಗಳನ್ನು ಮುಚ್ಚಿಡಲಾಗಿದೆಯೇ? ಎಂಬುದರ ಬಗ್ಗೆ ರಾಜ್ಯ ಸರ್ಕಾರ ಹೇಳಬೇಕಾಗುತ್ತದೆ ಎಂದು ಎಚ್‌ಡಿಕೆ ಆಗ್ರಹಿಸಿದ್ದರು.

| ಈ ದಿನದ ದರ | ಪೆಟ್ರೋಲ್: 102.92 ₹/L | ಡೀಸೆಲ್ : 91.62 ₹/L | ಬಂಗಾರ: ₹15,093/Gram24ct ₹13,835/Gram22ct | ಬೆಳ್ಳಿ: ₹260.00/Gram |
|---|---|---|---|---|

## ವೀಣಾ ವಾದನ ಕಾರ್ಯಕ್ರಮ



• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆದೇಶದಂತೆ ಬಸವನಗುಡಿಯಲ್ಲಿರುವ ಶ್ರೀ ದಿಗ್ವಿಜಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರೀ ನರಸಿಂಹ ಜಯಂತ್ಯೋತ್ಸವ ಪ್ರಯುಕ್ತ ಏಪ್ರಿಲ್ 29, ಬುಧವಾರ ಸಂಜೆ 6-30ಕ್ಕೆ ಕು|| ಸ್ಫೂರ್ತಿ ಗುರುಪ್ರಸಾದ್ ಮತ್ತು ಸಂಗಡಿಗರಿಂದ ವೀಣಾ ವಾದನ ಕಾರ್ಯಕ್ರಮ. ಸಹವಾದ್ಯ ; ಶ್ರೀ ಗುರುಮೂರ್ತಿ (ಮೃದಂಗ), ಶ್ರೀ ವೆಂಕಟೇಶ ಪುರೋಹಿತ್ (ತಾಳ).

**ಸ್ಥಳ:** ಶ್ರೀ ದಿಗ್ವಿಜಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಉತ್ತರಾದಿ ಮಠ, ನ್ಯಾಷನಲ್ ಕಾಲೇಜಿನ ಎದುರು, ಬಸವನಗುಡಿ, ಬೆಂಗಳೂರು-560004

## ಬೌದ್ಧ ಧರ್ಮ ಒಪ್ಪಿಕೊಳ್ಳಲು ಹಿಂಜರಿಕೆ ಏಕೆ: ಸಾಹಿತಿ

• ಉದಯವಾಹಿನಿ, ಬೆಂಗಳೂರು

'ನಮ್ಮ ಜನ ಬೌದ್ಧ ಧರ್ಮವನ್ನು ಒಪ್ಪಿಕೊಳ್ಳುವುದಕ್ಕೆ ಯಾಕೆ ಹಿಂದೆ ಮುಂದೆ ನೋಡುತ್ತಿದ್ದಾರೆ' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಪ್ರಶ್ನಿಸಿದರು. ವಿಶ್ವ ಬೌದ್ಧ ಮಹಾಸಮ್ಮೇಳನ ಸಮಿತಿ, ಉಪಾಸಿಕ ಅಂಡ್ ಉಪಾಸಕ ಚಾರಿಟಬಲ್ ಟ್ರಸ್ಟ್, ಇಂಟರ್ ನ್ಯಾಷನಲ್ ಬುದ್ಧಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್ ಹಾಗೂ ಚಾಮರಾಜನಗರದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಸೋಮವಾರ ನಡೆದ ವಿಶ್ವ ಬೌದ್ಧ ಮಹಾಸಮ್ಮೇಳನದಲ್ಲಿ ಅವರು ಮಾತನಾಡಿದರು. 'ಬೌದ್ಧ ಧರ್ಮ ವೈಚಾರಿಕ ಹಾಗೂ ವೈಜ್ಞಾನಿಕವಾಗಿದೆ. ಇದು ನಿಮ್ಮ ಜೀವನಮಟ್ಟವನ್ನು ಸುಧಾರಿಸುತ್ತದೆ. ಈ ಧರ್ಮ ನೈತಿಕವಾಗಿ ಒಳ್ಳೆಯ ನೆಲಗಟ್ಟು ಹಾಕಿಕೊಡುತ್ತದೆ. ಆದ್ದರಿಂದ ಈ ಧರ್ಮವನ್ನು ಅನುಸರಿಸಬೇಕು' ಎಂದರು.

ಚಾಮರಾಜನಗರದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರದ ಮುಖ್ಯಸ್ಥ ಭಂತೆ ಬೋಧಿದತ್ತ ಥೇರೋ ಮಾತನಾಡಿ, 'ಜಾತಿಯನ್ನು ಹಾಗೂ ಧರ್ಮವನ್ನು ಮುಕ್ತಗೊಳಿಸುವ ಸಮಾಜ ನಿರ್ಮಿಸುವುದೇ ಪಂಚಶೀಲ ಪಾದಯಾತ್ರೆಯ ಉದ್ದೇಶವಾಗಿದೆ. ನಳಂದ ವಿಶ್ವವಿದ್ಯಾಲಯದ ಮಾದರಿಯಲ್ಲಿಯೇ ಚಾಮರಾಜನಗರದ ಪಂಚಶೀಲ ಬೆಟ್ಟದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ' ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, 'ನಮ್ಮ ಸಮುದಾಯಗಳ ಜನ ಬುದ್ಧ ವಿಹಾರಗಳಿಗೆ ಭೇಟಿ ನೀಡಬೇಕು. ಬೌದ್ಧ ಬಿಕ್ಕುಗಳನ್ನು ಗೌರವಿಸಬೇಕು. ವಿಹಾರಗಳನ್ನು ಕ್ರಿಯಾಶೀಲವಾಗಿರುವಂತೆನೋಡಿಕೊಳ್ಳಬೇಕು. ನಾವು ದೂರ ನಿಂತು ಮಾತನಾಡುವುದ ರಿಂದ ವಿಹಾರಗಳು ಉದ್ಧಾರ ಆಗುವುದಿಲ್ಲ. ಎಲ್ಲ ಬುದ್ಧವಿಹಾರಗಳಲ್ಲಿ ಮಹಾಬೋಧಿ ಸೊಸೈಟಿಯಲ್ಲಿರುವ ವಾತಾವರಣ ನಿರ್ಮಿಸಬೇಕು' ಎಂದು ಹೇಳಿದರು.

## ಎಸ್‌ಸಿಗಳಿಗೆ ಒಳಮೀಸಲಾತಿ ಜಾರಿಗೊಳಿಸಿ ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಗೆ ಲಭ್ಯ ಶೇ 15 ಮೀಸಲಾತಿಯಲ್ಲಿ ಪ್ರವರ್ಗ 'ಎ', ಪ್ರವರ್ಗ 'ಬಿ' ಮತ್ತು ಪ್ರವರ್ಗ 'ಸಿ'ಗೆ ಕ್ರಮವಾಗಿ ಶೇ 5.25, 5.25, 4.50 ಪ್ರಮಾಣದಲ್ಲಿ ಒಳ ಮೀಸಲಾತಿ ಜಾರಿಗೊಳಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಆ ಬೆನ್ನಲ್ಲೆ, ಈಗಾಗಲೇ ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ 56,432 ಹುದ್ದೆಗಳ ನೇರ ನೇಮಕಾತಿಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚನೆಯನ್ನೂ ನೀಡಿದೆ. ಪ್ರವರ್ಗ 'ಸಿ'ಗೆ ಲಭ್ಯವಾಗುವ ಹುದ್ದೆಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಾತಿ ಸೀಟುಗಳಲ್ಲಿ ಶೇ 20ರಷ್ಟನ್ನು ಪರಿಶಿಷ್ಟ ಜಾತಿಗಳಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಲಾಗುವುದು.

ಒಂದೊಮ್ಮೆ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದೇ ಇದ್ದರೆ, ಆ ಹುದ್ದೆಗಳನ್ನು ಹಾಗೂ ಪ್ರವೇಶಾತಿ ಸೀಟುಗಳನ್ನು ಪ್ರವರ್ಗ 'ಸಿ'ಯಲ್ಲಿರುವ ಇತರೆ ಜಾತಿಗಳಿಗೆ ನೀಡಲಾಗುವುದು ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ನೇಮಕಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು 400 ರೋಸ್ಟರ್ ಬಿಂದುಗಳ ವರ್ತುಲಗಳನ್ನು ಪಾಲಿಸಲಾಗುವುದು. ಯಾವುದೇ ವೃಂದದಲ್ಲಿ ಪರಿಶಿಷ್ಟ ಜಾತಿಯ ರೋಸ್ಟರ್ ಬಿಂದುಗಳು ಮೂರಕ್ಕಿಂತ ಕಡಿಮೆ ಲಭ್ಯವಾಗದೇ ಇದ್ದರೆ, ಪರಿಶಿಷ್ಟ ಜಾತಿಗೆ ಮೀಸಲಾದ ಆ ಹುದ್ದೆಗಳನ್ನು 'ಪರಿಶಿಷ್ಟ ಜಾತಿ' ಎಂದು ಪರಿಗಣಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

# ಏರ್ ಶೋ ನಡೆಯುವ ಯಲಹಂಕ ವಾಯುನೆಲೆಯೂ ಅರಣ್ಯ ಭೂಮಿ

### ಬೆಂಗಳೂರು ಬಿಸಿಲು ಮತ್ತು ಅದರ ಪರಿಣಾಮ ಕುರಿತ ವಿಚಾರ ಸಂಕಿರಣ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು

ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮ ತಗ್ಗಿಸಲು ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ ರೂಪಿಸಲಾಗಿದ್ದು, ಇದರ ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಲು ಸೂಚಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿಯು ಅಸರ್ ಸಂಸ್ಥೆ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಬೆಂಗಳೂರು ಬಿಸಿಲು ಮತ್ತು ಅದರ ಪರಿಣಾಮ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು,

ಈ ಕ್ರಿಯಾ ಯೋಜನೆಯನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಾರಿಗೆ ತರಲು ಪರಿಸರ ಇಲಾಖೆ ವ್ಯಾಪ್ತಿಗೆ ಒಳಪಡುವ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ-ಎಂಪ್ರಿ ಕ್ರಮ ಕೈಗೊಂಡಿದೆ ಎಂದರು. ಜಿಲ್ಲಾ ಪಂಚಾಯತ್ ಕಚೇರಿಗಳ ಸಹಯೋಗದೊಂದಿಗೆ ಕೆಎಸ್ ಎಪಿಸಿಸಿ ಅನುಷ್ಠಾನ ಮತ್ತು ಅದರ ಪ್ರಗತಿಯ ಕುರಿತು ಜಿಲ್ಲಾ ಅಧಿಕಾರಿಗಳು ಮತ್ತು ಇತರ ಸಂಬಂಧಿತ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದೂ ತಿಳಿಸಿದರು.



ವಿವಿಧ ಇಲಾಖೆಗಳ ಸಹಯೋಗ

ಬೆಂಗಳೂರು ನಗರದ ಕೊತ್ತನೂರು, ಕಾಡುಗೋಡಿ, ಬಿ.ಎಂ. ಕಾವಲ್, ತುರಹಳ್ಳಿ ಸೇರಿದಂತೆ ಹಲವು ಕಡೆಗಳಲ್ಲಿ ಆಗಿದ್ದ ಸುಮಾರು ರೂ.10 ಸಾವಿರ ಕೋಟಿ. ಬೆಲೆ ಬಾಳುವ 250 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಿಸಲಾಗಿದೆ. ಒತ್ತುವರಿ ತೆರವು ಮಾಡಿದ ಜಾಗದಲ್ಲಿ ಸಾವಿರಾರು ಗಿಡಗಳನ್ನು ನೆಟ್ಟು ನೆಡುತೋಪು ನಿರ್ಮಾಣ ಮಾಡಲಾಗಿದ. ಈ ಮೂಲಕ ಬೆಂಗಳೂರು ನಗರಕ್ಕೆ ಅತ್ಯಗತ್ಯವಾದ ಶ್ವಾಸತಾಣ (ಲಂಗ್ಸ್ ಸ್ಪೇಸ್) ಉಳಿಸಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಅದೇ ರೀತಿ ಈ ಹಿಂದೆ ಕೈಗಾರಿಕೆಯ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್.ಎಂ.ಟಿ.ಗೆ ಪೀಣ್ಯ ಪ್ಲಾಂಟೇಷನ್‌ನಲ್ಲಿ ಸುಮಾರು 400 ಎಕರೆಗೂ ಹೆಚ್ಚು ಅರಣ್ಯ ಭೂಮಿಯನ್ನು ನೀಡಲಾಗಿತ್ತು. ಎಚ್.ಎಂ.ಟಿ. ಇಲ್ಲಿ 160 ಎಕರೆ ಅರಣ್ಯ ಭೂಮಿಯನ್ನು ಮಾರಾಟ ಮಾಡಿದ್ದಾರೆ. ಇನ್ನೂ ಅಲ್ಲಿ 280 ಎಕರೆ ಅರಣ್ಯ ಉಳಿದಿದ್ದು, ಇದನ್ನು ಮರಳಿ ಇಲಾಖೆಗೆ ಪಡೆದು ಬೆಂಗಳೂರು ನಗರಕ್ಕೆ ಅತ್ಯಗತ್ಯವಾದ ಶ್ವಾಸತಾಣವನ್ನು ಉಳಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಕಾನೂನು ಹೋರಾಟ ನಡೆಯುತ್ತಿದೆ. ಪ್ರಸ್ತುತ ಪ್ರಕರಣ ಸುಪ್ರೀಂಕೋರ್ಟ್ ನಲ್ಲಿದೆ ಎಂದರು.

ಇದರ ಜೊತೆಗೆ ಜಾರಕಬಂಡೆ ಪ್ರದೇಶದಲ್ಲಿ ಭಾರತೀಯ ವಾಯುಪಡೆಗೆ 444 ಎಕರೆ ಭೂಮಿಯನ್ನು ನೀಡಲಾಗಿತ್ತು.

1980ರ ಕಾಯಿದೆ ರೀತ್ಯ ಅರಣ್ಯ ಭೂಮಿಯನ್ನು ಯಾರಿಗೂ ನೀಡಲು ಅವಕಾಶವಿಲ್ಲ. ಹೀಗಾಗಿ 2017ರಲ್ಲಿ ಅಂದಿನ ಜಿಲ್ಲಾಧಿಕಾರಿ ಈ ಭೂ ಮಂಜೂರಾತಿ ರದ್ದು ಮಾಡಿದ್ದಾರೆ. ಈಗ ಆ ಅರಣ್ಯ ಭೂಮಿಯನ್ನು ಮರಳಿ ಇಲಾಖೆಗೆ ಪಡೆದು ಹಸಿರು ತಾಣ ಉಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ವೈಮಾನಿಕ ಪ್ರದರ್ಶನ ಏರ್ ಶೋ ನಡೆಯುವ ಗಂಟಿಗಾನಹಳ್ಳಿಯಲ್ಲಿರುವ ಯಲಹಂಕ ವಾಯುನೆಲೆ ಕೂಡ ಅರಣ್ಯ ಭೂಮಿಯಾಗಿದೆ. ಇಲ್ಲಿನ 159 ಎಕರೆ ಪ್ರದೇಶ ಸರ್ಕಾರಿ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದ್ದು, ವಾಯುಪಡೆ ತೀರುವಳಿ ಪ್ರಸ್ತಾವನೆ ಸಲ್ಲಿಸಿ, ಪರ್ಯಾಯ ಭೂಮಿ ನೀಡಿದರೆ ಈ ಪ್ರದೇಶವನ್ನು ಪಡೆಯದಿದ್ದರೆ, ಅದನ್ನು ಅರಣ್ಯ ಇಲಾಖೆಗೆ ಹಿಂಪಡೆಯಲು ಕ್ರಮ ವಹಿಸಲಾಗುವುದು ಎಂದರು.

ಭಾರತೀಯ ವಾಯುಪಡೆ ಈ ಪ್ರದೇಶವನ್ನು ಪ್ರಸ್ತುತ ರನ್ ವೇ ಆಗಿ ಉಪಯೋಗಿಸುತ್ತಿದೆ. ಆದರೆ ಆರ್‌ಟಿಸಿ ಮತ್ತು ಮ್ಯುಟೇಶನ್ ಅರಣ್ಯ ಇಲಾಖೆಯ ಹೆಸರಿನಲ್ಲಿದೆ. ಈ ಜಮೀನು ಕೂಡ ಭೂ ಪರಿವರ್ತನೆ ಆಗಿಲ್ಲ. ಹೀಗಾಗಿ ಅರಣ್ಯ ಭೂಮಿಯನ್ನೂ ತೆರವು ಮಾಡಿಸಲಾಗುವುದು ಎಂದರು.


ಇದೆಲ್ಲದರ ಜೊತೆಗೆ ಬೆಂಗಳೂರು ಉತ್ತರ ತಾಲ್ಲೂಕು ಮಾದಪ್ಪನ ಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ವಿಶ್ವಗುರು ಬೃಹತ್ ಜೈವಿಕ ಉದ್ಯಾನ ನಿರ್ಮಾಣ ಮಾಡಲು ಸರ್ಕಾರ ಸಂಕಲ್ಪ ಮಾಡಿದ್ದು, ಸಚಿವ ಸಂಪುಟದ ಅನುಮೋದನೆಯೂ ಆಗಿದೆ. ಮುಂದಿನ ತಿಂಗಳು ಮುಖ್ಯಮಂತ್ರಿಗಳಿಂದ ಇದಕ್ಕೆ ಶಂಕುಸ್ಥಾಪನೆ ಮಾಡಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ, ಕಾರ್ಯದರ್ಶಿ ಎಂ.ಸಹನಾ, ಉಪಸ್ಥಿತರಿದ್ದರು.

### ಬೆಂಗಳೂರಿನ ಶ್ವಾಸತಾಣಗಳ ರಕ್ಷಣೆಗೆ ಕ್ರಮ: ಈಶ್ವರ ಖಂಡ್ರೆ

**ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯಿಂದಾಗಿ ಇಂದು ಋತುಮಾನಗಳೇ ಬದಲಾಗುತ್ತಿವೆ. ಇದನ್ನು ಮನಗಂಡು ನಾನು ಅರಣ್ಯ ಸಚಿವನಾದ ಬಳಿಕ ಹಸಿರುಹೊದಿಕೆಯನ್ನು ಹೆಚ್ಚಿಸಲು ಸಕಲ ಪ್ರಯತ್ನ ಮಾಡುತ್ತಿದ್ದೇನೆ ಎಂದು ಖಂಡ್ರೆ ತಿಳಿಸಿದರು. ರಾಜ್ಯದ ಎಲ್ಲೆಡೆ ಅದರಲ್ಲೂ ಬೆಂಗಳೂರು ನಗರದಲ್ಲಿ ಹಸಿರುಹೊದಿಕೆ ಹೆಚ್ಚಿಸಲು ಶ್ರಮಿಸಲಾಗುತ್ತಿದೆ. ಕಳೆದ 3 ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ ಸುಮಾರು 11 ಕೋಟಿ ಸಸಿಗಳನ್ನು ನಡೆಲಾಗಿದೆ. ಈ ಸಸಿಗಳ ಪೈಕಿ ಎಷ್ಟು ಬದುಕುಳಿದಿವೆ ಎಂಬ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಹಾಕುವ ಮೂಲಕ ಪಬ್ಲಿಕ್ ಡೊಮೈನ್‌ನಲ್ಲಿ ಮಾಹಿತಿ ಹಾಕಲಾಗಿದೆ ಎಂದರು.**

## ಭಯೋತ್ಪಾದನೆ ಹಾಗೂ ದೇಶವಿರೋಧಿ ಚಟುವಟಿಕೆಯಲ್ಲಿ ಆರೋಪಿಯಾಗಿರುವ ಉಮರ್ ಖಾಲಿದ್ ಕಾರ್ಯಕ್ರಮಕ್ಕೆ ಸರ್ಕಾರದ ಮೌನ ಬೆಂಬಲ ಖಂಡನೀಯ!

• ಉದಯವಾಹಿನಿ, ಬೆಂಗಳೂರು



ದೆಹಲಿ ಗಲಭೆ ಹಾಗೂ ಭಯೋತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಆರೋಪಿಯಾಗಿ ಕಳೆದ ಹಲವು ವರ್ಷಗಳಿಂದ ಜೈಲಿನಲ್ಲಿದ್ದ ಉಮರ್ ಖಾಲಿದ್ ಕುರಿತು ಬೆಂಗಳೂರಿನ ದೊಮ್ಮಲೂರು 2ನೇ ಹಂತದಲ್ಲಿರುವ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ "Umar Khalid and His World" ಎಂಬ ಕಾರ್ಯಕ್ರಮವನ್ನು ಆಯೋಜಿಸಿರುವುದು ಅತ್ಯಂತ ಖಂಡನೀಯವಾಗಿದೆ.

ಈ ಕಾರ್ಯಕ್ರಮವನ್ನು ರದ್ದುಪಡಿಸುವಂತೆ ನಾವು ಇಂದಿರಾನಗರ ಪೊಲೀಸ್ ಠಾಣೆಗೆ ಹಾಗೂ ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಆದರೆ ಕಾರ್ಯಕ್ರಮವನ್ನು ರದ್ದುಪಡಿಸುವ ಬದಲು, ಪ್ರತಿಭಟನೆ ನಡೆಸಲು ಅನುಮತಿ ನಿರಾಕರಿಸಿ ನಮಗೆ ನೋಟಿಸ್ ನೀಡಿರುವುದು ಅತ್ಯಂತ ದುರದೃಷ್ಟಕರ ಹಾಗೂ ಪ್ರಶ್ನಾರ್ಹವಾಗಿದೆ.

ಹಿಂದೂ ಸಂಘಟನೆಗಳು ದೇವಸ್ಥಾನದ ಸಭಾಂಗಣದಲ್ಲಿ ಸಣ್ಣ ಕಾರ್ಯಕ್ರಮವನ್ನು ನಡೆಸಿದರೂ, ಪೊಲೀಸರು ತಕ್ಷಣ ನೋಟಿಸ್ ನೀಡಿ ''ಯಾವುದೇ ಅಹಿತಕರ ಘಟನೆ ನಡೆದರೆ ನೀವು ಜವಾಬ್ದಾರರು'' ಎಂದು ಎಚ್ಚರಿಕೆ ನೀಡುತ್ತಾರೆ.

ಕಾರ್ಯಕ್ರಮದ ವಕ್ತಾರರ ವಿವರ, ಅನುಮತಿ ಪತ್ರ, ಲಕ್ಷಾಂತರ ರೂಪಾಯಿಗಳ ಬಾಂಡ್ ಪೇಪರ್‌ಗಳವರೆಗೆ ಬೇಡಿಕೆ ಇಡುತ್ತಾರೆ. ಆದರೆ ದೇಶವಿರೋಧಿ ಚಟುವಟಿಕೆಗಳಲ್ಲಿ ಆರೋಪಿಯಾಗಿರುವ ವ್ಯಕ್ತಿಯ ಪರ ಕಾರ್ಯಕ್ರಮ ನಡೆಯುವಾಗ ಅದನ್ನು ತಡೆಯುವ ಬದಲು, ಅದಕ್ಕೆ ಪರೋಕ್ಷವಾಗಿ ಅವಕಾಶ ಕಲ್ಪಿಸುವುದು ಯಾವ ನ್ಯಾಯ?

ಇದು ಸರ್ಕಾರದ ದ್ವಂದ್ವ ನೀತಿಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಹಿಂದೂ ಸಂಘಟನೆಗಳಿಗೆ ಒಂದು ಕಾನೂನು, ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಬೆಂಬಲ ನೀಡುವವರಿಗೆ ಮತ್ತೊಂದು ಕಾನೂನು ಅನ್ವಯವಾಗುತ್ತಿದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಭಯೋತ್ಪಾದನೆಗೆ ಬೆಂಬಲ ನೀಡುವ ಯಾವುದೇ ಚಟುವಟಿಕೆಯನ್ನು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯದ ಹೆಸರಿನಲ್ಲಿ ಸಮರ್ಥಿಸಲು ಸಾಧ್ಯವಿಲ್ಲ. ದೇಶದ ಭದ್ರತೆ ಮತ್ತು ಸಮಾಜದ ಶಾಂತಿ ಅತ್ಯಂತ ಮುಖ್ಯ.

ಆದ್ದರಿಂದ, ಸರ್ಕಾರ ತಕ್ಷಣ ಈ ಕಾರ್ಯಕ್ರಮವನ್ನು ರದ್ದುಪಡಿಸಬೇಕು ಮತ್ತು ಇಂತಹ ದೇಶವಿರೋಧಿ ಕಾರ್ಯಕ್ರಮಗಳಿಗೆ ಅವಕಾಶ ನೀಡಬಾರದು. ಇಲ್ಲವಾದರೆ ರಾಜ್ಯದ ಹಿಂದೂ ಸಮಾಜ ಹಾಗೂ ರಾಷ್ಟ್ರಭಕ್ತರು ಕಾನೂನುಬದ್ಧವಾಗಿ ತೀವ್ರ ಹೋರಾಟ ನಡೆಸಬೇಕಾಗುತ್ತದೆ.

**ಮೋಹನ್ ಗೌಡ**
ರಾಜ್ಯ ವಕ್ತಾರ
ಹಿಂದೂ ಜನಜಾಗೃತಿ ಸಮಿತಿ, ಕರ್ನಾಟಕ


## ಇನ್ಮೇಲೆ ಮಕ್ಕಳಿಗೆ ಡಿಜಿಟಲ್ ಪ್ರೋಗ್ರೆಸ್ ಕಾರ್ಡ್

• ಉದಯವಾಹಿನಿ, ಬೆಂಗಳೂರು

ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಅಂಕಪಟ್ಟಿಗಳನ್ನು ಡಿಜಿಲಾಕರ್‌ನಲ್ಲಿ ಲಭ್ಯವಾಗುವಂತೆ ಪ್ರಯೋಗ ಮಾಡಿ ಯಶಸ್ಸು ಕಂಡಿದ್ದ ಶಿಕ್ಷಣ ಇಲಾಖೆ , ಈಗ ಮತ್ತೊಂದು ಹೊಸ ಪ್ರಯೋಗಕ್ಕೆ ಸಜ್ಜಾಗಿದೆ. ಎಲ್‌ಕೆಜಿಯಿಂದ ಪಿಯುಸಿವರೆಗಿನ ಪ್ರತಿ ಮಗುವಿನ ಶೈಕ್ಷಣಿಕ ಪ್ರಗತಿಯನ್ನು ಡಿಜಿಟಲ್ ರೂಪದಲ್ಲಿ ನೀಡಲು ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದೆ.

**ಕಾಗದದ ಅಂಕಪಟ್ಟಿ ಬದಲಿಗೆ ಹೋಲಿಸ್ಟಿಕ್ ರಿಪೋರ್ಟ್ ಕಾರ್ಡ್:** ಇಷ್ಟು ದಿನ ಪೋಷಕರು ತಮ್ಮ ಮಕ್ಕಳು ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಬಗ್ಗೆ ಅಂಕಪಟ್ಟಿಗಳ ಮೂಲಕ ಮಾಹಿತಿ ಪಡೆಯುತ್ತಿದ್ದರು. ಈಗ 'ಹೋಲಿಸ್ಟಿಕ್ ರಿಪೋರ್ಟ್ ಕಾರ್ಡ್' ಎಂಬ ಪರಿಕಲ್ಪನೆ ಜತೆಗೆ, ಡಿಜಿಟಲ್ ರೂಪದಲ್ಲಿ ಮಗುವಿನ ಸಮಗ್ರ ಶೈಕ್ಷಣಿಕ ಪ್ರಗತಿಯ ವರದಿಯನ್ನು ಪೋಷಕರ ಮೊಬೈಲ್ ಹಾಗೂ ಇ-ಮೇಲ್‌ಗೆ ಕಳುಹಿಸುವ ವ್ಯವಸ್ಥೆಯನ್ನು ಶಿಕ್ಷಣ ಇಲಾಖೆ ಸಿದ್ಧಪಡಿಸುತ್ತಿದೆ.

ರಾಷ್ಟ್ರೀಯ ಶಿಕ್ಷಣ ನೀತಿ-2020 ಹಾಗೂ ಎನ್‌ಸಿಇಆರ್‌ಟಿಯ ಪರಾಖ್ ಉಪಕ್ರಮದಡಿ ಈ ವ್ಯವಸ್ಥೆ ಜಾರಿಗೆ ತರಲು ತಯಾರಿ ನಡೆದಿದೆ. ಈ ಆಧುನಿಕ ವ್ಯವಸ್ಥೆ ಮೂಲಕ ಪೋಷಕರು ತಮ್ಮ ಮಕ್ಕಳ ಸಮಗ್ರ ಶೈಕ್ಷಣಿಕ ಪ್ರಗತಿಯನ್ನು ಡಿಜಿಟಲ್ ರೂಪದಲ್ಲಿ ಪಡೆಯಬಹುದಾಗಿದೆ. ಪೋಷಕರ ನೋಂದಾಯಿತ ಮೊಬೈಲ್ ಸಂಖ್ಯೆ ಅಥವಾ ಇ-ಮೇಲ್ ವಿಳಾಸದ ಮೂಲಕ ಪರೀಕ್ಷೆಯ ಅಂಕಗಳು, ಶಿಕ್ಷಕರ ಅಭಿಪ್ರಾಯಗಳು ಮತ್ತು ಮಗುವಿನ ಸರ್ವತೋಮುಖ ಬೆಳವಣಿಗೆಯ ವಿವರಗಳು ಡಿಜಿಟಲ್ ರೂಪದಲ್ಲಿ ಲಭ್ಯವಾಗಲಿವೆ.



**ಬೆರಳ ತುದಿಯಲ್ಲೇ ಮಕ್ಕಳ ಶೈಕ್ಷಣಿಕ ಪ್ರಗತಿ ತಿಳಿಯುವ ಸೌಲಭ್ಯ:** ಮಗುವಿನ ಶೈಕ್ಷಣಿಕ ಪ್ರಗತಿಯ ಮೇಲೆ ಗಮನಹರಿಸಲು ಪೋಷಕರಿಗೆ ಈ ಕಾಗದರಹಿತ ವ್ಯವಸ್ಥೆ ಸಹಕಾರಿಯಾಗಲಿದೆ. ಸರಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿನ ಎಲ್‌ಕೆಜಿಯಿಂದ ಪಿಯುಸಿವರೆಗಿನ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಪ್ರತಿ ವಿವರ ಬೆರಳ ತುದಿಯಲ್ಲೇ ಲಭ್ಯವಾಗುವುದರಿಂದ ಪೋಷಕರು ಭೌತಿಕ ಅಂಕಪಟ್ಟಿಯ ಬದಲು ತಾವಿರುವ ಸ್ಥಳದಿಂದಲೇ ಮಗುವಿನ ಪ್ರಗತಿ ಹಾಗೂ ನ್ಯೂನತೆಗಳನ್ನು ಅರಿಯಲು ಹೋಲಿಸ್ಟಿಕ್ ರಿಪೋರ್ಟ್ ಕಾರ್ಡ್ ಅನುಕೂಲ ಕಲ್ಪಿಸಲಿದೆ.

**ಭೌತಿಕ ಅಂಕಪಟ್ಟಿಯೂ ವಿತರಣೆ:** ಡಿಜಿಟಲ್ ಅಂಕಪಟ್ಟಿಯ ಜೊತೆಗೆ ಭೌತಿಕ ಅಂಕಪಟ್ಟಿ, ಪ್ರಗತಿ ಪತ್ರವನ್ನೂ ಸಹ ವಿತರಿಸಲಾಗುವುದು ಎಂದು ಶಿಕ್ಷಣ ಇಲಾಖೆ ಸ್ಪಷ್ಟಪಡಿಸಿದೆ. ಡಿಜಿಟಲ್ ರೂಪದ ದತ್ತಾಂಶ ವೇಗವಾಗಿ ಪೋಷಕರಿಗೆ ತಲುಪುವ ಜೊತೆಗೆ ಕಾಗದ ರಹಿತವಾಗಿ ದಾಖಲೆ ಸಂಗ್ರಹಕ್ಕೆ ಸಹಕಾರಿಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರಕಟ

## ಆರು ಕಲಾ ಸಾಧಕರಿಗೆ ಗೌರವ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲಲಿತಕಲಾ ಅಕಾಡೆಮಿಯ 2024-2025 ಮತ್ತು 2025-26ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಆರು ಕಲಾ ಸಾಧಕರು ಆಯ್ಕೆಯಾಗಿದ್ದಾರೆ.

ಅಕಾಡೆಮಿ ಮಂಗಳವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತ ಅವರು ಪ್ರಶಸ್ತಿ ಪಟ್ಟಿಯನ್ನು ಬಿಡುಗಡೆ ಮಾಡಿದರು.

2024-2025ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಬಾಗಲಕೋಟೆಯ ಬಾಬು ಜತ್ತಕರ್, ಕಲಬುರಗಿಯ ಎಂ.ಜಿ. ದೊಡ್ಡಮನಿ, ತುಮಕೂರಿನ ಕೆ.ಸಿ.ಎಸ್. ಪ್ರಸನ್ನ, 2025-26ನೇ ಸಾಲಿಗೆ ಹಾಸನದ ಬಿ.ಎಸ್. ದೇಸಾಯಿ, ವಿಜಯಪುರದ ಶಶಿಕಲಾ ಹೂಗಾರ್ ಹಾಗೂ ಮೈಸೂರಿನ ಸಿ.ಚಿಕ್ಕಣ್ಣ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ 50 ಸಾವಿರ ನಗದು ಒಳಗೊಂಡಿದೆ.

**'ವರ್ಣಶ್ರೀ' ಪ್ರಶಸ್ತಿ:** 2023-24 ಹಾಗೂ 2024-25ನೇ ಸಾಲಿಗೆ ತಲಾ 10 ಕಲಾವಿದರನ್ನು 'ವರ್ಣಶ್ರೀ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ಗದಗದ ವಿಜಯ ಕಿರಸೂರ, ಶಿರಸಿಯ ರವಿ ಗುಣಗ, ಹಾವೇರಿಯ ಕುಮಾರ ಕಾಟೇನಹಳ್ಳಿ, ಧಾರವಾಡದ ದಯಾನಂದ ಕೆ. ಕಾಮಕರ್, ವಿಜಯಪುರದ ಸರೋಜ ಮುಂಡೇವಾಡಿ, ಕೊಡಗಿನ ಜಿ.ಎಸ್. ಭವಾನಿ, ಉಡುಪಿಯ ರಾಘವೇಂದ್ರ ನಾಯ್ಕ, ಮಂಡ್ಯದ ಶಿವಕುಮಾರ್ ಎಚ್.. ಮಂಗಳೂರಿನ ಮೋಹನ್ ಕುಮಾರ್ ಬಿ.ಪಿ. ಹಾಗೂ ಚಾಮರಾಜನಗರದ ಮಹದೇವ ಎಚ್. ಅವರು 2023-24ನೇ ಸಾಲಿನ 'ವರ್ಣಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

2024-25ನೇ ಸಾಲಿಗೆ ಯಾದಗಿರಿಯ ಮೇಘನಾಥ ಅಬ್ರಹಂಬೆಳ್ಳಿ, ರಾಯಚೂರಿನ ಹೇಮರೆಡ್ಡಿ ಎನ್., ಬೀದರ್‌ನ ವೈಶಾಲಿಬಾಯಿ ಕಾಂಬಳೆ, ಕೊಪ್ಪಳದ ತಿರುಪತಿ ಶಿವನಗುತ್ತಿ, ಬಳ್ಳಾರಿಯ ಎ. ಮಹಮದ್ ರಫಿ, ದಾವಣಗೆರೆಯ ಉದಯ್ ಕುಮಾರ್ ಡಿ. ಜೈನ್, ಚಿತ್ರದುರ್ಗದ ದಿನೇಶ್ ಬಿ., ಬೆಂಗಳೂರಿನ ಎಸ್.ಎಫ್. ಹುಸೇನಿ, ರಾಮನಗರದ ಗಂಗಾಧರಮೂರ್ತಿ ಹಾಗೂ ಬೆಂಗಳೂರಿನ ಪೂರ್ಣಿಮ ಯಲ್ಲಾಪುರಕರ್ ಅವರು 'ವರ್ಣಶ್ರೀ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ರೂ. 25 ಸಾವಿರ ನಗದು ಒಳಗೊಂಡಿದೆ. 'ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರ ಜತೆಗೆ ಚರ್ಚಿಸಿ, ಪ್ರಶಸ್ತಿ ಪ್ರದಾನ ದಿನಾಂಕ ಹಾಗೂ ಸ್ಥಳವನ್ನು ನಿಗದಿ ಮಾಡಲಾಗುವುದು' ಎಂದು ಪ.ಸ. ಕುಮಾರ್ ತಿಳಿಸಿದರು.

## ಸರ್ಕಾರಿ ಶಾಲೆಗಳ ಬಲವರ್ಧನೆಗೆ ಎಂಟು 'ಗ್ಯಾರಂಟಿ'

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಬಲವರ್ಧನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಂಟು ಗ್ಯಾರಂಟಿಗಳನ್ನು ಘೋಷಿಸಿದ್ದಾರೆ.


**ಸಿಎಂ ಸಿದ್ದರಾಮಯ್ಯ ಘೋಷಣೆ**

ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಶಿಕ್ಷಕರನ್ನು ತ್ವರಿತ ನೇಮಕಾತಿ ಮಾಡುವ ಮೂಲಕ ಶಿಕ್ಷಕರ ಕೊರತೆ ನೀಗಿಸುವುದು. ಪ್ರತಿ ಶಾಲೆಗೂ ಸುಸಜ್ಜಿತ ಕಟ್ಟಡ, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಕೊಠಡಿಗಳು, ಕುಡಿಯುವ ನೀರು, ಶೌಚಾಲಯಗಳ ನಿರ್ಮಾಣ. ಮಕ್ಕಳು ಹಾಗೂ ಪೋಷಕರ ಇಚ್ಛೆಗೆ ಅನುಗುಣವಾಗಿ ಭಾಷಾ ಮಾಧ್ಯಮ ಆಯ್ಕೆ, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸುತ್ತಲ ಗ್ರಾಮ, ವಾರ್ಡ್‌ಗಳಿಂದ ಬರುವ ಮಕ್ಕಳಿಗೆ ಉಚಿತ ಸಾರಿಗೆ ವ್ಯವಸ್ಥೆ. ಪ್ರತಿ ಶಾಲೆಗಳಲ್ಲೂ ಆಧುನಿಕ ಶಿಕ್ಷಣಕ್ಕೆ ಅನುಗುಣವಾಗಿ ಡಿಜಿಟಲ್ ಕಲಿಕೆಗೆ ಅವಕಾಶ, ಸ್ಮಾರ್ಟ್ ಕ್ಲಾಸ್‌ಗಳ ನಿರ್ಮಾಣ. ವಿವಿಧ ಕಲೆಗಳು, ಕ್ರೀಡಾ ಚಟುವಟಿಕೆಗಳಿಗೆ ಆದ್ಯತೆ.

ಪ್ರತಿ ಶಾಲೆಯಲ್ಲೂ ಶೈಕ್ಷಣಿಕ ಗುಣಮಟ್ಟದ ಮೇಲ್ವಿಚಾರಣೆಗೆ ಪ್ರತ್ಯೇಕ ಸಮಿತಿ ರಚನೆ. ಭವಿಷ್ಯದಲ್ಲಿ ಉದ್ಯೋಗ ಸಿಗುವಂತಹ ಶಿಕ್ಷಣ ಕಲಿಕೆಗೆ ಅವಕಾಶ ನೀಡಲು ಶಾಲಾ ಹಂತದಿಂದಲೇ ಮಕ್ಕಳಿಗೆ ಕೌಶಲಾಧಾರಿತ ತರಬೇತಿಯ ಭರವಸೆ ನೀಡಿದ್ದಾರೆ. ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, 'ಎಸ್‌ಎಸ್‌ಎಲ್‌ಸಿ, ಪಿಯು ದಾಖಲೆಯ ಫಲಿತಾಂಶ ಹರ್ಷ ತಂದಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ 94.1 ಹಾಗೂ ಪಿಯುನಲ್ಲಿ ಶೇ 86.48 ಫಲಿತಾಂಶ ನೀಡುವ ಮೂಲಕ ಮಕ್ಕಳು ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ಅದರಲ್ಲೂ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಸಾಧನೆ ಬೆರಗು ಮೂಡಿಸಿದೆ. ಈ ಸಾಧನೆಗಳು ನಮ್ಮ ಸರ್ಕಾರಿ ಶಾಲಾ ವ್ಯವಸ್ಥೆಯ ಬಲವನ್ನು ತೋರಿಸುತ್ತವೆ. ಇದರಿಂದ ಪ್ರೇರಿತನಾಗಿ ಎಂಟು ಅಂಶಗಳ ಕಾರ್ಯಕ್ರಮವನ್ನು ನೀಡುತ್ತಿದ್ದೇನೆ. ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುತ್ತೇನೆ' ಎಂದಿದ್ದಾರೆ.



### ಶಾಲಾ ಗ್ಯಾರಂಟಿಗಳು

- ಶಿಕ್ಷಕರ ಲಭ್ಯತೆ
- ಮೂಲಸೌಕರ್ಯ
- ಭಾಷಾ ಆಯ್ಕೆ
- ಉಚಿತ ಸಾರಿಗೆ
- ಡಿಜಿಟಲ್ ಕಲಿಕೆ
- ಕಲೆ ಮತ್ತು ಕ್ರೀಡಾ ಶಿಕ್ಷಣ
- ಶೈಕ್ಷಣಿಕ ಗುಣಮಟ್ಟದ ಮೇಲ್ವಿಚಾರ
- ಕೌಶಲಾಧಾರಿತ ತರಬೇತಿ

# ಇ - ಖಾತಾ ಪಡೆಯಲು ಜಿಬಿಎ ಸರಳ ವ್ಯವಸ್ಥೆ ಜಾರಿ

### ಎಸ್‌ಎಎಸ್ ಪ್ರಾಪರ್ಟಿ ಟ್ಯಾಕ್ಸ್ ಐಡಿ ಇದ್ದರೆ ನಿಮ್ಮ ಮೊಬೈಲ್‌ನಲ್ಲೇ ಕೇವಲ ಎರಡೇ ನಿಮಿಷದಲ್ಲಿ ಇ – ಖಾತಾವನ್ನು ಡೌನ್‌ಲೋಡ್

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಪಂಚ ಪಾಲಿಕೆಗಳು ನಾಗರಿಕರಿಗೆ ಗುಡ್‌ನ್ಯೂಸ್. ಆಸ್ತಿ ಇ-ಖಾತಾ ಪಡೆಯಲು ನೀವು ಯಾವುದೇ ಕಚೇರಿಗೂ ಹೋಗಬೇಕಿಲ್ಲ. ನಿಮ್ಮ ಬಳಿ ಕೇವಲ ಎಸ್ ಎಎಸ್ ಪ್ರಾಪರ್ಟಿ ಟ್ಯಾಕ್ಸ್ ಐಡಿ ಇದ್ದರೆ ನಿಮ್ಮ ಮೊಬೈಲ್‌ನಲ್ಲೇ ಕೇವಲ ಎರಡೇ ನಿಮಿಷದಲ್ಲಿ ಇ – ಖಾತಾವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸುಮಾರು 13 ಲಕ್ಷ ಇ – ಖಾತಾಗಳನ್ನು ತಕ್ಷಣವೇ ನಾಗರಿಕರಿಗೆ ಲಭ್ಯವಾಗುವಂತೆ ಮಾಡುವುದು ಹಾಗೂ ಅನಗತ್ಯ ವಿಳಂಬ ಮತ್ತು ಆಡಳಿತಾತ್ಮಕ ಅಡೆತಡೆಗಳನ್ನು ನಿವಾರಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗರಿಕರು https://BBMPeAasthi.karnataka.gov.in ಭೇಟಿ ನೀಡಿ, ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಬಳಸಿ ಲಾಗಿನ್ ಆಗಿ ಎಸ್‌ಎಎಸ್ ಅಪ್ಲಿಕೇಶನ್ ಪ್ರಾಪರ್ಟಿ ತೆರಿಗೆ ಐಡಿ ನಮೂದಿಸಿ ಇ-ಖಾತಾ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಅವರು ತಿಳಿಸಿದ್ದಾರೆ. ಅಧಿಕಾರಿಗಳ ಸುತ್ತುವಿಕೆ, ರೆಡ್ ಟೇಪ್ ಅಥವಾ ಕಡತಗಳ ವಿಳಂಬ ಹಾಗೂ ಮಧ್ಯವರ್ತಿಗಳ ಹಾವಳಿಯನ್ನು ಸಂಪೂರ್ಣವಾಗಿ ಇಲ್ಲವಾಗಿಸುವ ಉದ್ದೇಶದಿಂದಲೇ ಈ ಸಿಸ್ಟಮ್ ಅನ್ನು ಜಾರಿಗೆ ತರಲಾಗಿದೆ.

ಮೊದಲನೆಯದಾಗಿ, ನಿಮ್ಮ ಹಳೆಯ ಪ್ರಾಪರ್ಟಿ ಟ್ಯಾಕ್ಸ್ ರಸೀದಿಗಳನ್ನು ಚೆಕ್ ಮಾಡಿ. ನೀವು ಕಳೆದ ವರ್ಷ ಕಟ್ಟಿರುವ ಟ್ಯಾಕ್ಸ್ ರಸೀದಿಯಲ್ಲಿ SAS ಅಪ್ಲಿಕೇಶನ್ ನಂಬರ್ ಅಥವಾ ಪ್ರಾಪರ್ಟಿ ಟ್ಯಾಕ್ಸ್ ಐಡಿ ಅಂತ ಸ್ಪಷ್ಟವಾಗಿ ಬರೆದಿರುತ್ತದೆ.

ಎರಡನೆಯ ದಾರಿ, ಬಿಬಿಎಂಪಿ ಟ್ಯಾಕ್ಸ್ ಪೋರ್ಟಲ್. ಈ ವೆಬ್‌ಸೈಟ್‌ಗೆ ಹೋಗಿ ನಿಮ್ಮ ವಾರ್ಡ್ ನಂಬರ್, ಆಸ್ತಿಯ ವಿಳಾಸ ಅಥವಾ ಮಾಲೀಕರ ಹೆಸರನ್ನು ನಮೂದಿಸಿದರೆ ನಿಮ್ಮ ಐಡಿ ಸಿಗುತ್ತದೆ. ಮೂರನೆಯದಾಗಿ, ಬಿಬಿಎಂಪಿಯ ಇ-ಆಸ್ತಿ ಪೋರ್ಟಲ್‌ನಲ್ಲಿ ಕೂಡ ಸರ್ಚ್ ಮಾಡಬಹುದು. ನಾಲ್ಕನೆಯ ದಾರಿ ಬಹಳ ಸುಲಭವಾಗಿದೆ, ಬಿಬಿಎಂಪಿ ಪ್ರಾಪರ್ಟಿ ಟ್ಯಾಕ್ಸ್ ಸಿಸ್ಟಮ್‌ನಲ್ಲಿ ಯಾವ ಆಸ್ತಿ ಮಾಲೀಕರ ಮೊಬೈಲ್ ನಂಬರ್ ರಿಜಿಸ್ಟರ್ ಆಗಿದೆಯೋ, ಅವರಿಗೆ ನೇರವಾಗಿ ಎಸ್‌ಎಂಎಸ್ ಅಥವಾ ವಾಟ್ಸಾಪ್ ಮೂಲಕ ರೆಡಿ-ಟು-ಡೌನ್‌ಲೋಡ್ ಲಿಂಕ್ ಕಳುಹಿಸಲಾಗುತ್ತಿದೆ. ಅದರಲ್ಲೂ ನಿಮ್ಮ ಐಡಿ ಇರುತ್ತದೆ. ಇನ್ನು ಐದನೆಯ ದಾರಿ, ನಿಮ್ಮ ಹತ್ತಿರದ ಅಸಿಸ್ಟೆಂಟ್ ರೆವೆನ್ಯೂ ಆಫೀಸರ್ ಕಚೇರಿಯಿಂದ ಹಿಂದೆ ಬಂದಿರುವ ಯಾವುದೇ ಆದೇಶದ ಪ್ರತಿಗಳಲ್ಲಿದ್ದರೂ ಈ ಐಡಿ ಇರುತ್ತದೆ. ಇಷ್ಟೆಲ್ಲಾ ಮಾಡಿದರೂ ನಿಮಗೆ SAS ಐಡಿ ಸಿಗುತ್ತಿಲ್ಲ ಎಂದರೆ, ಬಿಬಿಎಂಪಿ ಸಹಾಯವಾಣಿ ನಂಬರ್ (080) 2297 5555ಗೆ ಕರೆ ಮಾಡಬಹುದು, ಅಥವಾ dcrev@bbmp.gov.inಗೆ ಇಮೇಲ್ ಮಾಡಿ ಮಾಹಿತಿ ಪಡೆಯಬಹುದು.

**ಇ-ಖಾತಾ ಡೌನ್‌ಲೋಡ್ ಮಾಡೋದು ಹೇಗೆ?**

**ಹಂತ 1:** dcrev@bbmp.gov.inಗೆ ಭೇಟಿ ನೀಡಿ.




**ಹಂತ 2:** ಲಾಗಿನ್ ಆಯ್ಕೆಯನ್ನು ಕ್ಲಿಕ್ ಮಾಡಿ,

**ಹಂತ 3:** ನಿಮ್ಮ ರಿಜಿಸ್ಟರ್ಡ್ ಮೊಬೈಲ್ ನಂಬರ್ ಎಂಟರ್ ಮಾಡಿ.

**ಹಂತ 4:** ಒಟಿಪಿಯನ್ನು ನಮೂದಿಸಿ ಲಾಗಿನ್ ಆಗಿ.

**ಹಂತ 5:** SAS ಅಪ್ಲಿಕೇಶನ್ ಪ್ರಾಪರ್ಟಿ ಟ್ಯಾಕ್ಸ್ ಐಡಿ ಎಂಟರ್ ಮಾಡಿ

**ಹಂತ 6:** ನಿಮ್ಮ ಇ-ಖಾತಾ ಸ್ಕ್ರೀನ್ ಮೇಲೆ ಕಾಣಿಸಿಕೊಳ್ಳುತ್ತದೆ.

**ಹಂತ 7:** ಡೌನ್‌ಲೋಡ್ ಬಟನ್ ಕ್ಲಿಕ್ ಮಾಡಿ

ಒಂದು ವೇಳೆ ನೀವು ಭವಿಷ್ಯದಲ್ಲಿ ಆಸ್ತಿಯನ್ನು ಮಾರಾಟ ಮಾಡಬೇಕು ಅಥವಾ ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ಯಾವುದೇ ವ್ಯವಹಾರ ಮಾಡಬೇಕು ಎಂದರೆ, ನಿಮ್ಮ ಇ-ಖಾತಾವನ್ನು ಸಂಪೂರ್ಣವಾಗಿ ಅಪ್‌ಡೇಟ್ ಮಾಡುವುದು ಕಡ್ಡಾಯ.

**ಏನೆಲ್ಲಾ ಅಪ್‌ಡೇಟ್ ಮಾಡ್ಬೇಕು?**

ಮಾಲೀಕರ ಆಧಾರ್ ಮತ್ತು ಇ-ಕೆವೈಸಿ ಪ್ರೊಸೆಸ್ ಕಂಪ್ಲೀಟ್ ಮಾಡಬೇಕು. ನಿಮ್ಮ ಆಸ್ತಿಯ ರಿಜಿಸ್ಟರ್ಡ್ ಸೇಲ್ ಡೀಡ್ ಮಾಹಿತಿಯನ್ನು ಅಪ್‌ಡೇಟ್ ಮಾಡಬೇಕು.

ಪ್ರಾಪರ್ಟಿಯ ನಿಖರವಾದ ಜಿಪಿಎಸ್ ಲೊಕೇಶನ್ ಮತ್ತು ಫೋಟೋಗಳನ್ನು ಒದಗಿಸಬೇಕು. ಒಂದು ವೇಳೆ ಅನ್ವಯಿಸುತ್ತೇ ಎನ್ನುವುದಾದರೆ, ಬೆಸ್ಕಾಂ ಐಡಿಯನ್ನೂ ಸಹ ಲಿಂಕ್ ಮಾಡಬೇಕು. ಈ ಎಲ್ಲಾ ವಿವರಗಳನ್ನು ನೀವು ಆನ್‌ಲೈನ್‌ನಲ್ಲೇ ಅಪ್‌ಡೇಟ್ ಮಾಡಿದಾಗ ಮಾತ್ರ ನಿಮ್ಮ ಇ-ಖಾತಾ ನೂರಕ್ಕೆ ನೂರರಷ್ಟು ಪೂರ್ಣಗೊಳ್ಳುತ್ತದೆ ಮತ್ತು ಕಾನೂನುಬದ್ಧ ವ್ಯವಹಾರಗಳಿಗೆ ಬಳಕೆಗೆ ಸಿದ್ಧವಾಗುತ್ತದೆ.

### ಏನಿದು ಜಿಬಿಎ ಪ್ರಾಪರ್ಟಿ ಟ್ಯಾಕ್ಸ್ ಐಡಿ?

**ಇ – ಖಾತಾ ಡೌನ್‌ಲೋಡ್ ಮಾಡಿಕೊಳ್ಳಲು ನಿಮಗೆ ಪ್ರಮುಖವಾಗಿ ಬೇಕಾಗಿರುವುದು SAS ಪ್ರಾಪರ್ಟಿ ಟ್ಯಾಕ್ಸ್ ಐಡಿ. SAS ಅಂದ್ರೆ ಸೆಲ್ಫ್ ಅಸೆಸ್‌ಮೆಂಟ್ ಸಿಸ್ಟಮ್ . ಇದು ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಆಸ್ತಿಗೆ ನೀಡಲಾಗಿರುವ ಒಂದು ವಿಶಿಷ್ಟವಾದ ಗುರುತಿನ ಸಂಖ್ಯೆ. ನಿಮ್ಮ ಆಸ್ತಿ ತೆರಿಗೆ ಪಾವತಿಯನ್ನು ಟ್ರ್ಯಾಕ್ ಮಾಡಲು ಬಿಬಿಎಂಪಿ ಈ ನಂಬರ್ ಅನ್ನು ಬಳಸುತ್ತದೆ. ಒಂದು ವೇಳೆ ಈ ನಂಬರ್ ನಿಮ್ಮ ಬಳಿ ಇಲ್ಲ, ಎಲ್ಲಿ ಹುಡುಕುವುದು ಅಂತ ಗೊಂದಲವಿದ್ದರೆ ತಲೆಕೆಡಿಸಿಕೊಳ್ಳಬೇಡಿ. ಇದನ್ನು ಹುಡುಕಲು ಐದು ಸುಲಭ ದಾರಿಗಳಿವೆ.**

- ಹಳೇ ಪ್ರಾಪರ್ಟಿ ಟ್ಯಾಕ್ಸ್ ರಸೀದಿ
- ಬಿಬಿಎಂಪಿ ಟ್ಯಾಕ್ಸ್ ಪೋರ್ಟಲ್
- ಬಿಬಿಎಂಪಿ ಇ-ಆಸ್ತಿ ಪೋರ್ಟಲ್
- ಎಸ್‌ಎಂಎಸ್, ವಾಟ್ಸ್ಆಪ್ ಚೆಕ್
- ರೆವೆನ್ಯೂ ಆಫೀಸರ್ ಕಚೇರಿಯ ಆದೇಶ

ಉದಯ ವಾಹಿನಿ

ಪ್ರಾದೇಶಿಕ

ಬುಧವಾರ 29 ಏಪ್ರಿಲ್ 2026

03

# ಕುಡಿಯುವ ನೀರಿಗೆ ಅಭಾವವಾಗದಂತೆ ಎಚ್ಚರಿಕೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳ ಕಟ್ಟುನಿಟ್ಟಿನ ಸೂಚನೆ

• ಉದಯವಾಹಿನಿ, ರಾಮನಗರ

ಬೇಸಿಗೆ ಕಾಲದಲ್ಲಿ ಜಿಲ್ಲೆಯಾದ್ಯಂತ ಕುಡಿಯುವ ನೀರು ಹಾಗೂ ಜಾನುವಾರುಗಳ ಮೇವುಗಳಿಗೆ ಅಭಾವವಾಗದಂತೆ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವಂತೆ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ಸಂಬಂಧಿಸಿದ ಇಲಾಖೆಗಳ ಜಿಲ್ಲಾ, ತಾಲ್ಲೂಕು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬೇಸಿಗೆ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ವಹಿಸಬೇಕಾದ ವಿವಿಧ ರೀತಿಯ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ನಿರ್ದೇಶನ ನೀಡಿದ ಅವರು, ಜಿಲ್ಲೆಯ ತಾಲ್ಲೂಕುಗಳಲ್ಲಿನ ಕೆಲವೆಡೆ ಟ್ಯಾಂಕರ್ ಮೂಲಕ ಈಗಾಗಲೇ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ,

ಉದಯವಾಹಿನಿ ಚಿತ್ರ



ಆ ಟ್ಯಾಂಕರ್‌ಗಳಲ್ಲಿ ಸರಬರಾಜು ಮಾಡುವ ಟ್ರಿಪ್‌ಗಳ ನಿಖರ ಲೆಕ್ಕಾಚಾರ ತಿಳಿಯಲು ಅನುಕೂಲವಾಗುವಂತೆ ನೀರಿನ ಟ್ಯಾಂಕರ್‌ಗಳ ಎಲ್ಲಾ ವಾಹನಗಳಿಗೆ ಕೂಡಲೇ ಜಿ.ಪಿ.ಎಸ್ ಅಳವಡಿಸಬೇಕು. ಆಗ ಟ್ರಿಪ್‌ಗಳ ಲೆಕ್ಕಾಚಾರ ನಿಖರವಾಗಿ ತಿಳಿದುಬರಲಿದೆ ಎಂದು ಸೂಚನೆ ನೀಡಿದರು. ಜಿಲ್ಲೆಯ ಕೆಲವೊಂದು ಕಡೆಗಳಲ್ಲಿ ಖಾಸಗಿ ಟ್ಯಾಂಕರ್‌ಗಳ ಮೂಲಕವೂ ನೀರನ್ನು ಪೂರೈಸಲಾಗುತ್ತಿದೆ. ಅಂತಹ ಸ್ಥಳಗಳಲ್ಲಿ ಬೋರ್‌ವೆಲ್ ಕೊರೆಸುವಂತೆ ಈ ಹಿಂದೆಯೇ ಸೂಚನೆ ನೀಡಲಾಗಿತ್ತು. ಆ ದಿಸೆಯಲ್ಲಿ ಕ್ರಮ ವಹಿಸುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು ಬೋರ್‌ವೆಲ್ ಕೊರೆಸಲು ಟಾಸ್ಕ್‌ಫೋರ್ಸ್‌ನಿಂದ ಹಣ ಕಡಿಮೆಯಾದಲ್ಲಿ ಇತರೆ ಮೂಲದಿಂದ ಒದಗಿಸುವುದಾಗಿ ತಿಳಿಸಿದರು. ಅಗತ್ಯವಿರುವ ಸ್ಥಳಗಳಲ್ಲಿ ಕೂಡಲೇ ಬೋರ್‌ವೆಲ್‌ಗಳನ್ನು ಕೊರೆಸಬೇಕು. ಹೊಸದಾಗಿ ಬೋರ್‌ವೆಲ್ ಕೊರೆಯಿಸಬೇಕಾದರೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಗಮನಕ್ಕೆ ತರಬೇಕು. ಮುಖ್ಯವಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದಲೇ ಬೋರ್‌ವೆಲ್‌ಗಳನ್ನು ಕೊರೆಯಿಸಬೇಕು ಎಂದು ಕಟ್ಟುನಿಟ್ಟಾಗಿ ಸೂಚನೆ ನೀಡಿದರು. ಪ್ರಸಕ್ತವಾಗಿ ಜಿಲ್ಲೆಯಲ್ಲಿ 21 ವಾರಗಳಿಗೆ ಆಗುವಷ್ಟು ಜಾನುವಾರುಗಳ ಮೇವು ಲಭ್ಯವಿದ್ದು, ಯಾವುದೇ ರೀತಿಯ ಕೊರತೆ ಇಲ್ಲ ಎಂದು ಪಶುಪಾಲನಾ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದಾಗ ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಬೇಸಿಗೆ ಅವಧಿಯಲ್ಲಿ ಜಾನುವಾರುಗಳಿಗೆ ಮೇವು ಅಭಾವವಾಗದಂತೆ ಸಂಗ್ರಹಣೆಗೆ ಆದ್ಯತೆ ನೀಡಬೇಕೆಂದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಶೇಖರ್, ಜಿಲ್ಲೆಯ ಎಲ್ಲಾ ತಾಲ್ಲೂಕು ತಹಶೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

### ಅಧಿಕಾರಿಗಳ ಗಮನಕ್ಕೆ ತರಬೇಕು

**ಕುಡಿಯುವ ನೀರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಏನೇ ಘಟನೆಗಳು, ಅವಘಡಗಳು, ಸಮಸ್ಯೆಗಳು ಎದುರಾದ ಕೂಡಲೇ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರಬೇಕು. ಇದೀಗ ಬೇಸಿಗೆ ಕಾಲವಾದ್ದರಿಂದ ಕುಡಿಯುವ ನೀರನ್ನು ಶೇಖರಿಸುವ ಟ್ಯಾಂಕರ್‌ಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಸ್ವಚ್ಛಗೊಳಿಸಬೇಕು, ಕುಡಿಯುವ ನೀರು ಪೂರೈಸುವ ಮಾರ್ಗದ ಪೈಪ್‌ಗಳನ್ನು ತುಂಡರಿಸದಂತೆ ಗಮನ ಹರಿಸಬೇಕು.**

**ಬೇಸಿಗೆ ಕಾಲವಾದ್ದರಿಂದ ಕುಡಿಯುವ ನೀರನ್ನು ಮುಖ್ಯವಾಗಿ ಈ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಬೇಕು. ಇಲ್ಲವಾದಲ್ಲಿ ಮಳೆಗಾಲದಲ್ಲಿ ಕುಡಿಯುವ ನೀರಿಗೆ ಕಲುಷಿತ ನೀರು ಮಿಶ್ರಣಗೊಳ್ಳುವ ಸಾಧ್ಯತೆ ಇರುತ್ತದೆ. ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.**

ಸಾರ್ವಜನಿಕರಿಗೆ ಜಾಗೃತಿ

## ಮಹಿಳಾ ಮೋರ್ಚಾ ಪ್ರತಿಭಟನೆ

• ಉದಯವಾಹಿನಿ, ಮುಳಬಾಗಿಲು

ಕೇಂದ್ರ ಸರ್ಕಾರ ಮಹಿಳೆಯರಿಗಾಗಿ ಶೇ 33 ರಷ್ಟು ಮೀಸಲಾತಿ ನೀಡಲು ಹೊರಟಿದ್ದ ಅನುಮೋದನೆಗೆ ವಿರೋಧ ಪಕ್ಷಗಳು ಅಡ್ಡಿಪಡಿಸಿ ಮಹಿಳೆಯರ ಹಕ್ಕುಗಳನ್ನು ಹತ್ತಿಕ್ಕಲು ಹೊರಟಿವೆ ಎಂದು ಸೋಮವಾರ ಬಿಜೆಪಿ ಪಕ್ಷದ ಮಹಿಳಾ ಮೋರ್ಚಾ ಹಾಗೂ ಮುಖಂಡರು ನಗರದಲ್ಲಿ ಪ್ರತಿಭಟನೆ ನಡೆಸಿದರು. ನಗರದ ಕೆಇಬಿ ವೃತ್ತದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಹಾಗೂ ಪಕ್ಷದ ಮುಖಂಡರು ಕಾಂಗ್ರೆಸ್ ಮತ್ತಿತರರ ವಿರೋಧ ಪಕ್ಷಗಳ ವಿರುದ್ಧ ಬ್ಯಾನರ್ ಹಿಡಿದು ಹಾಗೂ ಧಿಕ್ಕಾರ ಕೂಗಿ ಮಹಿಳಾ ಮೀಸಲಾತಿಯನ್ನು ವಿರೋಧಿಸಿದ ನೀತಿಯನ್ನು ಖಂಡಿಸಿದರು. ಕೇಂದ್ರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ ನೀಡಿ ಮಹಿಳೆಯರಿಗೆ ಪುರುಷರಷ್ಟೇ ಅವಕಾಶಗಳನ್ನು ನೀಡಿ ಮಹಿಳೆಯರನ್ನು ಸಶಕ್ತರಾಗಿಸಲು ಹೊರಟಿತ್ತು. ಇದನ್ನು ಸಹಿಸದ ಕಾಂಗ್ರೆಸ್ ಮತ್ತಿತರರ ಇಂಡಿಯಾ ಕೂಟದ ಪಕ್ಷಗಳು ಮಸೂದೆಯನ್ನು ವಿರೋಧಿಸಿ ಮಹಿಳೆಯರನ್ನು ಅವಕಾಶಗಳಿಂದ ವಂಚಿತರಾಗುವಂತೆ ಮಾಡಿವೆ ಎಂದು ಪ್ರತಿಭಟನಾಕಾರರು ದೂರಿದರು. ಇನ್ನಾದರೂ ಕಾಂಗ್ರೆಸ್ ಸೇರಿದಂತೆ ಇಂಡಿಯಾ ಒಕ್ಕೂಟದ ಪಕ್ಷಗಳು ಮಸೂದೆ ಸದನದಲ್ಲಿ ಪಾಸಾಗುವಂತೆ ಸಹಕಾರ ನೀಡಿ, ನಿಂತು ಹೋದ ಮೀಸಲಾತಿಯನ್ನು ಪುನಃ ಕೇಂದ್ರ ಸರ್ಕಾರ ಎತ್ತಿಕೊಳ್ಳುವಂತೆ ಮಾಡಬೇಕು. ಇಲ್ಲವಾದಲ್ಲಿ ಮುಂದೆ ರಾಜ್ಯದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

## ಅವೈಜ್ಞಾನಿಕ ರಸ್ತೆ ನಿರ್ಮಾಣ: ಪ್ರತಿಭಟನೆ

• ಉದಯವಾಹಿನಿ, ಪಾವಗಡ

ತಾಲ್ಲೂಕಿನಲ್ಲಿ ಕೈಗೊಳ್ಳಲಾಗಿರುವ ಅವೈಜ್ಞಾನಿಕ ರಸ್ತೆ ಕಾಮಗಾರಿ ಹಾಗೂ ದೂಳಿನ ಸಮಸ್ಯೆಯಿಂದ ಹೈರಾಣಾದ ಸಾರ್ವಜನಿಕರು ರಸ್ತೆ ತಡೆದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚಿಕ್ಕನಾಯಕನಹಳ್ಳಿ- ತಿಪಟೂರು ರಸ್ತೆಯ ವಡೆರಹಳ್ಳಿ ಗ್ರಾಮದಲ್ಲಿ ರಸ್ತೆ ನಿರ್ಮಾಣಕ್ಕಾಗಿ ಹರಡಲಾಗಿರುವ ಜಲ್ಲಿ ಕಲ್ಲುಗಳು ಹಾಗೂ ದೂಳಿನಿಂದ ಬೇಸತ್ತ ಸಾರ್ವಜನಿಕರು ಭಾನುವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ರಸ್ತೆ ಕಾಮಗಾರಿ ಆರಂಭಿಸಿ ಹಲವು ದಿನಗಳಾಗಿದ್ದರೂ ಕೇವಲ ಜಲ್ಲಿಯನ್ನು ಹರಡಿ ಹಾಗೆಯೇ ಬಿಡಲಾಗಿದೆ. ಬೇಸಿಗೆಯ ವಾಹನ ಸಂಚರಿಸುವಾಗ ಅತಿಯಾದ ದೂಳು ಏಳುತ್ತಿದೆ. ರಸ್ತೆ ಪಕ್ಕದ ಮನೆಗಳಿಗೆ ನುಗ್ಗುತ್ತಿದೆ. ಹಿರಿಯರು ಹಾಗೂ ಮಕ್ಕಳು ಉಸಿರಾಟದ ತೊಂದರೆಗೆ ಈಡಾಗುತ್ತಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಪಿಡಬ್ಲ್ಯೂಡಿ ಅಧಿಕಾರಿ ತಿಮ್ಮಣ್ಣ ಹಾಗೂ ಪೊಲೀಸರು ಪರಿಸ್ಥಿತಿಯನ್ನು ತಿಳಿಗೊಳಿಸಿ. ಕ್ರಮ ಕೈಗೊಳ್ಳುವ ಭರವಸೆ ನೀಡಿದ ನಂತರ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

**ಕುಪ್ಪೂರಿನಲ್ಲಿ ರಸ್ತೆಗೆ ಮರದ ದಿಮ್ಮಿ ಇಟ್ಟು ಪ್ರತಿಭಟನೆ:** ಪಟ್ಟಣದಿಂದ ಕೈಮಾರದ ನಡುವೆ ಇರುವ ಕುಪ್ಪೂರು ಗ್ರಾಮದಲ್ಲಿ ನಡೆಯುತ್ತಿರುವ ಕಳಪೆ ಹಾಗೂ ಅವೈಜ್ಞಾನಿಕ ರಸ್ತೆ ಕಾಮಗಾರಿಯಿಂದ ಬೇಸತ್ತ ಜನರು ರಸ್ತೆಗೆ ಮರದ ದಿಮ್ಮಿಗಳನ್ನು ಅಡ್ಡಲಾಗಿ ಹಾಕಿ ಪ್ರತಿಭಟಿಸಿದರು.

ವನ್ಯಜೀವಿಗಳು ನೀರಿಗಾಗಿ ಅಲೆಯಬೇಕಾದ ಸ್ಥಿತಿ | ಅಂತರ್ಜಲ ಮಟ್ಟ ಕುಸಿದು ನೀರಿಗೆ ಹಾಹಾಕಾರ

# ಬತ್ತಿದ ಪಾಲಾರ್ ಹಳ್ಳ: ಕಾಡಿನಲ್ಲಿ ಬವಣೆ

• ಉದಯವಾಹಿನಿ, ಚಾಮರಾಜನಗರ

ತಾಲ್ಲೂಕಿನ ಹೂಗ್ಯಂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹರಿಯುವ ಪಾಲಾರ್ ಹಳ್ಳ ಸಂಪೂರ್ಣವಾಗಿ ಬತ್ತಿದ್ದು, ಜನ ಜಾನುವಾರು, ಕಾಡು ಪ್ರಾಣಿಗಳಿಗೂ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಅಲ್ಲದೇ, ಬೇಟೆಯ ಆತಂಕ ಎದುರಾಗಿದೆ. ರಾಜ್ಯದ ಗಡಿಯಲ್ಲಿನ ಮಾಕನಪಾಳ್ಯದಿಂದ ಆರಂಭವಾಗುವ ಹಳ್ಳವು ಕಾವೇರಿ ನದಿಯ ಭಾಗ. ಪ್ರತಿ ವರ್ಷ ಮಳೆಗಾಲದಲ್ಲಿ ತುಂಬಿ ಹರಿಯುವ ಹಳ್ಳವು ಈ ಭಾಗದ ನೀರಿನ ಸಮಸ್ಯೆ ನೀಗಿಸುವುದರ ಜೊತೆಗೆ ಜನ-ಜಾನುವಾರು ಹಾಗೂ ಸಾವಿರಾರು ವನ್ಯಜೀವಿಗಳ ದಾಣಿ ತಣಿಸುವ ಜೀವನಾಡಿ.

ಕಳೆದ ವರ್ಷ ತಾಲ್ಲೂಕಿನಲ್ಲಿ ಮಳೆ ತೀವ್ರ ಕುಸಿತವಾಗಿದ್ದರಿಂದ ಹಳ್ಳದಲ್ಲಿ ಹರಿವು ತಗ್ಗಿತ್ತು. ಬೇಸಿಗೆಯ ಬಿರು ಬಿಸಲಿಗೆ ಅಲ್ಪಸ್ವಲ್ಪ ಒರತೆಯೂ ಸಂಪೂರ್ಣ ಬತ್ತಿಹೋಗಿದೆ. ವನ್ಯಜೀವಿಗಳು ನೀರಿಗಾಗಿ ಅಲೆಯಬೇಕಾಗಿದೆ.

ಪಂಚಾಯಿತಿ ವ್ಯಾಪ್ತಿಯ ಜಲ್ಲಿಪಾಳ್ಯ, ಕೂಡೂರು, ಪೆದ್ದನಪಾಳ್ಯ, ಹಂಚಿಪಾಳ್ಯ, ನೆಲ್ಲೂರು ಹಾಗೂ ಮಾರ್ಟಳ್ಳಿ ಗ್ರಾಮ ಪಂಚಾಯತಿಗೆ ಸೇರಿದ ನಾಲ್ ರೋಡ್ ಸೇರಿ ಕೆಲವು ಗ್ರಾಮಗಳು ಪಾಲಾರ್ ಹಳ್ಳಕ್ಕೆ ಹೊಂದಿಕೊಂಡಂತೆ ಇವೆ. ಪಾಲಾ ಹಳ್ಳದಲ್ಲಿ ನೀರು ಹರಿದರಷ್ಟೇ ಬೋರ್‌ವೆಲ್‌ಗಳಲ್ಲಿ ನೀರಿನ ಒರತೆ ಇರುತ್ತದೆ.

ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚು ಬಾಧಿಸುವುದಿಲ್ಲ. ಆದರೆ, ಈ ಬಾರಿ ಹಳ್ಳ ಬತ್ತಿರುವುದರಿಂದ ಅಂತರ್ಜಲ ಮಟ್ಟ ಕುಸಿದು ನೀರಿಗೆ ಹಾಹಾಕಾರ ಸೃಷ್ಟಿಯಾಗಿದೆ.


**ಸಂಕಷ್ಟ:** ತಾಲ್ಲೂಕಿನಲ್ಲಿ ಬಹುತೇಕ ರೈತರಿಗೆ ಜಾನುವಾರು ಸಾಕಣೆ ಉಪ ಕಸುಬಾಗಿದೆ. ಮೇವಿನ ಕೊರತೆ ಒಂದೆಡೆ, ಹಳ್ಳದಲ್ಲಿ ನೀರು ಬತ್ತಿರುವುದು ಚಿಂತೆ ಹೆಚ್ಚಿಸಿದೆ. ಬೆಳೆಗಳು ಒಣಗುತ್ತಿವೆ. ಜಾನುವಾರುಗಳಿಗೂ ಕುಡಿಯಲು ನೀರಿಲ್ಲ. ಮುಂದೆ ಪರಿಸ್ಥಿತಿ ಗಂಭೀರ ವಾಗಲಿದೆ' ಎನ್ನುತ್ತಾರೆ ಹಂಚಿಪಾಳ್ಯದ ಮುನಿಯಪ್ಪ.

ಉದಯವಾಹಿನಿ ಚಿತ್ರ



### ಕಳ್ಳಬೇಟೆಗೆ ಅನುಕೂಲ

ಪಾಲಾರ್ ಹಳ್ಳದಲ್ಲಿ ನೀರಿಲ್ಲದಿರುವುದು ಬೇಟೆಗಾರರಿಗೆ ವರವಾಗಿ ಪರಿಣಮಿಸಿದೆ. ತಮಿಳುನಾಡು ಭಾಗದಿಂದ ಸುಲಭವಾಗಿ ಪಾಲಾರ್ ಹಳ್ಳ ದಾಟಿ ರಾಜ್ಯದ ಅರಣ್ಯದೊಳಗೆ ಅಕ್ರಮವಾಗಿ ನುಸುಳುವ ಆತಂಕವೂ ಅರಣ್ಯಾಧಿಕಾರಿಗಳಿಗೆ ಎದುರಾಗಿದೆ. ರಾತ್ರಿ ವೇಳೆ ಹಳ್ಳ ದಾಟಿ ಬರುವ ಬೇಟೆಗಾರರು ವನ್ಯಜೀವಿಗಳನ್ನು ಬೇಟೆಯಾಡಿ ಹಳ್ಳದ ಮೂಲಕ ತಮಿಳುನಾಡಿಗೆ ಕೊಂಡೊಯ್ಯುವ ಸಾಧ್ಯತೆಗಳು ಹೆಚ್ಚಿವೆ. ಅರಣ್ಯ ಇಲಾಖೆ ಸಿಬ್ಬಂದಿ ಪಾಲಾರ್ ಹಳ್ಳದ ಸಮೀಪ ಪ್ರತಿರಾತ್ರಿ ಗಸ್ತು ತಿರುಗುವ ಅನಿವಾರ್ಯತೆ ಎದುರಾಗಿದೆ.



ಬೇಸಿಗೆ ಎರಡು ತಿಂಗಳು ಇರಲಿದೆ. ಏಪ್ರಿಲ್‌ನಲ್ಲಿಯೇ ಕಾಣಿಸಿಕೊಂಡಿರುವ ಸಮಸ್ಯೆ ಭೀತಿ ಹುಟ್ಟಿಸಿದೆ. ಕಳೆದ ವರ್ಷವ ಮಳೆ ಕಡಿಮೆ ಆಗಿತ್ತು. ಈ ವರ್ಷವೂ ನಿರೀಕ್ಷಿತ ಮಳೆ ಬೀಳುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ರೈತರು ಕೂಲಿಗೆ ಗುಳೆ ಹೋಗಬೇಕಾದ ಸ್ಥಿತಿ ಎದುರಾಗಬಹುದು' ಎನ್ನುತ್ತಾರೆ ಕೂಡೂರು ಗ್ರಾಮದ ಮಾದೇವ.

ಬಿಸಿಲಿನ ತಾಪ ತಾಳಲಾರದೆ ಕಾಡಾನೆಗಳ ಹಿಂಡು ನೀರಿನ ಮೂಲ ಹುಡುಕಿಕೊಂಡು ಹೋಗುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗೆ ಹರಿದಾಡಿತ್ತು. ಪಾಲಾರ್ ಹಳ್ಳದ ಕೆಲವೆಡೆ ಗುಂಡಿಗಳಲ್ಲಿ ನೀರು ನಿಂತಿದ್ದು, ಅದನ್ನೇ ವನ್ಯಪ್ರಾಣಿಗಳು ಹುಡುಕಿ ಕುಡಿಯುತ್ತಿವೆ.

### ಟ್ಯಾಂಕರ್ ನೀರು ಪೂರೈಕೆ

**ಮಲೆ ಮಹದೇಶ್ವರ ವನ್ಯಜೀವಿ ವಲದಯಲ್ಲಿ ಹರಿಯುವ ಪಾಲಾರ್ ಹಳ್ಳ ಬತ್ತಿದ್ದು ಅಲ್ಲಲ್ಲಿ ಗುಂಡಿಗಳಲ್ಲಿ ಸಂಗ್ರಹವಾಗಿರುವ ನೀರನ್ನು ಪ್ರಾಣಿಗಳು ಕುಡಿಯುತ್ತಿವೆ.**

**ನಿಂತ ನೀರಾಗಿರುವ ಕಾರಣ ಕುಡಿಯಲು ಯೋಗ್ಯವಾಗಿದೆಯೇ ಎಂದು 15 ದಿನಗಳಿಗೊಮ್ಮೆ ಪರೀಕ್ಷೆ ನಡೆಸಲಾಗುತ್ತಿದೆ. ಕಾವೇರಿ ಹಾಗೂ ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ 15 ಕಡೆಗಳು ನೀರಿನ ಕಟ್ಟೆಗಳನ್ನು ಕಟ್ಟಲಾಗಿದ್ದು ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಹೂಗ್ಯಂ, ಉಡುತೊರೆ, ದೊಡ್ಡಹಳ್ಳ, ದೇವರಮಡು ಹಳ್ಳದಲ್ಲಿ ನೀರಿದ್ದು ಸಧ್ಯಕ್ಕೆ ಪರಿಸ್ಥಿತಿ ಗಂಭೀರವಾಗಿಲ್ಲ ಎಂದು ಮಲೆ ಮಹದೇಶ್ವರ ವನ್ಯಜೀವಿ ಧಾಮ ಡಿಸಿಎಫ್ ಭಾಸ್ಕರ್ ತಿಳಿಸಿದ್ದಾರೆ.**

ಗುಂಡಿಗಳಲ್ಲಿ ಸಂಗ್ರಹವಾಗಿರುವ ನೀರು

# ಕುರ್ಚಿ ಪೈಪೋಟಿ: ಸಮಸ್ಯೆ ಸ್ಪಂದನೆಗೆ ನಿರಾಸಕ್ತಿ


• ಉದಯವಾಹಿನಿ, ಕುಣಿಗಲ್

ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಕಾಂಗ್ರೆಸ್ ಮುಖಂಡರು ಪೈಪೋಟಿ ನಡೆಸುತ್ತಿದ್ದು, ಜನಸಮಸ್ಯೆಗೆ ಸ್ಪಂದನೆ ಸಿಗದೆ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಹುಲಿಯೂರುದುರ್ಗ ಹೋಬಳಿಯ ಮಾದಪ್ಪನಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನದ ಉದ್ಘಾಟನೆ ಹಾಗೂ ಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾನೇ ಐದುವರ್ಷ ಮುಖ್ಯಮಂತ್ರಿ ಎಂದು ಸಿ.ಎಂ ಹೇಳುತ್ತಿದ್ದರೆ ಎರಡುವರೆ ವರ್ಷ ನಾನೂ ಮುಖ್ಯಮಂತ್ರಿ ಎಂದು ಉಪಮುಖ್ಯಮಂತ್ರಿ ಎಂದು ಹೇಳುತ್ತಾ ತಮ್ಮ ಬೆಂಬಲಿಗರೊಂದಿಗೆ ಬಲ ಪ್ರದರ್ಶನ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ. ಮಾದಕವಸ್ತು ಮಾರಾಟ ಮತ್ತು

ಉದಯವಾಹಿನಿ ಚಿತ್ರ



ಸೇವನೆ ಹೆಚ್ಚಾಗುತ್ತಿದ್ದು, ಅನಾಚಾರ, ಅಕ್ರಮ ಹೆಚ್ಚಾಗುತ್ತಿದ್ದು ನಿಯಂತ್ರಿಸಲು ಸರ್ಕಾರ ವಿಫಲವಾಗಿದೆ' ಎಂದರು.

ತಾಲ್ಲೂಕಿನಲ್ಲಿ ಮಾಜಿ ಸಚಿವ ಡಿ.ನಾಗರಾಜಯ್ಯ ಮತ್ತು ಸಹೋದರ ಡಿ.ಕೃಷ್ಣಕುಮಾರ್ ಒಂದಾಗಿದ್ದರೆ ಪಕ್ಷಕ್ಕೆ, ತಾಲ್ಲೂಕಿಗೆ ಸಂಕಷ್ಟ ಸ್ಥಿತಿ ಬರುತ್ತಿರಲಿಲ್ಲ ಎಂದರು. ಬೆಂಗಳೂರು ಗ್ರಾಮಾಂತರ ಸಂಸದ ಡಾ.ಮಂಜುನಾಥ್, ರಾಜ್ಯದಲ್ಲಿ ಮೆಡಿಕಲ್ ಸ್ಟೋರ್‌ಗಿಂತ ವೈನ್ಸ್ ಸ್ಟೋರ್‌ಗಳು ಹೆಚ್ಚಾಗುತ್ತಿರುವುದು ಕಳವಳಕಾರಿ.

ಆರೋಗ್ಯ ಕಾಪಾಡುವ ಕೇಂದ್ರಗಳಿಗಿಂತ ಆರೋಗ್ಯ ಹಾಳುಮಾಡುವ ಅಂಗಡಿ ಹೆಚ್ಚಾಗುತ್ತಿರುವುದು ಸಮಾಜದ ಭವಿಷ್ಯಕ್ಕೆ ಅಪಾಯಕಾರಿ. ಕುಟುಂಬಗಳ ಶಾಂತಿ, ಯುವಜನರ ಭವಿಷ್ಯ ಮತ್ತು ಸಮಾಜದ ಸುಸ್ಥಿರತೆಗೆ ಮದ್ಯಪಾನ ನಿಯಂತ್ರಿಸುವುದು ಅತ್ಯಗತ್ಯ. ವಾರದಲ್ಲಿ ಕನಿಷ್ಠ ಒಂದು ದಿನವಾದರೂ ವೈನ್ಸ್ ಸ್ಟೋರ್ ಕಡ್ಡಾಯವಾಗಿ ಮುಚ್ಚುವ ಕಾನೂನು ತರಬೇಕು ಎಂದರು. ಆದಿ ಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಶಾಸಕ ಮುನಿರತ್ನ, ಮಾಜಿ ಸಚಿವ ಡಿ.ನಾಗರಾಜಯ್ಯ, ತುಮುಲ್ ನಿರ್ದೇಶಕ ಡಿ.ಕೃಷ್ಣಕುಮಾರ್, ಸಾಹಿತಿ ದುರ್ಗದ ರಾಜೇಗೌಡ, ಡಾ.ಬಿ.ಎನ್ ರವಿ, ಬಿ.ಎನ್ ಜಗದೀಶ ನಟರಾಜ್, ಶಂಕರ್, ದೇವಸ್ಥಾನ ಸಮಿತಿ ಅಧ್ಯಕ್ಷರು, ಸದಸ್ಯರು ಇದ್ದರು.


# ಜಲ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ: ಸಂಸದ ಡಾ. ಸಿ.ಎನ್. ಮಂಜುನಾಥ್

• ಉದಯವಾಹಿನಿ, ರಾಮನಗರ

ನೀರು ಎಂಬುದು ಜೀವನದ ಮೂಲಾಧಾರ. ನಮ್ಮ ದೇಹದಲ್ಲೇ ಸುಮಾರು 60 ಶೇಕಡಾ ನೀರಿನಾಂಶವಿದ್ದು, ನೀರನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ ಎಂದು ಸಂಸದ ಡಾ.ಸಿಎನ್ ಮಂಜುನಾಥ್ ಹೇಳಿದರು. ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಾಡಬಾಳ್ ಹೋಬಳಿ ಮೇಲನಹಳ್ಳಿ ಗ್ರಾಮದಲ್ಲಿ ಬ್ಯಾಂಕ್ ಆಫ್ ಬರೋಡ ವತಿಯಿಂದ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಕೆಲವು ಕಡೆ 800 ರಿಂದ 1000 ಅಡಿ ಭೂಮಿ ಕೊರೆದರು ನೀರು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಆದ್ದರಿಂದ ಪರಿಸರ ಸಂರಕ್ಷಣೆ, ಹೆಚ್ಚು ಗಿಡ-ಮರಗಳನ್ನು ನೆಡುವುದು ಹಾಗೂ ಜಲಸಂಪತ್ತನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು ಎಂದು ಕರೆ ನೀಡಿದರು. ತಮ್ಮ ಸಂಸದರ

ಉದಯವಾಹಿನಿ ಚಿತ್ರ



ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಸುಮಾರು 100ಕ್ಕೂ ಹೆಚ್ಚು ಕುಡಿಯುವ ನೀರಿನ ಯೋಜನೆಗಳನ್ನು ಕುಣಿಗಲ್, ಮಾಗಡಿ, ರಾಮನಗರ, ಚನ್ನಪಟ್ಟಣ ಸೇರಿದಂತೆ ಅನೇಕ ಕಡೆಗಳಲ್ಲಿ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಜಾರಿಗೆ ತಂದಿದ್ದೇವೆ. ಇಂತಹ ಜನಪರ ಕಾರ್ಯಗಳಲ್ಲಿ ಬ್ಯಾಂಕ್ ಆಫ್ ಬರೋಡದ ಪಾತ್ರ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುದ್ರಾ ಲೋನ್ ಯೋಜನೆಯ ಮೂಲಕ ದೇಶದ ಸಣ್ಣ ಉದ್ಯಮಿಗಳಿಗೆ, ಮಹಿಳೆಯರಿಗೆ, ಯುವಕರಿಗೆ ಹಾಗೂ ಸ್ವಯಂ ಉದ್ಯೋಗ ಆರಂಭಿಸಲು ಬಯಸುವವರಿಗೆ ಅಪಾರ ಸಹಾಯ ದೊರಕಿದೆ.

ಕಳೆದ ಏಳು ವರ್ಷಗಳಲ್ಲಿ ಸುಮಾರು 32 ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು 52 ಕೋಟಿ ಜನರಿಗೆ ವಿತರಿಸಲಾಗಿದೆ. ಬಡವರು ಸಾಲ ಪಡೆದರೆ ಪ್ರಾಮಾಣಿಕವಾಗಿ ಮರುಪಾವತಿ ಮಾಡುತ್ತಾರೆ. ಅವರ ಆರ್ಥಿಕ ಶಿಸ್ತು ಮತ್ತು ಹೃದಯ ಶ್ರೀಮಂತಿಕೆ ನಿಜಕ್ಕೂ ಅಭಿನಂದನೀಯ ಎಂದು ಶ್ಲಾಘಿಸಿದರು.

ಇಂತಹ ಸೇವಾ ಮನೋಭಾವದಿಂದ ಬ್ಯಾಂಕ್ ಆಫ್ ಬರೋಡ ಸಮಾಜಮುಖಿ ಕೆಲಸಗಳ ಮೂಲಕ ಕುಡಿಯುವ ನೀರು, ಆಸ್ಪತ್ರೆಗಳ ಪುನಶ್ಚೇತನ, ಶಾಲೆಗಳ ಅಭಿವೃದ್ಧಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಸಹಾಯ ಮಾಡುವ ಮೂಲಕ ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆ ತರುತ್ತಿದೆ.

ಇಂತಹ ಸೇವಾ ಮನೋಭಾವದಿಂದ ಮಾಡಿದ ಕಾರ್ಯಗಳು ಸಮಾಜಕ್ಕೆ ಮಾದರಿಯಾಗಿದ್ದು, ಬ್ಯಾಂಕ್ ಆಫ್ ಬರೋಡದ ಈ ಉತ್ತಮ ಪ್ರಯತ್ನವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬ್ಯಾಂಕ್ ಆಫ್ ಬರೋಡ ಮುಖ್ಯ ಮಹಾಪ್ರಬಂಧಕರಾದ ಮನೋಜ್ ಚಯನಿ, ಮಾಗಡಿ ಬಿಜೆಪಿ ಅಧ್ಯಕ್ಷ ಪ್ರಸಾದ್ ಗೌಡ, ಜೆಡಿಎಸ್ ಮುಖಂಡ ತಮ್ಮಣ್ಣ ಗೌಡ ಹಾಗೂ ಬ್ಯಾಂಕ್ ಆಫ್ ಬರೋಡದ ಸಿಬ್ಬಂದಿ ವರ್ಗ, ಹಲವು ಗಣ್ಯರು ಮತ್ತು ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಜನಪರ ಕಾರ್ಯಗಳಲ್ಲಿ ಬ್ಯಾಂಕ್ ಆಫ್ ಬರೋಡ ಪಾತ್ರ ಶ್ಲಾಘನೀಯ

## ತಹಶೀಲ್ದಾರ್‌ರಿಂದ ಗಣತಿದಾರರಿಗೆ ಸತ್ಕಾರ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಹುಲಸೂರ

ಮೊದಲ ಹಂತದ ಗಣತಿ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ 36 ಜನ ಗಣತಿದಾರರು ಹಾಗೂ ಅವರ ಮೇಲ್ವಿಚಾರಕರನ್ನು ತಾಲ್ಲೂಕು ಆಡಳಿತ ವತಿಯಿಂದ ಸತ್ಕರಿಸಲಾಯಿತು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ, ಸಾರ್ವಜನಿಕರ ಸಹಕಾರದೊಂದಿಗೆ ಕಾರ್ಯ ನಿರ್ವಹಿಸಿದ ಗಣತಿದಾರರು ಹಾಗೂ ಮೇಲ್ವಿಚಾರಕರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿರುವುದು ಇತರರಿಗೆ ಮಾದರಿಯಾಗಿದೆ.

ಮುಂದಿನ ಹಂತಗಳಲ್ಲಿಯೂ ಇದೇ ಉತ್ಸಾಹ ಹಾಗೂ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಿ' ಎಂದರು. ಉಪತಹಶೀಲ್ದಾರ್ ಸಂಜುಕುಮಾರ ಅವರು ಮಾತನಾಡಿ, ಗಣತಿ ಕಾರ್ಯವು ಕೇವಲ ಅಂಕಿಅಂಶಗಳ ಸಂಗ್ರಹವಲ್ಲ, ಜನಜೀವನದ ನೈಜ ಸ್ಥಿತಿಗತಿಗಳನ್ನು ಸರ್ಕಾರದ ಮುಂದೆ ಇಡುವ ಜವಾಬ್ದಾರಿಯುತ ಕಾರ್ಯವಾಗಿದೆ.

# ಮಲ್ಲಯ್ಯನಪುರ ಗ್ರಾಮದಲ್ಲಿ ಮೂಲ ಸೌಕರ್ಯ ಕೊರತೆ

• ಉದಯವಾಹಿನಿ, ಗುಂಡ್ಲುಪೇಟೆ

ಸರ್ಕಾರದಿಂದ ಸ್ವಚ್ಛಭಾರತ್ ಯೋಜನೆಯಡಿ ಲಕ್ಷಾಂತರ ರೂ ಖರ್ಚಾಗುತ್ತಿದ್ದರೂ ಸಹ ಯಾವುದೇ ಪ್ರಯೋಜನವಾಗದೆ ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಸಹ ಸ್ವಚ್ಛತೆ ಮರೀಚಿಕೆಯಾಗಿ ಉಳಿದಿದೆ ಎಂಬುದಕ್ಕೆ ಕೂತನೂರು ಗ್ರಾಮಪಂಚಾಯತಿಗೆ ಸೇರಿದ ಮಲ್ಲಯ್ಯನಪುರ ಗ್ರಾಮವೇ ನಿದರ್ಶನವಾಗಿದೆ. ಗುಂಡ್ಲುಪೇಟೆ ತಾಲ್ಲೂಕು ಮಲ್ಲಯ್ಯನಪುರ ಗ್ರಾಮದಲ್ಲಿ ಹಿಂದಿನಿಂದಲೂ ಸಹ ಮೂಲ ಸೌಕರ್ಯ ಕೊರತೆಯಿದೆ. ಎಲ್ಲೆಂದರಲ್ಲಿ ಕಸದ ರಾಶಿ ಚರಂಡಿಗಳಲ್ಲಿ ತುಂಬಿದ ಕೊಳಚೆ ನೀರು, ರಸ್ತೆಯುದ್ದಕ್ಕೂ ಅಶುಚಿತ್ವ ವಾತಾವರಣದೊಟ್ಟಿಗೆ ಜನರು ಜೀವನದೂಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ತಾಲ್ಲೂಕಿನ ಕೂತನೂರು ಗ್ರಾಮಪಂಚಾಯತಿ ಆಡಳಿತ ನಿರ್ಲಕ್ಷ್ಯಕ್ಕೆ ಜನಸಾಮಾನ್ಯರು ಸಾಂಕ್ರಾಮಿಕ ರೋಗದ ಭೀತಿ ಎದುರಿಸುವಂತಾಗಿದೆ

ಸ್ವಚ್ಛಭಾರತ್ ಮಿಷನ್ ಯೋಜನೆಯು ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಂಪೂರ್ಣವಾಗಿ ಹಳ್ಳಹಿಡಿದಿದೆ , ಸ್ವಾತಂತ್ರ್ಯ ಬಂದು 75 ವರ್ಷಗಳೆ ಕಳೆದರೂ ಸಹ ಮೂಲಸೌಕರ್ಯಕ್ಕಾಗಿ ಪರದಾಡುತ್ತಿರುವುದು ವಿಷಾದಕರ ಸಂಗತಿಯಾಗಿದೆ, ಕೂಡಲೇ ಗ್ರಾಮಪಂಚಾಯತಿ ಆಡಳಿತ ಮಂಡಳಿ ಸ್ವಚ್ಛತಾ ಕಾರ್ಯಕ್ಕೆ ಮುಂದಾಗಬೇಕು

ಉದಯವಾಹಿನಿ ಚಿತ್ರ




ಇಲ್ಲವಾದಲ್ಲಿ ದೊಟ್ಟಮಟ್ಟದಲ್ಲಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ರೈತ ಮುಖಂಡ ನಾಗಪ್ಪ ಎಚ್ಚರಿಸಿದ್ದಾರೆ. ಕೂಡಲೇ ಗ್ರಾಮಪಂಚಾಯತಿ ಆಡಳಿತ ಮೂಲಭೂತ ಸವಲತ್ತುಗಳಿಗಾಗಿ ಹಲವಾರು ವರ್ಷಗಳಿಂದ ಕೋರಿಕೆ ಸಲ್ಲಿಸುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ , ಕುಂಭಕರ್ಣ ನಿದ್ರೆಗೆ ಜಾರಿರುವ ಜಿಲ್ಲಾಡಳಿತ ಎಚ್ಚೆತ್ತುಕೊಳ್ಳಬೇಕಿದೆ ಇಲ್ಲವಾದಲ್ಲಿ ಗ್ರಾಮಾಂತರ ಪ್ರದೇಶದ ಜನರ ಶಕ್ತಿ ಏನೆಂಬುದನ್ನ ತೋರಿಸುತ್ತೇವೆ ಎಂದು ರೈತ ಮುಖಂಡ ಪುಟ್ಟೇಗೌಡ ಆಕ್ರೋಶ ಹೊರಹಾಕಿದರು.

### ಗ್ರಾಮಾಂತರ ಪ್ರದೇಶಗಳ ಸಮಸ್ಯೆ

**ಗ್ರಾಮಪಂಚಾಯತಿಯ ಅಧಿಕಾರಿಗಳ ಹಾಗೂ ಚುನಾಯಿತ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ಗ್ರಾಮಾಂತರ ಪ್ರದೇಶಗಳ ಸಮಸ್ಯೆಗಳು ಜಟಿಲವಾಗುತ್ತಿವೆ, ಅಭಿವೃದ್ಧಿ ವಿಚಾರದಲ್ಲಿ ಅಂತರ್ಗತವಾಗುತ್ತಿರುವ ಸಂಬಂಧಪಟ್ಟ ಇಲಾಖೆ ಶ್ರೇಣೀಕೃತ ಅಧಿಕಾರಿಗಳು ಜನಸಾಮಾನ್ಯರ ಕೂಗಿಗೆ ಕಿವಿಗೊಡುವ ಗೋಜಿಗೆ ಹೋಗುತ್ತಿಲ್ಲ.**

## ಮಿನಿ ನ್ಯೂಸ್

### ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಪಧಾಧಿಕಾರಿಗಳ ಆಯ್ಕೆ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಗುಂಡ್ಲುಪೇಟೆ

ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ನೂತನ ಪಧಾಧಿಕಾರಿಗಳನ್ನ ಸಂಸ್ಥಾಪಕ ಅಧ್ಯಕ್ಷ ಗಿರೀಶ್ ಶಿವಾರ್ಚಕ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರವರ ಸಮ್ಮುಖದಲ್ಲಿ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಸಂಘಟನೆ ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷ ರಂಗಪ್ಪನಾಯಕ್ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯ ಬಳಿಕ ನೂತನ ಪಧಾಧಿಕಾರಿಗಳು ಸೇರ್ಪಡೆ ಕಾರ್ಯಕ್ರಮವನ್ನ ಹಮ್ಮಿಕೊಳ್ಳಲಾಗಿತ್ತು. ನೂತನವಾಗಿ ತಾಲ್ಲೂಕು ಅಧ್ಯಕ್ಷರನ್ನಾಗಿ ಅಬ್ದುಲ್ ರಶೀದ್ ಅವರನ್ನ ಆಯ್ಕೆ ಮಾಡಿದರೆ ಈ ಹಿಂದೆ ಕಾರ್ಯಪ್ರವೃತ್ತರಾಗಿದ್ದ ರಂಗಪ್ಪ ನಾಯಕ್‌ರನ್ನ ಸಂಘಟನೆ ಜಿಲ್ಲಾ ಯುವಘಟಕದ ಅಧ್ಯಕ್ಷ ,ಗುಂಡ್ಲುಪೇಟೆ ತಾಲ್ಲೂಕು ಉಸ್ತುವಾರಿಯನ್ನಾಗಿ ನೇಮಕ ಮಾಡಲಾಯಿತು.

ತಾಲ್ಲೂಕು ಘಟಕದ ಕಾರ್ಯದರ್ಶಿಯಾಗಿ ಸ್ವಾಮಿ, ಜಿಲ್ಲಾ ಕಾರ್ಮಿಕ ಘಟಕ ಅಧ್ಯಕ್ಷರಾಗಿ ಮುತ್ತಣ್ಣ, ಜಿಲ್ಲಾ ಕಾರ್ಯದರ್ಶಿಯಾಗಿ ಯೋಗೀಶ್, ಜಿಲ್ಲಾ ಗೌರವಾಧ್ಯಕ್ಷ ಶಿವಕುಮಾರ್, ಜಿಲ್ಲಾ ಉಪಾಧ್ಯಕ್ಷ ಗಿರೀಶ್, ತಾ.ಪ್ರದಾನ ಕಾರ್ಯದರ್ಶಿ ಜಾಫರ್, ತಾ.ಗೌರವಾಧ್ಯಕ್ಷ ರೆಹಮತ್ ಉಲ್ಲಾಖಾನ್, ಜಿಲ್ಲಾ ಯುವಘಟಕ ಕಾರ್ಯದರ್ಶಿ ವಿದ್ಯಾದರ್, ಸದಸ್ಯರನ್ನಾಗಿ ಶಿವಪುರ ರವಿ ಆಯ್ಕೆ ಮಾಡಿ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ನಮ್ಮ ಕರ್ನಾಟಕ ಸೇನೆ ಜಿಲಾಧ್ಯಕ್ಷ ಸುರೇಶ್ ನಾಯಕ್, ಕರವೇ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ನಾಯಕ್, ಕರವೇ ತಾ.ಅಧ್ಯಕ್ಷ ರಮೇಶ್ ನಾಯಕ್, ಯುವ ಮುಖಂಡ ರಾಜೇಶ್ ( ರಾಸ) ಕ್ರೇಜಿ ನಾಗರಾಜು, ಗಡಿನಾಡು ಬಾಬು, ರಾಮೇಗೌಡ, ರಾಜು ಹೊಸಮನೆ ಸೇರಿದಂತೆ ಹಲವರು ಹಾಜರಿದ್ದರು.

## ಪೊಲೀಸ್ ಸಮವಸ್ತ್ರದಲ್ಲೇ ಪ್ಯಾಮಿಲಿ ಜೊತೆ ಅಧಿಕಾರಿ ಸುತ್ತಾಟ

• ಉದಯವಾಹಿನಿ, ಗುಂಡ್ಲುಪೇಟೆ

ಉದಯವಾಹಿನಿ ಚಿತ್ರ



ಸಾರ್ವಜನಿಕರಿಗೆ ಕಾನೂನು ಪಾಠ ಮಾಡುವ ಪೊಲೀಸ್ ಅಧಿಕಾರಿಯೊಬ್ಬರು ಇಲಾಖೆ ನಿಯಮವನ್ನೆ ಗಾಳಿಗೆ ತೂರಿ ಸ್ವಇಚ್ಛೆಯಂತೆ ನಡೆದುಕೊಂಡಿರುವ ಕುರಿತು ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ಲಾಗಿದೆ.

ಪಟ್ಟಣ ಪೊಲೀಸ್ ಠಾಣೆಯ ಸಿಪಿಐ ಜಯಕುಮಾರ್ ಅವರು ಪತ್ನಿ ಮತ್ತು ಮಕ್ಕಳೊಟ್ಟಿಗೆ ಪೊಲೀಸ್ ಸಮವಸ್ತ್ರದಲ್ಲೇ ತೆರೆದ ಜೀಪಿನಲ್ಲಿ ಬಂಡೀಪುರ ಅಭಯಾರಣ್ಯಕ್ಕೆ ಹೊಂದಿಕೊಂಡಂತಿರುವ ಖಾಸಗಿ ಪಾರ್ಮ್ ಹೌಸಿನಲ್ಲಿ ಸುತ್ತಾಡುತ್ತಿರುವ ದೃಶ್ಯ ಅತಿ ಹೆಚ್ಚು ಗಮನ ಸೆಳೆದಿದೆ. ಬಂಡೀಪುರದ ಮೇಲುಕಾಮನಹಳ್ಳಿ ಸಮೀಪದಲ್ಲಿನ ಸಿದ್ದಿಕ್ಕಿ ಎಂಬವರ ಪಾರ್ಮ್‌ಸ್ ಸುತ್ತಲಿನ ಅತಿಸೂಕ್ಷ್ಮ ಪ್ರದೇಶದಲ್ಲಿ ಕುಟುಂಬ ಸಮೇತರಾಗಿ ಜಾಲೀರೇಡ್ ಮಾಡುತ್ತಿರುವುದು ಎಲ್ಲರ ಗಮನ ಸೆಳೆದಿದ್ದು ಅಧಿಕಾರಿ ನಡೆಯ ವಿರುದ್ಧ ಬಾರಿ ಖಂಡನೆ ವ್ಯಕ್ತವಾಗಿದೆ. ಇಷ್ಟೇ ಅಲ್ಲದೆ ತೆರೆದ ಜೀಪಿನಲ್ಲಿ ತೆರಳುತ್ತಿರುವ ದೃಶ್ಯವನ್ನ ಸೆರೆಹಿಡಿಸಿರುವ ಜಯಕುಮಾರ್ ಹಿನ್ನೆಲೆ ಸಂಗೀತಾ ಸೇರಿಸಿ ತೋರ್ಪಡಿಕೆಗೆ ಮುಂದಾಗಿರುವುದು ಕೂಡ ಟೀಕೆಗೆ ಗುರಿಯಾಗಿದೆ. ಪೊಲೀಸ್ ಇಲಾಖೆಯ ನಿಯಮಾವಳಿಗಳ ಪ್ರಕಾರ ಸಮವಸ್ತ್ರವನ್ನ ವೈಯಕ್ತಿಕ ಪ್ರಚಾರ ಹಾಗೂ ಕುಟುಂಬದ ಹಿತಾಸಕ್ತಿಗಾಗಿ ಬಳಕೆ ಮಾಡುವಂತಿಲ್ಲವಾದರೂ ಸಿಪಿಐ ಅವರ ನಡೆಗೆ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ, ಅಧಿಕಾರದ ಅಹಂನಲ್ಲಿ ಆರಕ್ಷಕ ಸಮವಸ್ತ್ರದ ಘನತೆಗೆ ದಕ್ಕೆ ತಂದಿದ್ದಾರೆ ಎಂದು ಅನೇಕರು ಸಾಮಾಜಿಕ ಜಾಲತಾಣದಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಘಟನಾ ಸಂಬಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕ್ರಮಕ್ಕೆ ಮುಂದಾಗುವರೊ ಎಂದು ಸಾರ್ವಜನಿಕರು ನಿರೀಕ್ಷೆಯಿರಿಸಿದ್ದಾರೆ.

## ಐನೋರಹುಂಡಿ: ಜ್ಞಾನ ತಪ್ಪಿ ಬಿದ್ದಿದ್ದ ಚಿರತೆ ಮರಿ ರಕ್ಷಣೆ

• ಉದಯವಾಹಿನಿ, ಬೆಳಕವಾಡಿ

ಸಮೀಪದ ಐನೋರಹುಂಡಿ ಗ್ರಾಮದ ಜಮೀನಿನಲ್ಲಿ ಬೇಟೆಗೆ ಬಂದ ಚಿರತೆ ಮರಿ ಹಾಗೂ ಸಾಕು ನಾಯಿ ನಡುವೆ ಕಾಳಗ ನಡೆದು ಜ್ಞಾನ ತಪ್ಪಿ ಬಿದ್ದಿದ್ದ ಚಿರತೆ ಮರಿಯನ್ನು ಜಮೀನಿನ ಮಾಲೀಕ ಶಾಂತರಾಜು ಹಿಡಿದು ರಕ್ಷಿಸಿ ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ. ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿನಲ್ಲಿ ಶಾಂತರಾಜು ಕೋಳಿ ಸಾಕಾಣಿಕೆ ಮಾಡಿದ್ದು, ಅಲ್ಲಿಗೆ ಕೋಳಿ ತಿನ್ನಲು ಬಂದ ಚಿರತೆ ಮರಿ ಹಾಗೂ ಸಾಕು ನಾಯಿ ನಡುವೆ ಕಾಳಗದಲ್ಲಿ ಜ್ಞಾನ ತಪ್ಪಿ ಬಿದ್ದಿದ್ದ ಚಿರತೆ ಮರಿಯನ್ನು ಬೆಳಿಗ್ಗೆ ನೋಡಿ ಹಿಡಿದು ಕೋಳಿ ಪಂಜರದಲ್ಲಿ ರಕ್ಷಿಸಿ ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿ, ಅರಣ್ಯ ಸಿಬ್ಬಂದಿ ಚಿರತೆ ಮರಿಯನ್ನು ಸುರಕ್ಷಿತವಾಗಿ ಮಳವಳ್ಳಿ ವಲಯ ಅಧಿಕಾರಿಗಳ ಕಚೇರಿಗೆ ಸಾಗಿಸಿದರು.

ಗ್ರಾಮದ ಹೊರವಲಯದಲ್ಲಿರುವ ವಲಯ ಅರಣ್ಯಾಧಿಕಾರಿ ಗವಿಯಪ್ಪ ಮಾತನಾಡಿ, ಸುಮಾರು 2 ರಿಂದ 3 ತಿಂಗಳ ಹೆಣ್ಣು ಚಿರತೆ ಮರಿ ಆರೋಗ್ಯವಾಗಿದೆ. ಮೇಲಾಧಿಕಾರಿಗಳ ಸೂಚನೆಯಂತೆ ಮುಂದಿನ ಕ್ರಮ ಕೈ ಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

## ಡಿಸಿ, ಎಸ್ಪಿಗಳಿರುವ ಬಡಾವಣೆಯಲ್ಲೇ ಜಲಕ್ಷಾಮ

• ಉದಯವಾಹಿನಿ, ಚಾಮರಾಜ ನಗರ

ಇಲ್ಲಿನ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ತಹಶೀಲ್ದಾರ್ ಸೇರಿ ಉನ್ನತ ಅಧಿಕಾರಿಗಳಿರುವ ಪಿಡಬ್ಲ್ಯೂಡಿ ಕಾಲೋನಿ, ಹೌಸಿಂಗ್ ಬೋರ್ಡ್ ಬಡಾವಣೆಗಳಲ್ಲೇ ಜಲಕ್ಷಾಮ ಎದುರಾಗಿದ್ದು, ಕಳೆದ 15 ದಿನಗಳಿಂದ ನೀರು ಪೂರೈಕೆಯಾಗದೇ ಜನರು ಪಡಿಪಾಟಲು ಪಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಕ್ಕಿಂತ ಜಿಲ್ಲಾ ಕೇಂದ್ರದಲ್ಲೇ ನೀರಿಗೆ ತತ್ವಾರ ಉಂಟಾಗಿದೆ. ಹೀಗಾಗಿ, ಇಂದು ನೂರಾರು ಮಂದಿ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ನೀರು ಪೂರೈಕೆ ಮಾಡುವಂತೆ ಮನವಿ ಮಾಡಿಕೊಂಡಿದ್ದಾರೆ. ಜೊತೆಗೆ, ಚಾಮರಾಜನಗರ ನಗರಸಭೆ ಅಧಿಕಾರಿಗಳ ವಿರುದ್ಧವೂ ಕಿಡಿಕಾರಿದ್ದಾರೆ. 15 ದಿನಕ್ಕೊಮ್ಮೆ ಅರ್ಧ ತಾಸು ನೀರನ್ನೂ ಕೂಡ ಪೂರೈಕೆ ಮಾಡುತ್ತಿಲ್ಲ. ಬಡಾವಣೆಯಲ್ಲಿ ಬಹುಪಾಲು ಮಂದಿ ನೌಕರರೇ ಇದ್ದು, ನಿತ್ಯ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ. ನಿವಾಸಿಗಳ ಜೊತೆಗೆ ಡಿಸಿ ಅವರು ನಡೆಸಿದ ಸಭೆಯಲ್ಲಿ ನಗರಸಭೆ ಅಧಿಕಾರಿಗಳು ಸುಳ್ಳು ಮಾಹಿತಿ ನೀಡಿದ್ದರಿಂದಾಗಿ ನಿವಾಸಿಗಳು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವಾರ್ಡ್ ನಂ 26ಕ್ಕೆ 2 ದಿನಕ್ಕೊಮ್ಮೆ ನೀರು ಬಿಡುತ್ತಿರುವುದಾಗಿ ನಗರಸಭೆ ಆಯುಕ್ತ ಹಾಗೂ ಇಂಜಿನಿಯರ್‌ಗಳು ಮಾಹಿತಿ ನೀಡಿದ್ದಕ್ಕೆ, ಕಳೆದ 15 ದಿನಗಳಿಂದ ಕುಡಿಯುವ ನೀರಿನ ಪೂರೈಕೆ ಮಾಡಿಲ್ಲ ಎಂದು ನಿವಾಸಿಗಳು ಹೇಳುತ್ತಿದ್ದಾರೆ ಎಂದು ನಗರಸಭೆ ಅಧಿಕಾರಿಗಳ ಮೇಲೆ ಜಿಲ್ಲಾಧಿಕಾರಿ ಶ್ರೀರೂಪ ಕೆಂಡಾಮಂಡಲರಾದರು.

ಅಂತರಾಳದಿಂದ..
EDITORIAL

# ಬೈಕ್ ಟ್ಯಾಕ್ಸಿಗೆ ವಿರೋಧ ಕೈಬಿಡಿ: ನಿಯಂತ್ರಣ ಅಗತ್ಯ, ನಿಷೇಧವಲ್ಲ



ಆಪ್ ಆಧಾರಿತ ಬೈಕ್ ಟ್ಯಾಕ್ಸಿಗಳ ಸಂಚಾರ ನಿಷೇಧವನ್ನು ತೆರವುಗೊಳಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸಿರುವ ರಾಜ್ಯ ಸರ್ಕಾರದ ಕ್ರಮ ಸಂಕುಚಿತ ಚಿಂತನೆಯದ್ದಾಗಿದೆ. ಬೆಂಗಳೂರು ಮಹಾನಗರದ ಚಲನಶೀಲತೆಯು ಹೊಸ ಸಾಧ್ಯತೆಗಳ ಹುಡುಕಾಟದಲ್ಲಿರುವ ಸಂದರ್ಭದಲ್ಲಿ ಬೈಕ್ ಟ್ಯಾಕ್ಸಿಗಳನ್ನು ವಿರೋಧಿಸುವುದು ಜಾಣತನವಲ್ಲ. ಸರ್ಕಾರ ಕಾನೂನು ಹೋರಾಟವನ್ನು ದೀರ್ಘಗೊಳಿಸುವ ಬದಲು, ಬೈಕ್ ಟ್ಯಾಕ್ಸಿ ಸೇವೆಗಳನ್ನು ಒದಗಿಸುವವರ ಜೀವನೋಪಾಯವನ್ನು ಗಮನದಲ್ಲಿ ಇರಿಸಿಕೊಂಡು ಪ್ರಯಾಣಿಕರ ಸುರಕ್ಷತೆಗೆ ಒತ್ತು ನೀಡುವ ನಿಯಂತ್ರಕ ಚೌಕಟ್ಟುಗಳನ್ನು ರಚಿಸುವುದು ಅಗತ್ಯವಾಗಿದೆ. ಮೋಟಾರು ವಾಹನ ಕಾಯ್ದೆ–1988ರ ಅಡಿಯಲ್ಲಿ ಮೋಟಾರ್ ಸೈಕಲ್‌ಗಳು ಸಾರಿಗೆ ವಾಹನಗಳ ವ್ಯಾಖ್ಯಾನಕ್ಕೆ ಒಳಪಡುವುದಿಲ್ಲ ಎನ್ನುವುದು ಸರ್ಕಾರದ ವಾದವಾಗಿದೆ. ಆದರೆ, ಕೇಂದ್ರ ಸರ್ಕಾರವು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಮೂಲಕ, ಸೆಕ್ಷನ್ 2(7)ರ ಅಡಿಯಲ್ಲಿ ಮೋಟಾರ್ ಸೈಕಲ್‌ಗಳು 'ಒಪ್ಪಂದ ಸಾಗಣೆ'ಯ ವ್ಯಾಖ್ಯಾನದೊಳಗೆ ಬರುತ್ತವೆ ಹಾಗೂ ಅವುಗಳನ್ನು ಬಾಡಿಗೆ ಪಡೆದು ಪ್ರಯಾಣಿಕರನ್ನು ಸಾಗಿಸಲು ಕಾನೂನುಬದ್ಧವಾಗಿ ಬಳಸಬಹುದು ಎಂದು ಸ್ಪಷ್ಟಪಡಿಸಿದೆ. ಹಾಗಾಗಿ, ರಾಜ್ಯ ಸರ್ಕಾರದ ನಿಲುವು ಸಮರ್ಥನೀಯವಲ್ಲ. ಬೈಕ್ ಟ್ಯಾಕ್ಸಿ ಅಗ್ರಿಗೇಟರ್‌ಗಳಿಗೆ ಸಂಬಂಧಿತ ಪರಿಷ್ಕೃತ ಮಾರ್ಗಸೂಚಿಗಳು ಇನ್ನಷ್ಟು ಮುಂದುವರಿದು, ಬೈಕ್ ಟ್ಯಾಕ್ಸಿಗಳನ್ನು ಸಂಚಾರ ವ್ಯವಸ್ಥೆಯ ಭಾಗವನ್ನಾಗಿ ಮಾಡಿಕೊಳ್ಳಲು ರಾಜ್ಯಗಳನ್ನು ಸ್ಪಷ್ಟವಾಗಿ ಪ್ರೋತ್ಸಾಹಿಸುತ್ತಿವೆ. ವಸ್ತುಸ್ಥಿತಿ ಹೀಗಿರುವಾಗ, ರಾಜ್ಯ ಸರ್ಕಾರ ನಡೆಸುತ್ತಿರುವ ಕಾನೂನು ಹೋರಾಟವು ವಿಕಸನಗೊಳ್ಳುತ್ತಿರುವ ರಾಷ್ಟ್ರೀಯನೀತಿಗೆ ವಿರುದ್ಧವಾಗಿ ನಿಲ್ಲುವ ಅಪಾಯವನ್ನು ಹೊಂದಿದೆ.

ಬೈಕ್ ಟ್ಯಾಕ್ಸಿ ಸೇವೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಅಸ್ಥಿರ ನಿಲುವು ಹೊಂದಿರುವಂತಿದೆ. ಒಂದೆಡೆ, ಬೈಕ್ ಟ್ಯಾಕ್ಸಿಗಳ ಸಂಚಾರ ನಿಷೇಧವನ್ನು ತೆರವುಗೊಳಿಸಿರುವ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿರುವ ಸಂದರ್ಭದಲ್ಲಿಯೇ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ನಡೆಸಿರುವ ಸಂವಹನದಲ್ಲಿ ಈ ವಲಯವನ್ನು ಗುರ್ತಿಸಲು ಅಗತ್ಯ ಮಾರ್ಗಸೂಚಿ ರೂಪಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಈ ವಿರೋಧಾಭಾಸವು ನಿಷೇಧ ಮತ್ತು ಅರೆಮನಸ್ಸಿನ ಸ್ವೀಕಾರದ ನಡುವೆ ಸರ್ಕಾರದ ದೃಷ್ಟಿಕೋನ ತೂಗುಯ್ಯಾಲೆ ಆಡುತ್ತಿರುವುದನ್ನು ಸೂಚಿಸುವಂತಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಉದ್ಯೋಗದ ಆಯಾಮವನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಆದಾಯದ ಮೂಲವನ್ನಾಗಿ ಬೈಕ್ ಟ್ಯಾಕ್ಸಿಗಳನ್ನು ಅವಲಂಬಿಸಿರುವ ಸುಮಾರು 1.5 ಲಕ್ಷ ಗಿಗ್ ಕಾರ್ಮಿಕರು ಕರ್ನಾಟಕದಲ್ಲಿದ್ದು, ಅವರಲ್ಲಿ ಬಹುತೇಕರು ಬೆಂಗಳೂರಲ್ಲೇ ಇದ್ದಾರೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಕೇಂದ್ರಸ್ಥಾನವನ್ನಾಗಿ ಬಿಂಬಿಸಿಕೊಂಡು ಹೆಮ್ಮೆಪಡುವ ರಾಜ್ಯವು, 'ಗಿಗ್ ಆರ್ಥಿಕತೆ'ಯ ಪ್ರಮುಖ ವಲಯವನ್ನು ದುರ್ಬಲಗೊಳಿಸುವುದು ತಪ್ಪು ಸಂದೇಶ ಕೊಡುತ್ತದೆ. ಮೋಟಾರ್ ಸೈಕಲ್‌ಗಳು ಸಾರಿಗೆ ವಾಹನಗಳಾಗಿ ಬಳಸಲು ಸೂಕ್ತವಲ್ಲ ಎನ್ನುವುದಾದರೆ, ಇ–ಕಾಮರ್ಸ್ ಮತ್ತು ಆಹಾರ ವಿತರಣೆ ಪ್ಲಾಟ್‌ಫಾರ್ಮ್‌ಗಳ ವಿತರಣಾ ಪಾಲುದಾರರು ಬೈಕ್‌ಗಳನ್ನು ಯಾವ ಆಧಾರದ ಮೇಲೆ ಬಳಸುತ್ತಿದ್ದಾರೆ ಎನ್ನುವ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ? ಆಯ್ದ ನಿರ್ಬಂಧಗಳು ನಿಯಂತ್ರಕ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ಉಂಟುಮಾಡುತ್ತವೆ.

ಸರ್ಕಾರವು ಮತ್ತೆ ಮತ್ತೆ ವ್ಯಕ್ತಪಡಿಸಿರುವ ಸುರಕ್ಷತೆಯ ಬಗೆಗಿನ ಕಾಳಜಿಯು ಸಮಂಜಸ ಎಂದು ಹೇಳಬಹುದಾದರೂ, ಅದು ನಿರ್ಬಂಧಕ್ಕೆ ಕಾರಣ ಆಗಬಾರದು. ಸರ್ಕಾರದ ಕಾಳಜಿಯೂ ಸಮರ್ಪಕ ನಿಯಂತ್ರಣದ ಅಗತ್ಯವನ್ನು ಒತ್ತಿಹೇಳುತ್ತಿದೆ. ಸವಾರ ಮತ್ತು ಪ್ರಯಾಣಿಕ ಇಬ್ಬರಿಗೂ ಹೆಲ್ಮೆಟ್, ಕಡ್ಡಾಯ ವಿಮೆ, ಜಿಪಿಎಸ್ ಟ್ರ್ಯಾಕಿಂಗ್ ಹಾಗೂ ಸೇವಾಶುಲ್ಕದಲ್ಲಿನ ಪಾರದರ್ಶಕತೆಯು ಜಾರಿಗೊಳಿಸಬಹುದಾದ ಕೆಲವು ಸುರಕ್ಷತಾ ಕ್ರಮಗಳಾಗಿವೆ. ವ್ಯವಸ್ಥಿತ ಹಾಗೂ ಜವಾಬ್ದಾರಿಯುತ ಚೌಕಟ್ಟಿನಲ್ಲಿ ಬೈಕ್ ಟ್ಯಾಕ್ಸಿ ಗಳು ಉತ್ತಮವಾಗಿ ಕಾರ್ಯ ನಿರ್ವಹಿಸಬಹುದು ಎನ್ನುವುದಕ್ಕೆ ಹಲವು ರಾಜ್ಯಗಳ ಉದಾ ಹರಣೆಗಳು ನಮ್ಮೆದುರಿಗಿವೆ. ಮಹಾನಗರದ ಸಂಚಾರ ದಟ್ಟಣೆ ಪ್ರಸ್ತುತ ನಿರ್ಣಾಯಕ ಘಟ್ಟದಲ್ಲಿದೆ. ಸಂಚಾರ ದಟ್ಟಣೆ, ಕೊನೆಯ ಹಂತದವರೆಗಿನ ಸಂಪರ್ಕದ ಕೊರತೆ ಮತ್ತು ಹೆಚ್ಚುತ್ತಲೇ ಇರುವ ಪ್ರಯಾಣದ ವೆಚ್ಚಗಳು ಪರ್ಯಾಯಗಳ ಹುಡುಕಾಟಕ್ಕೆ ಒತ್ತಾಯಿಸುವಂತಿವೆ. ಪರಿಣಾಮಕಾರಿ ನಿಯಂತ್ರಣದೊಂದಿಗೆ ಬೈಕ್ ಟ್ಯಾಕ್ಸಿಗಳು ಜನಸಾಮಾನ್ಯರ ಕೈಗೆಟಕುವ ಪರ್ಯಾಯ ಸಂಚಾರ ವ್ಯವಸ್ಥೆಯನ್ನು ಒದಗಿಸಬಲ್ಲವು. ಈ ವಾಸ್ತವವನ್ನು ಹೈಕೋರ್ಟ್ ಗಮನಿಸಿದೆ. ರಾಜ್ಯ ಸರ್ಕಾರವೂ ವಸ್ತುಸ್ಥಿತಿ ಅರಿತುಕೊಳ್ಳಬೇಕಾದುದು ಅನಿವಾರ್ಯ. ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಸಲ್ಲಿಸಿರುವ ವಿಶೇಷ ಮೇಲ್ಮನವಿಯು ಕಾರ್ಮಿಕರು ಮತ್ತು ಪ್ರಯಾಣಿಕರನ್ನು ಅನಿಶ್ಚಿತ ಸ್ಥಿತಿಯಲ್ಲಿ ಉಳಿಸುವ ಕ್ರಮ. ಕಾನೂನು ಹೋರಾಟವನ್ನು ಕೈಬಿಟ್ಟು, ನೀತಿ ನಿರೂಪಣೆಯತ್ತ ಸರ್ಕಾರ ಗಮನಹರಿಸುವುದು ಅಗತ್ಯ. ಆಯ್ಕೆ ಸ್ಪಷ್ಟವಾಗಿದೆ. ನಿಯಂತ್ರಣ ಅತ್ಯಗತ್ಯ, ವಿರೋಧ ಅನಗತ್ಯ.

# ರಾಮಾಯಣ



ಸೂರ್ಯಾಸ್ತಸಮಯದಲ್ಲಿ ಮಾರುತಿಯು ಸೂಕ್ಷ್ಮದೇಹಿಯಾಗಿ ಲಂಕೆಯನ್ನು ಹೊಕ್ಕಿದ್ದು

## ಸುಂದರಕಾಂಡ

• ಹಿಂದಿನ ಸಂಚಿಕೆಯಿಂದ

''ಮಹಾ ಚೆಲುವಾದ ನಗರವಿದು ಎಂದು ಸಮುದ್ರದ ಮಧ್ಯದಲ್ಲಿರುವವರೆಲ್ಲರೂ ಹೇಳಲು ಈ ನಗರವನ್ನು ನೋಡಲು ಬಂದೆನೇ ಹೊರತು ಬೇರೆ ಏನಿಲ್ಲ'' ಎಂದ. ''ಮಣಿಖಚಿತವಾದ ಉಪ್ಪರಿಗೆಗಳು ರಾಜಮಂದಿರಗಳು ಅಲ್ಲಿನ ಎಣಿಕೆಗೆ ಬಾರದಷ್ಟು ಮನೆಗಳನ್ನು ನೋಡುತ್ತ, ಹಣ್ಣುಹಂಪಲನ್ನು ತಿಂದುಕೊಂಡು ಹೋಗುತ್ತೇನೆ'' ಎಂದು ತನ್ನನ್ನು ಗಣಿಸದವನಂತೆ ಬೇಕಾಬಿಟ್ಟಿಯಾಗಿ ಹೇಳಲು ರಕ್ಕಸಿಯು ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತ, ಇವನನ್ನು ಹುಲ್ಲುಕಡ್ಡಿಗಿಂತಲೂ ಕೀಳೆಂದು ಬಗೆದು, ''ಬಲಶಾಲಿಗಳಾದ ದಿಕ್ಪಾಲಕರೂ ಸಿದ್ಧರೂ ಗಾಂಧರ್ವರೂ ಈ ನಗರವನ್ನು ನೋಡಲು ಅಸಾಧ್ಯವೆಂದು ಭಾವಿಸಿರುವಾಗ, ಹುಲುಕಪಿಯಾದ ನೀನು ''ಹೋಗಿ ನೋಡಿ ಬರುತ್ತೇನೆ' ಎನ್ನುವೆಯಲ್ಲ! ಮೂಢನೇ, ಸುಮ್ಮನೆ ಈಗಲೇ ಹಿಂದಿರುಗಿ ಬದುಕಿಕೋ. ನಮ್ಮ ಮಹಾನಗರವನ್ನು ನೋಡುವ ಹಂಬಲ ನಿನಗೇಕೆ, ನಮ್ಮ ಮಹಾರಾಜರ ಬಾಹುಬಲದ ಬಗ್ಗೆ ಕೇಳಿಲ್ಲವೇ?'' ಎಂದು ರುಂಕಿಸಿದಳು.

ಅದಕ್ಕೆ ಮಾರುತಿಯು, ''ವೀರರಿಗೆ ಪುರನಗರಗ್ರಾಮಖರ್ವಡಗಳ ವಿಚಾರ ಬೇಕು, ಆದರೆ ಕಪಿಗಳಿಗೆ ಅವೆಲ್ಲ ಯಾಕೆ? ನೀರು ನೆರಳು ಇದ್ದ ಕಡೆ ಉಂಡು ಉರುಳಿಕೊಳ್ಳುವುದು ಅಷ್ಟು ಸಾಕು. ಹಣ್ಣುಕಾಯಿಗಳನ್ನು ಬಿಟ್ಟ ಮರಗಳನ್ನು ನೋಡಿ ಹೋಗುವ ಕೌತುಕದಿಂದ ಇಲ್ಲಿಗೆ ಬಂದೆನಷ್ಟೆ ಈ ನಗರದಲ್ಲಿನ ಒಂದು ಹುಲ್ಲುಕಡ್ಡಿಯನ್ನೂ ತೆಗೆದುಕೊಳ್ಳುವುದಿಲ್ಲ, ಯಾರನ್ನೂ ಮಾತನ್ನಾಡಿಸುವುದಿಲ್ಲ. ಅಚ್ಚರಿಯ ಊರು ಎಂದು ಜನರು ಹೇಳುವುದನ್ನು ಕೇಳಿ ಕುತೂಹಲದಿಂದ ನೋಡಿ ಬರೋಣವೆಂದು ಬಂದೆ, ತಡೆಯದೆ ನನಗೆ ದಾರಿ ಬಿಡು'' ಎನ್ನಲು ದೈತ್ಯೆಯು ಘುಡುಘುಡಿಸುತ್ತ ''ಹಾಗೇನಾದರೂ ಮುಂದಡಿಯಿಟ್ಟರೆ ಹೊಡೆದು ಬಿಸಾಕುತ್ತೇನೆ'' ಎಂದಳು. ಆನಂತರ, ''ಪ್ರಳಯಶಕ್ತಿಯನ್ನು ಯುಕ್ತಿ ಹೋಗಲಾಡಿಸಬಲ್ಲುದೇ? ಹಾಗೆಯೇ ನಗರವನ್ನು ಕಾಯುವ ಈ ಲಂಕಿಣಿಯನ್ನು ದಾಟಿ ಹೋಗಲಾದೀತೇ? ಮೂರ್ಖತನದಿಂದ ನಿನ್ನ ಪ್ರಾಣವನ್ನು ಕಳೆದುಕೊಂಡರೆ ಏನು ಬಂದೀತು? ಹೇ ಕಪಿ ಸುಮ್ಮನೆ ಹಿಂದಿರುಗಿ ಹೋಗು'' ಎಂದಳು.

ಆದರೆ ಕಪೀಂದ್ರನು ಅವಳ ಮಾತಿನಿಂದ ಅಳುಕದೆ ವಿನಯವಾಗಿ, ''ನೀನು ನಗರಾಧಿದೇವತೆ ಎಂಬುದನ್ನು ತಿಳಿಯದೆ ನಾನು ಏನೇನೋ ಮಾತನ್ಮಾಡಿಬಿಟ್ಟೆ ಅಗಣಿತ ಜೀವನಾಧಾರವಾದ ಈ ನಗರ, ಅದನ್ನು ಕಾಪಾಡುವ ಶಕ್ತಿಯು ಎಷ್ಟು ಎಂದು ತಿಳಿಯಲು ನಾನೆಷ್ಟರವನು? ನಗರದೊಳಗೆ ಹೋಗಿ ಅಲ್ಲಿನ ಅದ್ಭುತಗಳನ್ನು ನೋಡಿ ಸಂತಸಗೊಂಡು ನಿನ್ನ ಅಪ್ಪಣೆಯನ್ನು ಪಡೆದು ವಾಪಸ್ಸಾಗುತ್ತೇನೆ. ಅವಕಾಶವನ್ನು ಕೊಡು'' ಎಂದು ಕೇಳಿಕೊಂಡ. ಆ ಮಾತನ್ನು ಕೇಳಿದ ಅವಳ ಕೋಪ ಕೆರಳಿತು; ಈ ಕಪಿಯು ತನ್ನನ್ನು ಅವಹೇಳನ ಮಾಡುತ್ತಿದ್ದಾನೆಂದು ಭಾವಿಸಿ ಬರಸಿಡಿಲು ಬೆಟ್ಟಕ್ಕೆ ಅಪ್ಪಳಿಸುವಂತೆ ಪ್ರವಗಪತಿಗೆ ಹೊಡೆದಳು. ಆ ಏಟನ್ನು ತಾಳಿಕೊಂಡ ಮಾರುತಿಯು ಇವಳನ್ನು ಕೊಂದಲ್ಲದೆ ಹೋಗಲೀಯಳು, ಆದರೆ ಇವಳು ಹೆಂಗಸು; ಮುಂದೆ ಮಾಡಬೇಕಾದ ಪತಿಕಾರ್ಯವಿದೆ, ಏನು ಮಾಡಲಿ ಎಂದು ಕೊಂಚ ಹೊತ್ತು ಯೋಚಿಸಿದ.

ಮುಂದುವರಿಯುವುದು...

# ದೃಷ್ಟಿ ದೋಷ ತಡೆಯಲು ಪೈಲ್ವಾನರ ಸಾಂಪ್ರದಾಯಿಕ ತಂತ್ರಗಳು

**ಭಾರತೀಯ ಸಂಸ್ಕೃತಿಯಲ್ಲಿ ಕುಸ್ತಿಯು ಶಕ್ತಿ ಮತ್ತು ಭಕ್ತಿಯ ಸಂಗಮ. ಗರಡಿ ಮನೆಯಲ್ಲಿ ಕಠಿಣ ಪರಿಶ್ರಮದಿಂದ ಮೈಕಟ್ಟು ಬೆಳೆಸಿದ ಪೈಲ್ವಾನರನ್ನು ಕಂಡಾಗ ನೋಡುಗರಲ್ಲಿ ಆಶ್ಚರ್ಯ ಮೂಡುವುದು ಸಹಜ. ಈ ಅಚ್ಚರಿಯ ನೋಟವೇ ದೃಷ್ಟಿ ದೋಷವಾಗಿ ಪರಿಣಮಿಸಿ, ಮಲ್ಲರ ಸಾಮರ್ಥ್ಯಕ್ಕೆ ಧಕ್ಕೆ ತರಬಹುದು ಎಂಬ ಬಲವಾದ ನಂಬಿಕೆ ಜನಪದದಲ್ಲಿದೆ. ಈ ನಕಾರಾತ್ಮಕ ಶಕ್ತಿಯನ್ನು ಎದುರಿಸಲು ಪೈಲ್ವಾನರು ಇಂದಿಗೂ ಕೆಲವು ವಿಶಿಷ್ಟ ತಂತ್ರಗಳನ್ನು ಅನುಸರಿಸುತ್ತಾರೆ.**



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಪೈಲ್ವಾನರು ಅಖಾಡಕ್ಕೆ ಇಳಿಯುವ ಮುನ್ನ ಮೈಗೆ ಕೆಂಪು ಮಣ್ಣನ್ನು ಲೇಪಿಸಿಕೊಳ್ಳುವುದು ಒಂದು ದಿವ್ಯ ಸಂಪ್ರದಾಯ. ಸ್ನಾಯುಗಳ ಹೊಳಪು ನೇರವಾಗಿ ಜನರ ಕಣ್ಣಿಗೆ ಬಿದ್ದಾಗ ದೃಷ್ಟಿಯಾಗುವ ಸಾಧ್ಯತೆ ಹೆಚ್ಚು. ಈ ಮಣ್ಣು ಶರೀರದ ಸೌಂದರ್ಯವನ್ನು ಮರೆಮಾಚಿ, ನೋಡುಗರ ಕೆಟ್ಟ ದೃಷ್ಟಿಯನ್ನು ಹೀರಿಕೊಳ್ಳುವ ಅಭೇದ್ಯ ಕವಚವಾಗಿ ಕಾರ್ಯನಿರ್ವಹಿಸುತ್ತದೆ.

ಪೈಲ್ವಾನರ ಪೌಷ್ಟಿಕ ಆಹಾರ ಪದ್ಧತಿಯು ಅಸೂಯೆ ಅಥವಾ ಅಚ್ಚರಿಗೆ ಕಾರಣವಾಗಬಾರದೆಂದು, ಅವರು ಸಾರ್ವಜನಿಕವಾಗಿ ಕುಳಿತು ಆಹಾರ ಸೇವಿಸುವುದಿಲ್ಲ. ಅವರ ಭೋಜನವು ಒಂದು ಗುಪ್ತ ತಪಸ್ಸಿನಂತೆ ನಡೆಯುತ್ತದೆ. ಇದು ದೃಷ್ಟಿ ದೋಷದಿಂದ ಜೀರ್ಣಕ್ರಿಯೆಯನ್ನು ರಕ್ಷಿಸುವ ಸಾಂಪ್ರದಾಯಿಕ ಕ್ರಮವಾಗಿದೆ.

ಗರಡಿಯ ದೈವ ಆಂಜನೇಯನ ಹೆಸರಿನಲ್ಲಿ ಮಂತ್ರಿಸಿದ ಕಪ್ಪು ದಾರ ಅಥವಾ ತಾಯಿತವನ್ನು ಸೊಂಟಕ್ಕೆ ಕಟ್ಟಿಕೊಳ್ಳುವುದು ಅಲಿಖಿತ ನಿಯಮ. ಈ ಕಟಿ ಸೂತ್ರವು ದೇಹದ ಪ್ರಾಣಶಕ್ತಿಯನ್ನು ರಕ್ಷಿಸಿ, ಹೊರಗಿನ ನಕಾರಾತ್ಮಕ ಕಂಪನಗಳು ಒಳಪ್ರವೇಶಿಸದಂತೆ ತಡೆಯುವ ರಕ್ಷಣಾ ರೇಡಾರ್‌ನಂತೆ ಕೆಲಸ ಮಾಡುತ್ತದೆ.

ಅತಿಯಾದ ದೃಷ್ಟಿಯನ್ನು ದಿಕ್ಕುತಪ್ಪಿಸಲು ಪೈಲ್ವಾನರ ಕಿವಿಯ ಹಿಂಭಾಗ ಅಥವಾ ಪಾದದ ಅಡಿಯಲ್ಲಿ ಸಣ್ಣದಾಗಿ ಕಾಡಿಗೆಯ ಚುಕ್ಕೆಯನ್ನು ಇಡಲಾಗುತ್ತದೆ. ಚಂದದ ಚಂದ್ರನಿಗೆ ಮಚ್ಚೆಯಿದ್ದಂತೆ, ಈ ಕಪ್ಪು ಗುರುತು ಶರೀರದ ಮೇಲಾಗುವ ನಕಾರಾತ್ಮಕ ಪರಿಣಾಮವನ್ನು ಶೂನ್ಯಗೊಳಿಸುತ್ತದೆ ಎಂಬ ನಂಬಿಕೆಯಿದೆ.



ಕುಸ್ತಿ ಗೆದ್ದು ಬಂದಾಗ ಸಿಗುವ ಅತಿಯಾದ ಮೆಚ್ಚುಗೆಯು ದೃಷ್ಟಿಯಾಗದಂತೆ ತಡೆಯಲು, ಹಿರಿಯರು ಉಪ್ಪು, ಮೆಣಸಿನಕಾಯಿ ಅಥವಾ ಸುಣ್ಣ–ಅರಿಶಿನದಿಂದ ಆರತಿ ಬೆಳಗಿ ದೃಷ್ಟಿ ತೆಗೆಯುತ್ತಾರೆ.

ಇದು ಪೈಲ್ವಾನನ ಸುತ್ತ ಸೃಷ್ಟಿಯಾಗಿರುವ ನಕಾರಾತ್ಮಕ ಶಕ್ತಿಯನ್ನು ನಿವಾರಿಸಿ ಅವನಿಗೆ ನೆಮ್ಮದಿ ನೀಡುತ್ತದೆ.

ಈ ನಂಬಿಕೆಗಳು ಕೇವಲ ಆಚರಣೆಗಳಲ್ಲ, ಮಲ್ಲನ ಶೌರ್ಯ ಮತ್ತು ಏಕಾಗ್ರತೆಯನ್ನು ಕಾಪಾಡುವ ನೈತಿಕ ಬೇಲಿಗಳು. ಗರಡಿ ಮನೆಯ ಈ ಸಂಸ್ಕೃತಿಯು ಪೈಲ್ವಾನರಿಗೆ ಮಾನಸಿಕ ಧೈರ್ಯವನ್ನು ನೀಡಿ, ಅವರು ಅಖಾಡದಲ್ಲಿ ಸದಾ ಜಯಶಾಲಿಯಾಗುವಂತೆ ಪ್ರೇರೇಪಿಸುತ್ತದೆ.

# ಮರೆಯಾದ ಬೆಳಕು, ಉಳಿದ ನೆರಳು



ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಬಾಲ್ಯದ ಸ್ನೇಹವು ಬಹುಮಟ್ಟಿಗೆ ನಿರ್ದೋಷ, ನಿಷ್ಕಪಟ. ಅಂಥದೇ ಇಬ್ಬರು ಬಾಲ್ಯ ಸ್ನೇಹಿತರ ಕಥೆ ಇದು. ಅವರು ಒಂದೇ ಊರಲ್ಲಿ ಬೆಳೆದವರು, ಒಂದೇ ಶಾಲೆಯಲ್ಲಿ ಓದಿದವರು. ಆದರೆ ಕಾಲದ ಓಟದಲ್ಲಿ, ಜೀವನದ ತಿರುವುಗಳಲ್ಲಿ, ಅವರಿಬ್ಬರ ನಡುವಿನ ಸಂಪರ್ಕ ಕಳೆದುಹೋಯಿತು. ಹತ್ತು ವರ್ಷಗಳ ಕಾಲ ಅವರು ಒಬ್ಬರನ್ನೊಬ್ಬರು ಕಾಣದೇ ಇದ್ದರು. ಆದರೆ ವಿಧಿಯ ಆಟವೇ ವಿಚಿತ್ರ. ಅವರು ಮತ್ತೆ ಭೇಟಿಯಾದರು. ಆ ಭೇಟಿಯೇ ಅವರ ಬದುಕಿಗೆ ಹೊಸ ಅರ್ಥ ಕೊಟ್ಟಿತು.

ಮತ್ತೆ ಪ್ರಾರಂಭವಾದ ಮಾತುಗಳು ನಿಧಾನವಾಗಿ ಪ್ರೀತಿಗೆ ತಿರುಗಿದವು. ಸ್ನೇಹದ ಗಾಢತೆಯೇ ಪ್ರೇಮದ ಆಳವನ್ನು ಹೆಚ್ಚಿಸಿತು. ಇಬ್ಬರೂ ಪರಸ್ಪರ ಮನಸ್ಸು ಅರ್ಥ ಮಾಡಿಕೊಂಡು, ಕುಟುಂಬಗಳ ಅನುಮತಿಯೊಂದಿಗೆ ಮದುವೆಯಾದರು. ಅವರ ಜೀವನದಲ್ಲಿ ಪ್ರೀತಿ, ನಂಬಿಕೆ ಮತ್ತು ಹೊಂದಾಣಿಕೆ ತುಂಬಿತ್ತು. ಹೆಂಡತಿ ಉನ್ನತ ಶಿಕ್ಷಣ ಪಡೆದವಳು, ಸರಕಾರಿ ನೌಕರಿಯಾಗಿದ್ದಳು. ಗಂಡನೂ ತನ್ನ ಮನೆಯಲ್ಲಿಯೇ ಜವಾಬ್ದಾರಿಯುತ ವ್ಯಕ್ತಿ. ಇಬ್ಬರೂ ಒಬ್ಬರನ್ನೊಬ್ಬರು ಗೌರವಿಸಿ, ಪರಸ್ಪರ ಬೆಂಬಲಿಸುತ್ತಾ ಜೀವನ ಸಾಗಿಸಿದರು. ಆ ಸಂಸಾರದಲ್ಲಿ ಒಂದು ಸುಂದರ ಹೂವು ಮೂಡಿತುಒಂದು ಹೆಣ್ಣು ಮಗು. ಆ ಮಗು ಅವರ ಪ್ರೀತಿಯ ಸಂಕೇತ. ಜೀವನದಲ್ಲಿ ಏರುಪೇರುಗಳಿದ್ದರೂ, ಅವರು ಕೈ ಹಿಡಿದು ಸಾಗುತ್ತಿದ್ದರು. ಆದರೆ ವಿಧಿ ಮತ್ತೆ ತನ್ನ ಕಠಿಣ ಮುಖ ತೋರಿಸಿತು. ಹೆಂಡತಿ ಅನಾರೋಗ್ಯಕ್ಕೆ ಒಳಪಟ್ಟಳು. ಪ್ರತಿ ವರ್ಷ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದಳು. ಅವಳ ಆರೋಗ್ಯ ದಿನದಿಂದ ದಿನಕ್ಕೆ ಕುಗ್ಗುತ್ತಿತ್ತು. ಆದರೂ ಅವಳು ತನ್ನ ಕುಟುಂಬಕ್ಕಾಗಿ ಹೋರಾಟ ಮುಂದುವರಿಸಿಕೊಂಡಳು.

ಗಂಡನ ಹೃದಯದಲ್ಲಿ ಭಯ ಇದ್ದರೂ, ಅವನು ಅದನ್ನು ತೋರಿಸಲಿಲ್ಲ. ಅವನು ಸದಾ ಧೈರ್ಯ ತುಂಬುತ್ತಿದ್ದ. ''ನೀನು ಬೇಗ ಗುಣವಾಗುತ್ತೀಯ'' ಎಂದು ನಂಬಿಕೆ ನೀಡುತ್ತಿದ್ದ. ಆದರೆ ಅವನೊಳಗಿನ ನೋವು ಯಾರಿಗೂ ಗೊತ್ತಾಗಲಿಲ್ಲ. ಒಂದು ದಿನ, ಆ ಭಯ ನಿಜವಾಯಿತು. ಹದಿನಾರು ವರ್ಷಗಳ ಸುಂದರ ಸಂಸಾರಕ್ಕೆ ಕೊನೆ ಬಂತು. ಅವಳು ಅವನನ್ನೂ, ತನ್ನ ಮಗಳನ್ನೂ ಬಿಟ್ಟು ದೂರ ಪ್ರಯಾಣಕ್ಕೆ ಹೊರಟಳು.

ಆ ಕ್ಷಣದಿಂದ ಅವನ ಜೀವನ ಸಂಪೂರ್ಣ ಬದಲಾಗಿತು. ಅವನು ಈಗ ಕೇವಲ ಗಂಡನಲ್ಲ, ತಂದೆಯೂ, ತಾಯಿಯೂ ಆಗಿದ್ದಾನೆ. ಮಗಳು ಈಗ ದೊಡ್ಡವಳಾಗಿದ್ದಾಳೆ; ''ಅಮ್ಮ ಎಲ್ಲಿದ್ದಾಳೆ'' ಎಂದು ಕೇಳುವುದಿಲ್ಲ, ಆದರೆ ಆ ಪ್ರಶ್ನೆಯನ್ನು ತನ್ನ ಮನಸ್ಸಿನೊಳಗೆ ಮೌನವಾಗಿ ಹೊತ್ತುಕೊಂಡಿದ್ದಾಳೆ. ಅವಳ ನಿಶ್ಶಬ್ದದಲ್ಲಿ ಅವಳ ನೋವು ಸ್ಪಷ್ಟವಾಗಿ ಕಾಣುತ್ತದೆ.

ಇನ್ನೊಂದು ಕಡೆ, ಅವನ ವಯಸ್ಸಾದ ಅಪ್ಪ–ಅಮ್ಮ ಕೂಡ ಅವನ ಜವಾಬ್ದಾರಿಯ ಭಾಗ. ಅವರ ಆರೋಗ್ಯ, ಅವರ ಆರೈಕೆಎಲ್ಲವನ್ನೂ ನೋಡಿಕೊಳ್ಳುತ್ತಾ, ತನ್ನ ಮಗಳ ಭವಿಷ್ಯಕ್ಕಾಗಿ ಹೋರಾಡುತ್ತಾ, ಅವನು ಜೀವನವನ್ನು ತೂಗುತ್ತಿದ್ದಾನೆ. ಒಂದು ಕಡೆ ಕೆಲಸದ ಒತ್ತಡ, ಮತ್ತೊಂದು ಕಡೆ ಮನೆಯ ಹೊಣೆಗಾರಿಕೆಅವನ ಬದುಕು ಹೋರಾಟದ ಪ್ರತಿರೂಪವಾಗಿದೆ.



ಮಗಳ ನಗು ಅವನಿಗೆ ಶಕ್ತಿ ನೀಡುತ್ತದೆ, ಆದರೆ ಅವಳ ಮೌನವೇ ಅವನಿಗೆ ನೋವು. ಅವನು ತನ್ನ ದುಃಖವನ್ನು ಮರೆತು, ಎಲ್ಲರಿಗಾಗಿ ಬದುಕಲು ಕಲಿತಿದ್ದಾನೆ. ಪ್ರತಿದಿನ ಅವನು ತನ್ನ ಒಳಗಿನ ಖಾಲಿತನವನ್ನು ಮರೆಮಾಚಿ, ಹೊರಗೆ ಬಲವಾಗಿ ನಿಂತುಕೊಳ್ಳುತ್ತಾನೆ.

ಈ ಕಥೆ ಕೇವಲ ದುಃಖದ ಕಥೆಯಲ್ಲ. ಇದು ಪ್ರೀತಿ, ತ್ಯಾಗ ಮತ್ತು ಜವಾಬ್ದಾರಿಯ ಕಥೆ. ಒಂದು ತಂದೆಯ ಹೃದಯದ ಒಳಗಿನ ನೋವನ್ನು, ಅವನ ಬಲವನ್ನು ತೋರಿಸುವ ಕಥೆ. ಜೀವನ ಯಾವಾಗಲೂ ನಮ್ಮ ಇಚ್ಛೆಯಂತೆ ನಡೆಯುವುದಿಲ್ಲ. ಆದರೆ ಎದುರಿಸುವ ಶಕ್ತಿಯೇ ನಮ್ಮನ್ನು ಮುಂದೆ ಸಾಗಿಸುತ್ತದೆ.

ಅವನು ಇಂದು ತನ್ನ ಮಗಳಿಗಾಗಿ, ತನ್ನ ಕುಟುಂಬಕ್ಕಾಗಿ ಬದುಕುತ್ತಿದ್ದಾನೆ. ಅವಳ ಭವಿಷ್ಯವೇ ಅವನ ಕನಸು. ತನ್ನ ಹೆಂಡತಿಯ ನೆನಪುಗಳನ್ನು ಮನದಲ್ಲಿ ಹೊತ್ತುಕೊಂಡು, ಅವನು ಪ್ರತಿದಿನ ಹೊಸದಾಗಿ ಹೋರಾಡುತ್ತಿದ್ದಾನೆ. ಅವನ ಜೀವನದ ಬೆಳಕು ಮರೆಯಾಗಿದ್ದರೂ, ಅವನು ತನ್ನ ಮಗಳ ಮುಖದಲ್ಲಿ ಆ ಬೆಳಕನ್ನು ಮತ್ತೆ ಕಂಡುಕೊಳ್ಳುತ್ತಿದ್ದಾನೆ.

''ಮರೆಯಾದ ಬೆಳಕು ಉಳಿದ ನೆರಳು''ಇದು ಅವನ ಬದುಕಿನ ಸತ್ಯ.



# ಸೊಂಪಾದ ಕೂದಲಿಗೆ ಸೀಕ್ರೆಟ್ ತೆಂಗಿನ ಎಣ್ಣೆ

ತೆಂಗಿನ ಎಣ್ಣೆ ಕೂದಲಿಗೆ ಹೆಚ್ಚು ಪ್ರಯೋಜನಕಾರಿ ಎಂದು ನ್ಯಾಷನಲ್ ಲೈಬ್ರೆರಿ ಆಫ್ ಮೆಡಿಸಿನ್ ಅಧ್ಯಯನ ತೋರಿಸುತ್ತದೆ, ಏಕೆಂದರೆ ಅದರ ಹೆಚ್ಚಿನ ಲಾರಿಕ್ ಆಮ್ಲದ ಅಂಶವು ಕೂದಲಿನ ಬುಡವನ್ನು ಭೇದಿಸಲು ಅನುವು ಮಾಡಿಕೊಡುತ್ತದೆ, ಪ್ರೋಟೀನ್ ನಷ್ಟವನ್ನು ಕಡಿಮೆ ಮಾಡುತ್ತದೆ ಮತ್ತು ರಚನಾತ್ಮಕ ಹಾನಿಯನ್ನು ತಡೆಯುತ್ತದೆ. ಇದು ಹೈಗ್ರಲ್ ಆಯಾಸವನ್ನು ತಡೆಗಟ್ಟಲು, ಹೊಳಪನ್ನು ಹೆಚ್ಚಿಸಲು, ಫ್ರಿಜ್ ಅನ್ನು ಕಡಿಮೆ ಮಾಡಲು ಮತ್ತು ತಲೆಹೊಟ್ಟು ಕಡಿಮೆ ಮಾಡಲು ಸಹಾಯ ಮಾಡುವ ಶಿಲೀಂಧ್ರನಾಶಕ ಗುಣಗಳನ್ನು ಹೊಂದಿರುವ ಪೂರ್ವ–ತೊಳೆಯುವ ಕಂಡಿಷನರ್ ಆಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ.

**ತೆಂಗಿನ ಎಣ್ಣೆಯ ಪ್ರಯೋಜನಗಳು :** ತೆಂಗಿನ ಎಣ್ಣೆಯನ್ನು ನೆತ್ತಿಯನ್ನು ಹೈಡ್ರೇಟ್ ಮಾಡಲು, ತಲೆಹೊಟ್ಟು ತಡೆಗಟ್ಟಲು ಮತ್ತು ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸಲು ಸ್ಥಳೀಯವಾಗಿ ಬಳಸಲಾಗುತ್ತದೆ. ತಲೆಹೊಟ್ಟು ಇರುವವರಿಗೆ ಇದು ಶಿಲೀಂಧ್ರನಾಶಕ ಮತ್ತು ಇತರ ಪ್ರಯೋಜನಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿದೆ ಎಂದು ಸಂಶೋಧನೆ ತೋರಿಸಿದೆ. ನೆತ್ತಿಯ ಸೂಕ್ಷ್ಮಜೀವಿಯ ರೇಖಾಂಶದ ಅಧ್ಯಯನವು ತೆಂಗಿನ ಎಣ್ಣೆಯು ಆರೋಗ್ಯಕರ ನೆತ್ತಿಯ ಆರಂಭಿಕ ಚರ್ಮವನ್ನು ಉತ್ಕೃಷ್ಟಗೊಳಿಸಲು ಸೂಚಿಸುತ್ತದೆ.

- **ಹಾನಿಗೊಳಗಾದ ಕೂದಲನ್ನು ಕಡಿಮೆ ಮಾಡುತ್ತದೆ**
- **ತೆಂಗಿನ ಎಣ್ಣೆಯು ನಿಮ್ಮ ಕೂದಲನ್ನು ಉದ್ದವಾಗಿ ಬೆಳೆಯಲು ಸಹಾಯ ಮಾಡುತ್ತದೆ**
- **ನಿಮ್ಮ ಕೂದಲನ್ನು ತೇವಗೊಳಿಸುವುದು ಮತ್ತು ಒಡೆಯುವಿಕೆಯನ್ನು ಕಡಿಮೆ ಮಾಡುವುದು**

**ಅನೇಕ ಪೋಷಕರು ತಮ್ಮ ಮಕ್ಕಳಿಗೆ ಶೀತ ಬಂದಾಗ ಬಾಳೆಹಣ್ಣುಗಳನ್ನು ತಪ್ಪಿಸಬೇಕು ಎಂದು ಹೇಳುತ್ತಾರೆ, ಆದರೆ ಅದು ಹೆಚ್ಚಾಗಿ ತಪ್ಪು ಕಲ್ಪನೆ. ಬಾಳೆಹಣ್ಣುಗಳು ಶೀತ ಮತ್ತು ಕೆಮ್ಮನ್ನು ಉಲ್ಬಣಗೊಳಿಸುತ್ತವೆ ಎಂಬ ನಂಬಿಕೆಯು ಅವುಗಳ ಮೃದುವಾದ ರಚನೆ ಮತ್ತು ಅವು ಲೋಳೆಯ ಉತ್ಪಾದನೆಯನ್ನು ಹೆಚ್ಚಿಸಬಹುದು ಎಂಬ ಗ್ರಹಿಕೆಯಿಂದ ಹುಟ್ಟಿಕೊಂಡಿದೆ. ಅನೇಕ ಸಂಸ್ಕೃತಿಗಳಲ್ಲಿ, ಬಾಳೆಹಣ್ಣುಗಳನ್ನು 'ಶೀತ' ಆಹಾರವೆಂದು ಪರಿಗಣಿಸಲಾಗುತ್ತದೆ ಮತ್ತು ಆದ್ದರಿಂದ ಉಸಿರಾಟದ ಲಕ್ಷಣಗಳನ್ನು ಉಲ್ಬಣಗೊಳಿಸುತ್ತದೆ ಎಂದು ಭಾವಿಸಲಾಗಿದೆ. ಆಧುನಿಕ ಮಕ್ಕಳ ವಿಜ್ಞಾನವು ಈ ಹಕ್ಕನ್ನು ಬೆಂಬಲಿಸುವುದಿಲ್ಲ ಎಂದು ವೈದ್ಯರು ಹೇಳುತ್ತಾರೆ.**

# ಶೀತ ಇದ್ದಾಗ ಮಕ್ಕಳಿಗೆ ಬಾಳೆಹಣ್ಣು ನೀಡಬಹುದೇ...



ಹೌದು, ನಿಮ್ಮ ಮಗುವಿಗೆ ಸಾಮಾನ್ಯ ಶೀತವಿದ್ದರೂ ಸಹ ನೀವು ಸಾಮಾನ್ಯವಾಗಿ ಬಾಳೆಹಣ್ಣನ್ನು ನೀಡಬಹುದು, ಏಕೆಂದರೆ ಬಾಳೆಹಣ್ಣುಗಳು ಮೃದುವಾಗಿರುತ್ತವೆ, ಜೀರ್ಣಿಸಿಕೊಳ್ಳಲು ಸುಲಭವಾಗಿರುತ್ತವೆ ಮತ್ತು ದೇಹವನ್ನು ಚೇತರಿಸಿಕೊಳ್ಳಲು ಸಹಾಯ ಮಾಡುವ ಶಕ್ತಿ ಮತ್ತು ಪ್ರಮುಖ ಪೋಷಕಾಂಶಗಳನ್ನು ಒದಗಿಸುತ್ತವೆ.

ಬಾಳೆಹಣ್ಣಿನಲ್ಲಿ ವಿಟಮಿನ್ ಸಿ ಮತ್ತು ವಿಟಮಿನ್ ಬಿ 6 ನಂತಹ ವಿಟಮಿನ್‌ಗಳು ಪೊಟ್ಯಾಸಿಯಮ್ ಜೊತೆಗೆ ಇರುತ್ತವೆ, ಇದು ರೋಗನಿರೋಧಕ ಶಕ್ತಿಯನ್ನು ಬೆಂಬಲಿಸುತ್ತದೆ ಮತ್ತು ಅನಾರೋಗ್ಯದ ಸಮಯದಲ್ಲಿ ದೇಹವು ಬಲವಾಗಿರಲು ಸಹಾಯ ಮಾಡುತ್ತದೆ, ಆದರೆ ಅವುಗಳ ಮೃದುವಾದ ವಿನ್ಯಾಸವು ಮಗುವಿಗೆ ಗಂಟಲು ನೋವು ಅಥವಾ ಕಡಿಮೆ ಹಸಿವು ಇದ್ದಾಗಲೂ ತಿನ್ನಲು ಸುಲಭವಾಗುತ್ತದೆ ಎನ್ನುತ್ತಾರೆ ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಯ ನವಜಾತ ಶಿಶುಶಾಸ್ತ್ರ ಮತ್ತು ಮಕ್ಕಳ ವೈದ್ಯೆ ಡಾ. ಪರಿಮಳ ವಿ ತಿರುಮಲೇಶ್.

**ಕೋಣೆಯ ಉಷ್ಣಾಂಶದಲ್ಲಿ ಬಾಳೆಹಣ್ಣನ್ನು ನೀಡುವುದು ಉತ್ತಮ**

ಬಾಳೆಹಣ್ಣುಗಳು ಲೋಳೆಯನ್ನು ಹೆಚ್ಚಿಸುತ್ತವೆ ಅಥವಾ ಕೆಮ್ಮು ಮತ್ತು ಶೀತವನ್ನು ಉಲ್ಬಣಗೊಳಿಸುತ್ತವೆ ಎಂದು ಅನೇಕ ಪೋಷಕರು ನಂಬುತ್ತಾರೆ, ಆದರೆ ಇದನ್ನು ಬೆಂಬಲಿಸಲು ಯಾವುದೇ ಬಲವಾದ ವೈಜ್ಞಾನಿಕ ಪುರಾವೆಗಳಿಲ್ಲ, ಮತ್ತು ಹೆಚ್ಚಿನ ಸಂದರ್ಭಗಳಲ್ಲಿ, ಬಾಳೆಹಣ್ಣುಗಳು ಶೀತದ ಲಕ್ಷಣಗಳನ್ನು ಇನ್ನಷ್ಟು ಹದಗೆಡಿಸುವುದಿಲ್ಲ.

ಆದಾಗ್ಯೂ, ಕೆಲವು ಮಕ್ಕಳು ತಣ್ಣನೆಯ ಆಹಾರಗಳು ಗಂಟಲಿನ ಅಸ್ವಸ್ಥತೆಯನ್ನು ಹೆಚ್ಚಿಸುತ್ತವೆ ಎಂದು ಭಾವಿಸಬಹುದು, ಆದ್ದರಿಂದ ಫ್ರಿಜ್‌ನಿಂದ ನೇರವಾಗಿ ನೀಡುವ ಬದಲು ಕೋಣೆಯ ಉಷ್ಣಾಂಶದಲ್ಲಿ ಬಾಳೆಹಣ್ಣನ್ನು ನೀಡುವುದು ಉತ್ತಮ.

**ಬಾಳೆಹಣ್ಣಿನ ಪೌಷ್ಟಿಕಾಂಶದ ಪ್ರಯೋಜನಗಳು**

- **ವೈದ್ಯರು ಹೇಳುವಂತೆ ಬಾಳೆಹಣ್ಣುಗಳು ವಾಸ್ತವವಾಗಿ ಮಕ್ಕಳಿಗೆ ಅನಾರೋಗ್ಯದ ಸಮಯದಲ್ಲಿ ಪೌಷ್ಟಿಕ ಆಯ್ಕೆಯಾಗಿದೆ.**

**ಸುಲಭವಾಗಿ ಜೀರ್ಣವಾಗುವ ಈ ಹಣ್ಣಿನಲ್ಲಿ ಇವುಗಳು ಸಮೃದ್ಧವಾಗಿವೆ:**

- **ರೋಗನಿರೋಧಕ ಕಾರ್ಯವನ್ನು ಬೆಂಬಲಿಸುವ ವಿಟಮಿನ್ ಸಿ**
- **ಚಯಾಪಚಯ ಮತ್ತು ಮೆದುಳಿನ ಬೆಳವಣಿಗೆಗೆ ಅಗತ್ಯವಾದ ವಿಟಮಿನ್ ಬಿ6**
- **ದ್ರವ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಪೊಟ್ಯಾಸಿಯಮ್**
- **ಆಹಾರದ ನಾರು, ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ**

**ಬಾಳೆಹಣ್ಣು ಶಕ್ತಿ–ಭರಿತ ತಿನಿಸಾಗಿದೆ**

ಅಸ್ವಸ್ಥ ಮಕ್ಕಳಿಗೆ, ಬಾಳೆಹಣ್ಣು ಅನುಕೂಲಕರ ಮತ್ತು ಶಕ್ತಿ–ಭರಿತ ತಿಂಡಿಯಾಗಿರಬಹುದು. ಬಾಳೆಹಣ್ಣುಗಳು ಪೊಟ್ಯಾಸಿಯಮ್, ವಿಟಮಿನ್ ಬಿ6 ಮತ್ತು ಮಕ್ಕಳಲ್ಲಿ ಶಕ್ತಿ ಮತ್ತು ಗುಣಪಡಿಸುವಿಕೆಯನ್ನು ಬೆಂಬಲಿಸುವ ನೈಸರ್ಗಿಕ ಕಾರ್ಬೋಹೈಡ್ರೇಟ್‌ಗಳಂತಹ ಉತ್ತಮ ಪ್ರಮಾಣದ ಅಗತ್ಯ ಪೋಷಕಾಂಶಗಳನ್ನು ಹೊಂದಿರುತ್ತವೆ.

ಬಾಳೆಹಣ್ಣಿನ ಸೇವನೆ ಮತ್ತು ಶೀತ ಲಕ್ಷಣಗಳು ಹದಗೆಡುವುದು ಅಥವಾ ಲೋಳೆಯ ಉತ್ಪಾದನೆಯನ್ನು ಹೆಚ್ಚಿಸುವುದರ ನಡುವೆ ಯಾವುದೇ ಸಂಬಂಧವನ್ನು ವೈಜ್ಞಾನಿಕ ಅಧ್ಯಯನಗಳು ಕಂಡುಕೊಂಡಿಲ್ಲ. ವಾಸ್ತವವಾಗಿ, ಬಾಳೆಹಣ್ಣುಗಳು ಮೃದುವಾಗಿರುತ್ತವೆ, ಚೆನ್ನಾಗಿ ಜೀರ್ಣವಾಗುತ್ತವೆ ಮತ್ತು ಅನಾರೋಗ್ಯಕ್ಕೆ ಸಂಬಂಧಿಸಿದ ಹಸಿವು ಕಡಿಮೆಯಾಗುವ ಮಕ್ಕಳಿಗೆ ಸಹ ಸಹಾಯ ಮಾಡಬಹುದು.

## ಮಕ್ಕಳಿಗೆ ಬಾಳೆಹಣ್ಣು ತಿನ್ನಿಸುವಾಗ ಯಾವಾಗ ಜಾಗರೂಕರಾಗಿರಬೇಕು

- **ಮಗುವಿಗೆ ಬಾಳೆಹಣ್ಣುಗಳಿಗೆ ನಿರ್ದಿಷ್ಟ ಅಲರ್ಜಿ ಇದ್ದರೆ**
- **ಮಗುವಿಗೆ ಅವುಗಳನ್ನು ತಿಂದ ನಂತರ ಗಂಟಲಿನಲ್ಲಿ ಹೆಚ್ಚಿದ ಅಸ್ವಸ್ಥತೆ ಕಂಡುಬಂದರೆ**
- **ಕೆಲವು ಆಹಾರಗಳು ಕಿರಿಕಿರಿಯನ್ನು ಉಂಟುಮಾಡುವ ತೀವ್ರ ಕೆಮ್ಮಿನ ಸಂದರ್ಭಗಳಲ್ಲಿ**
- **ಸುರಕ್ಷಿತವಾಗಿರಲು, ಮಕ್ಕಳಿಗೆ ಅವರ ದೇಹವು ಅದನ್ನು ತೆಗೆದುಕೊಳ್ಳಬಹುದೇ ಎಂದು ಖಚಿತವಿಲ್ಲದಿದ್ದರೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಬಾಳೆಹಣ್ಣುಗಳನ್ನು ನೀಡಬಾರದು.**
- **ಮಗುವಿಗೆ ಗಂಟಲಿನಲ್ಲಿ ಕಿರಿಕಿರಿ, ಅಸ್ವಸ್ಥತೆ ಅಥವಾ ಅನಾರೋಗ್ಯದ ಸಮಯದಲ್ಲಿ ಹಣ್ಣು ಇಷ್ಟವಾಗದಿದ್ದರೆ, ಪೋಷಕರು ಸದ್ಯಕ್ಕೆ ಅದನ್ನು ತಪ್ಪಿಸಬೇಕು ಮತ್ತು ನಂತರ ಮತ್ತೆ ಪ್ರಯತ್ನಿಸಬೇಕು.**

## ಬಾಳೆಹಣ್ಣುಗಳನ್ನು ನೀಡುವ ಪೋಷಕರಿಗೆ ಕೆಲವು ಸಲಹೆಗಳು

- **ಮಕ್ಕಳಿಗೆ ತಣ್ಣಗಾಗಿಸುವ ಬದಲು ಕೋಣೆಯ ಉಷ್ಣಾಂಶದಲ್ಲಿ ಬಾಳೆಹಣ್ಣುಗಳನ್ನು ನೀಡಿ.**
- **ಗಂಜಿ ಅಥವಾ ಮೊಸರಿನಂತಹ ಸುಲಭವಾಗಿ ಜೀರ್ಣವಾಗುವ ಇತರ ಆಹಾರಗಳೊಂದಿಗೆ ಅವುಗಳನ್ನು ಜೋಡಿಸಿ.**
- **ನಿರ್ದಿಷ್ಟ ಆಹಾರಗಳನ್ನು ತೆಗೆದುಹಾಕುವ ಬದಲು ಒಟ್ಟಾರೆ ಜಲಸಂಚಯನ ಮತ್ತು ಸಮತೋಲಿತ ಪೋಷಣೆಯ ಮೇಲೆ ಹೆಚ್ಚು ಗಮನಹರಿಸಿ .**



## ಶೀತದ ಸಮಯದಲ್ಲಿ ಬಾಳೆಹಣ್ಣುಗಳು ಶತ್ರುವಲ್ಲ

ಅವು ಕೆಮ್ಮನ್ನು ಉಲ್ಬಣಗೊಳಿಸುತ್ತವೆ ಅಥವಾ ಲೋಳೆಯನ್ನು ಹೆಚ್ಚಿಸುತ್ತವೆ ಎಂಬ ಕಲ್ಪನೆಯು ವೈಜ್ಞಾನಿಕ ಬೆಂಬಲವಿಲ್ಲದ ಪುರಾಣವಾಗಿದೆ. ವಾಸ್ತವವಾಗಿ, ಅವು ಅನಾರೋಗ್ಯದ ಸಮಯದಲ್ಲಿ ಮಗುವಿನ ಆಹಾರದಲ್ಲಿ ಸಹಾಯಕವಾದ ಸೇರ್ಪಡೆಯಾಗಬಹುದು. ಮಕ್ಕಳಿಗೆ ಶೀತವಿದ್ದಾಗ ಪೋಷಕರು ಜಲಸಂಚಯನ ಮತ್ತು ಸರಿಯಾದ ವೈದ್ಯಕೀಯ ಆರೈಕೆಯತ್ತ ಗಮನಹರಿಸಬೇಕು. ಅನಗತ್ಯ ಆಹಾರ ನಿರ್ಬಂಧಗಳಿಲ್ಲದ ಸಮತೋಲಿತ ವಿಧಾನವು ಮಕ್ಕಳು ವೇಗವಾಗಿ ಚೇತರಿಸಿಕೊಳ್ಳಲು ಮತ್ತು ಆರೋಗ್ಯವಾಗಿರಲು ಸಹಾಯ ಮಾಡುತ್ತದೆ. ಸಾಮಾನ್ಯವಾಗಿ, ಸರಿಯಾದ ಪೋಷಣೆ, ಸಾಕಷ್ಟು ದ್ರವಗಳನ್ನು ಕುಡಿಯುವುದು ಮತ್ತು ವಿಶ್ರಾಂತಿ ಪಡೆಯುವುದು ಶೀತವನ್ನು ನಿಭಾಯಿಸುವಲ್ಲಿ ಅತ್ಯಂತ ಮಹತ್ವದ ಅಂಶಗಳಾಗಿವೆ. ಪೋಷಕರ ಗಮನವು ಪೌಷ್ಟಿಕ ಆಹಾರವನ್ನು ನೀಡುವುದರ ಮೇಲೆ ಇರಬೇಕು ಮತ್ತು ಪುರಾಣಗಳ ಆಧಾರದ ಮೇಲೆ ಮಕ್ಕಳಿಗೆ ಕೆಲವು ಆಹಾರಗಳನ್ನು ನಿಷೇಧಿಸುವುದರ ಮೇಲೆ ಅಲ್ಲ.

# ಹೆಚ್‌ಡಿಕೆ ಹೆಬ್ಬೆಟ್ಟು ಹೇಳಿಕೆಯಿಂದ ನೋವಾಗಿದೆ

## ಬೇಸರ ಹೊರಹಾಕಿದ ಡಿ.ಸುಧಾಕರ್ ಪುತ್ರ

ಸುಹಾಸ್ ಸುಧಾಕರ್ ಬೇಸರ

## ಸುಧಾಕರ್ ಸಾವು ಬದುಕಿನ ನಡುವೆ ಹೋರಾಟ

• ಉದಯವಾಹಿನಿ ಚಿತ್ರದುರ್ಗ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಚಿವ ಡಿ.ಸುಧಾಕರ್ ಅವರ ಬಗ್ಗೆ ಇತ್ತೀಚೆಗೆ ಹೇಳಿಕೆ ನೀಡಿದ್ದ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿಯವರ ವಿರುದ್ಧ ಸುಹಾಸ್ ಸುಧಾಕರ್ ಬೇಸರ ಹೊರಹಾಕಿದ್ದಾರೆ. ಈ ಬಗ್ಗೆ ಅವರು ವಿಡಿಯೋ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ವಿಡಿಯೋದಲ್ಲಿ, ಹೆಬ್ಬೆಟ್ಟು ಬಳಕೆ ಬಗ್ಗೆ ಹೆಚ್‌ಡಿಕೆ ಹೇಳಿಕೆಯಿಂದ ನೋವಾಗಿದೆ. ನಮ್ಮ ತಂದೆಯ ಅನಾರೋಗ್ಯ ವಿಚಾರ ರಾಜಕೀಯಕ್ಕೆ ಬಳಕೆಯಾಗುತ್ತಿದೆ. ರಾಜಕೀಯ ಜಿದ್ದಾಜಿದ್ದಿಗೆ ಬಳಸಿಕೊಂಡಿದ್ದು ತುಂಬಾ ನೋವಾಗಿದೆ ಎಂದು ಹೇಳಿಕೊಂಡಿದ್ದಾರೆ.

ನಮ್ಮ ತಂದೆ ಈಗ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಬೇಗ ಗುಣಮುಖರಾಗಿ ಬರುವ ನಂಬಿಕೆಯಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ್ ಸೇರಿ ಮಂತ್ರಿಗಳು ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.


ಉದಯವಾಹಿನಿ ಚಿತ್ರ

### ಹೆಚ್‌ಡಿಕೆ ಹೇಳಿದ್ದೇನು?

ಸಚಿವ ಡಿ.ಸುಧಾಕರ್ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಕೆಲವರು ಇಂತಹ ಸಂದರ್ಭ ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್ ಇದ್ದಾರೆ ಎಂದು ಪರೋಕ್ಷವಾಗಿ ಡಿ.ಕೆ ಶಿವಕುಮಾರ್ ವಿರುದ್ಧ ಹೆಚ್.ಡಿ ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದರು. ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾಗ ಅವರು ಮಾಧ್ಯಮಗಳ ಜೊತೆ ಮಾತನಾಡಿದ್ದರು.

ಈ ವೇಳೆ ಸಚಿವ ಸುಧಾಕರ್ ಸಾವು ಬದುಕಿನ ನಡುವೆ ಹೋರಾಟ ನಡೆಸ್ತಿದ್ದಾರೆ. ಆದರೆ ಆಸ್ಪತ್ರೆಯ ಒಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು. ಆ ವ್ಯಕ್ತಿ ಎಷ್ಟು ನೋವು ಅನುಭವಿಸುತ್ತಿದ್ದಾನೋ ಪಾಪ. ಯಾವ ಕಾರಣಕ್ಕೆ ಕೆಲ ವಿಷಯ ಮುಚ್ಚಿಟ್ಟಿದ್ದಾರೆ ಎಂಬುದು ಅರಿಯಬೇಕು.

## ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ

• ಉದಯವಾಹಿನಿ, ಮಂಗಳೂರು

ಮಂಗಳೂರಿನ ಎಸ್‌ಡಿಎಂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಕಾಲೇಜಿನ ಸ್ನಾತಕೋತ್ತರ ನಿರ್ವಹಣಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಏಪ್ರಿಲ್ 30, 2026ರಂದು ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರಸಂಕಿರಣವನ್ನು ಆಯೋಜಿಸಿದೆ. ಪದ್ಮವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ವಿಚಾರ ಸಂಕಿರಣ ನಡೆಯಲಿದೆ.

ತಾಂತ್ರಿಕವಾಗಿ ಮುಂದುವರಿದ ಮತ್ತು ಮಾನವ ಕೇಂದ್ರಿತ ಭವಿಷ್ಯವನ್ನು ನಿರ್ಮಿಸುವಲ್ಲಿ ಕೃತಕ ಬುದ್ಧಿಮತ್ತೆಯು ವಿಕಸನಗೊಳ್ಳುತ್ತಿರುವುದರ ಕುರಿತು ಚರ್ಚಿಸಲು ಶೈಕ್ಷಣಿಕ ತಜ್ಞರು, ಉದ್ಯಮ ಮುಖಂಡರು, ನೀತಿ ನಿರೂಪಕರು ಮತ್ತು ವಿದ್ಯಾರ್ಥಿಗಳನ್ನು ಒಂದೇ ವೇದಿಕೆಗೆ ತರುವುದು ಈ ವಿಚಾರಸಂಕಿರಣದ ಮುಖ್ಯ ಗುರಿಯಾಗಿದೆ. ಸಂಸ್ಥೆಯ ನಿರ್ದೇಶಕರಾದ ಡಾ. ಸೀಮಾ ಎಸ್. ಶೆಣೈ ಕಾರ್ಯಕ್ರಮದ ಉದ್ಘಾಟನಾ ಅಧ್ಯಕ್ಷತೆವಹಿಸಲಿದ್ದಾರೆ. ಎಬಿಬಿ ಇಂಡಿಯಾ ಲಿಮಿಟೆಡ್‌ನ ಡಿಜಿಟಲ್ ವಿಭಾಗದ ಉಪಾಧ್ಯಕ್ಷರಾದ ಪ್ರಸನ್ನ ದೇಶಪಾಂಡೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ.

## ರಾಷ್ಟ್ರೀಯ ಹೆದ್ದಾರಿಗೆ ಬಂದ ಸಾಂಬಾರ್ ಜಗಳ

• ಉದಯವಾಹಿನಿ,ಚಿಕ್ಕಮಗಳೂರು

ಊಟಕ್ಕೆ ಸಾಂಬಾರ್ ಮಾಡಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕಾಗಿ ವ್ಯಕ್ತಿಯೊಬ್ಬ ಮದ್ಯದ ನಶೆಯಲ್ಲಿ ತನ್ನ ಸಹೋದರಿ ಮತ್ತು ಅವರ ಮಗಳ ಮೇಲೆ ಹಲ್ಲೆಗೆ ಯತ್ನಿಸಿ, ರಸ್ತೆಯಲ್ಲಿ ರಾದ್ಧಾಂತ ಮಾಡಿರುವ ಘಟನೆ ತಾಲ್ಲೂಕಿನ ಹಾಂದಿ ಗ್ರಾಮದಲ್ಲಿ ನಡೆದಿದೆ.

ಚಿತ್ರದುರ್ಗದಿಂದ ಕೂಲಿ ಕೆಲಸಕ್ಕಾಗಿ ವಲಸೆ ಬಂದು ಕಡೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ ವಾಸವಿದ್ದ ಕುಟುಂಬದವರಲ್ಲಿ ಈ ಘಟನೆ ಸಂಭವಿಸಿದೆ. ಆರೋಪಿ ನಾಗರಾಜ್ ಎಂಬಾತ ಮನೆಗೆ ಬಂದಾಗ ಸಾಂಬಾರ್ ಸಿದ್ಧವಾಗಿಲ್ಲ ಎಂದು ಕುಪಿತಗೊಂಡು, ತನ್ನ ಅಕ್ಕ ಅಂಜಲಿ ಹಾಗೂ ಆಕೆಯ ಮಗಳ ಮೇಲೆ ದೊಣ್ಣೆ ಹಿಡಿದು ಹಲ್ಲೆಗೆ ಮುಂದಾಗಿದ್ದಾನೆ.

**ಸ್ಥಳಕ್ಕೆ ಬಂದ ಪೊಲೀಸರು:** ಮನೆಯಲ್ಲಿ ಆರಂಭವಾದ ಈ ಗಲಾಟೆ ಪಕ್ಕದಲ್ಲೇ ಇರುವ ರಾಷ್ಟ್ರೀಯ ಹೆದ್ದಾರಿವರೆಗೂ ಬಂದಿದೆ. ಸುಮಾರು ಅರ್ಧ ಗಂಟೆಯ ಕಾಲ ರಸ್ತೆ ಬದಿಯಲ್ಲಿ ನಾಗರಾಜ್ ಹೈಡ್ರಾಮಾ ನಡೆಸಿದ್ದಾನೆ.

ಗಲಾಟೆ ಬಿಡಿಸಲು ಮುಂದಾದ ಸ್ಥಳೀಯರ ಮೇಲೂ ಆತ ಹಲ್ಲೆಗೆ ಯತ್ನಿಸಿದ್ದಾನೆ.

## ಕಿತ್ತೂರು ಚನ್ನಮ್ಮ ಮೃಗಾಲಯ ಕೂಲ್ ಕೂಲ್

• ಉದಯವಾಹಿನಿ,ಬೆಳಗಾವಿ

ಬಿಸಿಲಿನ ಧಗೆ ಮನುಷ್ಯರಷ್ಟೇ ಅಲ್ಲದೇ ಪ್ರಾಣಿ-ಪಕ್ಷಿಗಳನ್ನು ಕಂಗೆಡಿಸಿದೆ. ಹೀಗಾಗಿ, ಸುಡು ಬಿಸಿಲಿನಿಂದ ಪ್ರಾಣಿ-ಪಕ್ಷಿಗಳನ್ನು ರಕ್ಷಿಸಲು ಬೆಳಗಾವಿಯ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯ ಅಧಿಕಾರಿ ಮತ್ತು ಸಿಬ್ಬಂದಿ ಇನ್ನಿಲ್ಲದ ಕಸರತ್ತು ನಡೆಸಿದ್ದಾರೆ. ಮೃಗಾಲಯದಲ್ಲಿ ತಂಪಾದ ವಾತಾವರಣ ಸೃಷ್ಟಿಸಿದ್ದು, ಸ್ಪಿಂಕ್ಲರ್, ಫಾಗರ್, ಐಸ್ ಕ್ಯೂಬ್ ಬಳಸಿ ಪ್ರಾಣಿಗಳನ್ನು ಕೂಲ್ ಕೂಲ್ ಮಾಡುತ್ತಿದ್ದಾರೆ. ಹೌದು, ಅಧಿಕ ಬಿಸಿಲಿನ ತಾಪಮಾನದಿಂದ ಪ್ರಾಣಿಗಳಲ್ಲಿ ನಿರ್ಜಲೀಕರಣ ಭೀತಿ ಹಿನ್ನೆಲೆ ಬೆಳಗಾವಿ ತಾಲ್ಲೂಕಿನ ಭೂತರಾಮನಹಟ್ಟಿ ಬಳಿ ಇರುವ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸಮ್ಮರ್ ಪ್ರೋಟೋಕಾಲ್ ಜಾರಿಗೊಳಿಸಿದ್ದಾರೆ.

**ಸಂಬಳಕ್ಕಾಗಿ ಖಾಕಿ ಸೇವೆ ಅಲ್ಲ ಎಂಬುದನ್ನು ಪೊಲೀಸರು ಮೊದಲು ಮನಗಾಣಬೇಕು. ಖಾಕಿ ಗೌರವದ ಸಂಕೇತವಾಗಿದೆ. ಇದು ಉದ್ಯೋಗವಲ್ಲ ಜನ ಸೇವೆಯಾಗಿದೆ. ಎಲ್ಲರಿಗೂ ಖಾಕಿ ಹಾಕಲು ಅವಕಾಶವಿಲ್ಲ. ಸ್ವತ 3 ಬಾರಿ ಗೃಹ ಸಚಿವನಾಗಿದ್ದರು ನನಗೆ ಈ ಅವಕಾಶ ಇಲ್ಲ. ಠಾಣೆಗೆ ಬರುವ ನೊಂದವರಿಗೆ ಕಣ್ಣೀರು ಒರೆಸುವ, ಸಮಯೋಚ್ಚಿತ ಪರಿಹಾರ ಕಂಡುಕೊಳ್ಳುವ ಕೆಲಸ ನಿಮ್ಮಿಂದಾಗಬೇಕು. ತುಳಿತಕ್ಕೊಳಗಾದಂತಹ ಬಡವರು, ಅಲ್ಪಸಂಖ್ಯಾತರು, ಎಸ್.ಸಿ-ಎಸ್.ಟಿ. ಸಮುದಾಯದ ಜನರನ್ನು ಮುಖ್ಯ ವಾಹಿನಿಗೆ ತರಲು ನೆರವಾಗುವ ಮೂಲಕ ಪೊಲೀಸರು ಸೇವಾ ಧರ್ಮ ಪಾಲಿಸಬೇಕು.**

8,000 ಪೊಲೀಸ್ ಸಿಬ್ಬಂದಿ ನೇಮಕ

# ಪೊಲೀಸರು ಸೇವಾ ಧರ್ಮ ಪಾಲಿಸಬೇಕು ಸಚಿವ ಡಾ.ಜಿ.ಪರಮೇಶ್ವರ

ನ್ಯಾಯ ಒದಗಿಸುವಲ್ಲಿ ಕರ್ನಾಟಕ ಪೊಲೀಸ್ ನಂಬರ್-1


ಉದಯವಾಹಿನಿ ಚಿತ್ರ

ಇನ್ಮುಂದೆ ಪೊಲೀಸ್ ನೇಮಕಾತಿ

• ಉದಯವಾಹಿನಿ, ಕಲಬುರಗಿ

ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿ ಹಂಚಿಕೆ ಪ್ರಮಾಣ ಸಮಸ್ಯೆ ನಿವಾರಣೆಯಾಗಿದ್ದು, ಮೀಸಲಾತಿ ಹಂಚಿಕೆ ಕಾರಣದಿಂದ ನೇಮಕಾತಿಗೆ ತಡೆ ಹಿಡಿಯಲಾಗಿದ್ದ 8,000 ಪೊಲೀಸ್ ಅಧಿಕಾರಿ-ಸಿಬ್ಬಂದಿಗಳ ನೇಮಕಾತಿಗೆ ಶೀಘ್ರವೇ ಚಾಲನೆ ನೀಡಲಾಗುವುದು ಎಂದು ರಾಜ್ಯದ ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು.

ಮಂಗಳವಾರ ಕಲಬುರಗಿ ಹೊರವಲಯದ ನಾಗನಹಳ್ಳಿ ಪೊಲೀಸ್ ತರಬೇತಿ ಮಹಾವಿದ್ಯಾಲಯದ ಮಧುಕರ ಶೆಟ್ಟಿ ಕವಾಯತು ಮೈದಾನದಲ್ಲಿ ಜರುಗಿದ 13ನೇ ತಂಡದ ಪಿ.ಎಸ್.ಐ. (ಸಿವಿಲ್), 12ನೇ ತಂಡದ ಆರ್.ಎಸ್.ಐ/ ಸ್ಪೆಷಲ್ ಆರ್.ಎಸ್.ಐ.,6ನೇ ತಂಡದ ಪಿ.ಎಸ್.ಐ. (ಕೆ.ಎಸ್.ಐ.ಎಸ್.ಎಫ್) ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನದಲ್ಲಿ ಭಾಗವಹಿಸಿ ವಿವಿಧ ತುಕಡಿಗಳನ್ನು ವೀಕ್ಷಿಸಿದಲ್ಲದೆ ಪ್ರಶಿಕ್ಷಣಾರ್ಥಿಗಳಿಂದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿ ನ್ಯಾಯಯುತವಾಗಿ ಹಂಚಿಕೆಯಾಗಿದ್ದರಿಂದ ಇನ್ಮುಂದೆ ಪೊಲೀಸ್ ನೇಮಕಾತಿ ಮಂಡಳಿ ನೇಮಕಾತಿ ಪ್ರಕ್ರಿಯೆ ನಡೆಸಲಿದೆ ಎಂದರು. ನಮ್ಮ ಸರ್ಕಾರ ಬಂದ ನಂತರ ಪೊಲೀಸ್ ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ತರಲಾಗಿದೆ. ಮನೆ-ಮನೆಗೆ ಪೊಲೀಸ್ ಕಾರ್ಯಕ್ರಮದಡಿ ಸಾರ್ವಜನಿಕರ ಮನೆಗೆ ಪೊಲೀಸರು ಹೋಗಿ ನಿಮ್ಮ ಕಷ್ಟ ಕಾಲದಲ್ಲಿ ನಾವಿದೇವೆ ಎಂಬ ಧೈರ್ಯವನ್ನು ತುಂಬುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ಕೋಮುಗಲಭೆ, ಅಪರಾಧಗಳಿಗೆ ಇಲ್ಲಿ ಅವಕಾಶ ನೀಡುತ್ತಿಲ್ಲ. ನಾಡಿನಲ್ಲಿ ಶಾಂತಿ ವಾತಾವರಣ ಸ್ಥಾಪಿಸಲಾಗಿದೆ. ಇದರ ನಡುವೆಯೂ ಅಲ್ಲಲ್ಲಿ ಹೊರ ರಾಜ್ಯದಿಂದ ಬಂದು ಬ್ಯಾಂಕ್ ದರೋಡೆ, ಚಿನ್ನ ಕಳವು, ಕೊಲೆದಂತಹ ಪ್ರಕರಣಗಳನ್ನು ಸಹ ನಮ್ಮ ಪೊಲೀಸರು ಕ್ಷಿಪ್ರಗತಿಯಲ್ಲಿ ಭೇಧಿಸಿ ಆರೋಪಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಂಡಿದ್ದಾರೆ ಎಂದರು. ಆಧುನಿಕ ತಂತ್ರಜ್ಞಾನದ ಯುಗದಲ್ಲಿ ವಂಚನೆ ಪ್ರಕರಣಗಳು ಹೊಸ ರೂಪಗಳನ್ನು ಪಡೆದುಕೊಂಡಿದ್ದು, ಅದಕ್ಕೆ ತಕ್ಕಂತೆ ಡ್ರೋನ್, ಸಿ.ಸಿ.ಟಿ.ವಿ., ಬಾಡಿ ಕ್ಯಾಮರಾಗಳನ್ನು ಪೊಲೀಸರಿಗೆ ಒದಗಿಸಿದ್ದೇವೆ.

52 ವರ್ಷದ ಹಳೆಯದ ಸ್ಲೌಚ್ ಹ್ಯಾಟ್ ಬದಲಾಗಿ ಪಿ-ಕ್ಯಾಪ್ ನೀಡಿ ಪೊಲೀಸರ ಮನೋಸ್ಥೈರ್ಯ ಹೆಚ್ಚಿಸಲಾಗಿದೆ. ಡಿಜಿಟಲ್ ಅರೆಸ್ಟ್, ಸೈಬರ್ ವಂಚನೆ ಹೆಚ್ಚುತ್ತಿದ್ದು, ಇದಕ್ಕಾಗಿ ಪ್ರತ್ಯೇಕ ನೀತಿ ಜಾರಿಗೆ ತರಲಾಗಿದೆ. 2024ರಲ್ಲಿ 24,000 ಸಾವಿರ ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿದ್ದರೆ 2025ರಲ್ಲಿ ಇದರ ಪ್ರಮಾಣ 14,000ಕ್ಕೆ ಇಳಿಕೆಯಾಗಿದೆ. ಇದು ಆಧುನಿಕ ತಂತ್ರಜ್ಞಾನ ಹೊಂದಿಕೊಂಡಿದ್ದರ ಫಲವಾಗಿದೆ ಎಂದು ಪೊಲೀಸ್ ಇಲಾಖೆಯ ಕಾರ್ಯವನ್ನು ಸಚಿವರು ಪ್ರಶಂಸಿದರು. ಇಷ್ಟೆಲ್ಲದರ ನಡುವೆ ನಮಗೆ ಡ್ರಗ್ಸ್ ಜಾಲ ಸವಾಲಾಗಿ ಪರಿಣಮಿಸಿದೆ. ಕಳೆದ ಮೂರು ವರ್ಷದ ಅವಧಿಯಲ್ಲಿ ಕೋಟ್ಯಾಂತರ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು ಕಾನೂನು ರೀತಿಯಲ್ಲಿ ಅದನ್ನು ನಾಶಪಡಿಸಿದ್ದೇವೆ. ಡ್ರಗ್ಸ್ ಜಾಲಕ್ಕೆ ನಮ್ಮ ಯುವಕರು ಬಲಿಯಾಗುತ್ತಿರುವುದು ತುಂಬಾ ಖೇದಕರ ವಿಷಯವಾಗಿದೆ. ಡ್ರಗ್ಸ್ ಮುಕ್ತ ಕರ್ನಾಟಕ ನಮ್ಮ ಗುರಿಯಾಗಿದ್ದು, ಪೊಲೀಸ್ ಇಲಾಖೆ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದರು.

ಕಲಬುರಗಿಯ ನಾಗನಹಳ್ಳಿ ಪಿ.ಟಿ.ಸಿ. ನಿಂದ ಇಂದು 97 ಜನ ಪಿ.ಎಸ್.ಐ.ಗಳು ಬುನಾದಿ ತರಬೇತಿ ಪಡೆದು ಕರ್ತವ್ಯಕ್ಕೆ ಅಣಿಯಾಗಿದ್ದಾರೆ. ಕಲಬುರಗಿ ಪಿ.ಟಿ.ಸಿ. ಇಲ್ಲಿಯವರೆಗೆ ಸುಮಾರು 8,000 ಜನರಿಗೆ ತರಬೇತಿ ನೀಡಿದ ಶ್ರೇಯಸ್ಸು ಹೊಂದಿದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಪಿ.ಟಿ.ಸಿ ಸ್ಥಾಪನೆ ಹಿಂದೆ ದಿ. ಧರ್ಮಸಿಂಗ್ ಮತ್ತು ಡಾ.ಮಲ್ಲಿಕಾರ್ಜುನ ಖರ್ಗೆ ಅವರ ಕೊಡುಗೆ ಅಪಾರ ಇದೆ. ಡಾ.ಮಲ್ಲಿಕಾರ್ಜುನ ಖರ್ಗೆ ಅವರ ವಿಶೇಷ ಪ್ರಯತ್ನದ ಫಲವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆಂದೆ 371ಜೆ ಕಾಯ್ದೆ ತರಲಾಗಿದೆ. ಪರಿಣಾಮ ಕೆ.ಕೆ.ಆರ್.ಡಿ.ಬಿ. ಮಂಡಳಿಗೆ ಪ್ರತಿ ವರ್ಷ 5,000 ಕೋಟಿ ರೂ. ಅನುದಾನ ನೀಡಲಾಗುತ್ತಿದೆ. ಈ ಭಾಗದ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

**1** 97 ಪ್ರಶಿಕ್ಷಣಾರ್ಥಿಗಳು ಬುನಾದಿ ತರಬೇತಿ ಪಡೆದು ನಿರ್ಗಮನ

**2** ಡಾ.ಜಿ.ಪರಮೇಶ್ವರ ಅವರು ಪೊಲೀಸ್ ಇಲಾಖೆಗೆ ಸಂಬಂಧಿಸಿದ ಹ್ಯಾಂಡ್ ಬುಕ್ ಅನಾವರಣ

**3** ಆಧುನಿಕ ತಂತ್ರಜ್ಞಾನದ ಯುಗದಲ್ಲಿ ವಂಚನೆ ಪ್ರಕರಣಗಳು ಹೊಸ

### ಪೊಲೀಸ್ ಉದ್ಯೋಗವಲ್ಲ,ಸಮಾಜ ಸೇವೆ

ಕಾರ್ಯಕ್ರಮ ಅಧ್ಯಕ್ಷತೆವಹಿಸಿದ್ದ ರಾಜ್ಯದ ಪೊಲೀಸ್ ಮಾಹಾನಿರ್ದೇಶಕರು ಹಾಗೂ ಮತ್ತು ಪೊಲೀಸ್ ಮಹಾನಿರೀಕ್ಷಕ ಡಾ.ಎಂ.ಎ. ಸಲೀಮ್ ಅವರು ಸರ್ವರನ್ನು ಸ್ವಾಗತಿಸಿ ಮಾತನಾಡಿ, ಪೊಲೀಸ್ ಉದ್ಯೋಗವಲ್ಲ, ದೇಶದ ಒಳಾಡಳಿತ ರಕ್ಷಣೆಯ ಜವಾಬ್ದಾರಿ ಹೊಂದಿದ ಸಮಾಜ ಸೇವೆಯಾಗಿದೆ. ಇಂದಿಲ್ಲಿ ತರಬೇತಿ ಪಡೆದು ಕೆಲಸಕ್ಕೆ ಅಣಿಯಾಗಿರುವ ನೀವೆಲ್ಲರು ಪ್ರಮಾಣಿಕತೆ, ಶಿಸ್ತು ಮೈಗೂಡಿಸಿಕೊಂಡು ಜನರ ಅಶೋತ್ತರಗಳನ್ನು ಈಡೇರಿಸುವ ಕೆಲಸ ಮಾಡಬೇಕೆಂದು ಕರೆ ನೀಡಿದರು. ಇಲಾಖೆಯ ಮಾರ್ಗದರ್ಶಕರಾಗಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮನೆ ಮನೆಗೆ ಪೊಲೀಸ್, ಸನ್ಮಿತ್ರ, ಆಸರೆ ದಂತಹ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ ಎಂದರು.

### ಬ್ಯಾಟನ್ ಪ್ರಶಸ್ತಿ ನೀಡಿ ಗೌರವ

ಇನ್ನು 12 ತಿಂಗಳ ಬುನಾದಿ ತರಬೇತಿ ಅವಧಿಯಲ್ಲಿ ಒಳಾಂಗಣ, ಹೊರಾಂಗಣ ಸೇರಿದಂತೆ ವಿವಿಧ ವಿಭಾಗದಲ್ಲಿ ಉತ್ತಮ ಪ್ರದರ್ಶನ ತೋರಿದ ಪ್ರೊಬೇಷನರ್ ಪ್ರಶಿಕ್ಷಣಾರ್ಥಿಗಳಿಗೆ ಸಚಿವ ಡಾ.ಜಿ.ಪರಮೇಶ್ವರ ಅವರು ಟ್ರೋಫಿ ಪ್ರದಾನ ಮಾಡಿದರು. ಆರ್.ಎಸ್.ಐ,ಆರ್.ಎಸ್.ಐ ಹಾಗೂ ಕೆ.ಎಸ್.ಐ.ಎಸ್.ಎಫ್ ಪ್ರಶಿಕ್ಷಣಾರ್ಥಿಗಳಲ್ಲಿ ಒಳಾಂಗಣ ಅತ್ಯುತ್ತಮ ಪ್ರಶಿಕ್ಷಣಾರ್ಥಿಯಾಗಿ ಹೊರಹೊಮ್ಮಿದ ಪ್ರೊ. ಆರ್.ಎಸ್.ಐ. ಚೇತನಕುಮಾರ ಗುಡ್ಡೆಪ್ಪನವರ ಅವರಿಗೆ ಗೃಹ ಮಂತ್ರಿಗಳ ಟ್ರೋಫಿ, 7.62 ಎಂ.ಎಂ. ಎಸ್.ಎಲ್.ಆರ್ ರೈಫಲ್ ಫೈರಿಂಗ್‌ನಲ್ಲಿ ಪ್ರಥಮಸ್ಥಾನ ಮತ್ತು ಹೊರಾಂಗಣ ಅತ್ಯುತ್ತಮ ಪ್ರಶಿಕ್ಷಣಾರ್ಥಿಯಾಗಿರುವ ಪ್ರೊ. ಆರ್.ಎಸ್.ಐ. ದಿನೇಶ್ ಇ.ಟಿ ಅವರಿಗೆ ಡಿ.ಜಿ. ಮತ್ತು ಐ.ಜಿ.ಪಿ. ಟ್ರೋಫಿ, 9 ಎಂ.ಎಂ. ಪಿಸ್ತೂಲ್ ಫೈರಿಂಗ್‌ನಲ್ಲಿ ಪ್ರಥಮ ಸ್ಥಾನ ಪಡೆದಿರುವ ಪ್ರೊ.ಆರ್.ಎಸ್.ಐ. ಅಶೋಕ ಯಲ್ಲಪ್ಪ ಹೊಸಮನಿ ಅವರಿಗೆ ಟ್ರೋಫಿ ಹಾಗೂ ಸರ್ವೋತ್ತಮ ಪ್ರಶಿಕ್ಷಣಾರ್ಥಿಯಾಗಿ ಹೊರಹೊಮ್ಮಿದ ರಾಮನಗರ ಜಿಲ್ಲೆಯ ಪ್ರೊ. ಆರ್.ಎಸ್.ಐ. ಶರತ್ ಬಿ. ಅವರಿಗೆ ಮುಖ್ಯಮಂತ್ರಿಗಳ ಟ್ರೋಫಿ, ಮುಖ್ಯಮಂತ್ರಿಗಳ ಸ್ವೋರ್ಡ್ ಡಿ.ಜಿ. ಮತ್ತು ಐ.ಜಿ.ಪಿ. ಅವರ ಬ್ಯಾಟನ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ಪ್ರಶಿಕ್ಷಣಾರ್ಥಿಗಳಿಗೆ ಟ್ರೋಫಿ ಪ್ರದಾನ**

### ಹ್ಯಾಂಡ್ ಬುಕ್ ಅನಾವರಣ

ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ 02-ಪಿ.ಎಸ್.ಐ. (ಕೆ.ಎಸ್.ಐ.ಎಸ್.ಎಫ್), 09-ಆರ್.ಎಸ್.ಐ/ ಸ್ಪೆಷಲ್ ಆರ್.ಎಸ್.ಐ. ಹಾಗೂ 86-ಪಿ.ಎಸ್.ಐ. (ಸಿವಿಲ್) ಒಟ್ಟು 97 ಪ್ರಶಿಕ್ಷಣಾರ್ಥಿಗಳು ಬುನಾದಿ ತರಬೇತಿ ಪಡೆದು ನಿರ್ಗಮನಗೊಂಡರು. ಇದೇ ಸಂದರ್ಭದಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಪೊಲೀಸ್ ಇಲಾಖೆಗೆ ಸಂಬಂಧಿಸಿದ ಹ್ಯಾಂಡ್ ಬುಕ್ ಅನಾವರಣ ಮಾಡಿದರು.

**ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧ**

## ಮಿನಿ ನ್ಯೂಸ್


### ಯಾದಗಿರಿಯಲ್ಲಿ ಸಿಡಿಲು ಬಡಿದು 60 ಕುರಿಗಳು ಸಾವು

• ಉದಯವಾಹಿನಿ, ಯಾದಗಿರಿ

ಸಿಡಿಲು ಬಡಿದು 60 ಕುರಿಗಳು ಸಾವನ್ನಪ್ಪಿರುವ ಘಟನೆ ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ಬುದುರು ಗ್ರಾಮದಲ್ಲಿ ನಡೆದಿದೆ. ಕುರಿಗಾಹಿಗಳಾದ ಮಲ್ಲಪ್ಪ, ಜಲ್ಲಪ್ಪ ಎಂಬುವವರಿಗೆ ಸೇರಿದ 60 ಕುರಿಗಳು ಮೃತಪಟ್ಟಿವೆ. ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದೆ.

ಕುರಿಗಳನ್ನು ಹೊಡೆದುಕೊಂಡು ಬರುವಾಗ ಈ ಅವಘಡ ಸಂಭವಿಸಿದೆ. ಅವಘಡದಲ್ಲಿ ಸಿಡಿಲು ಬಡಿದು 60 ಕುರಿಗಳು ಸಾವನ್ನಪ್ಪಿವೆ. ಗುರುಮಠಕಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

### ಕೊಲ್ಲೂರು ಮೂಕಾಂಬಿಕೆಯ ದರ್ಶನ ಪಡೆದ ನಿರ್ಮಲಾ ಸೀತಾರಾಮನ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಉಡುಪಿ

ಕೊಲ್ಲೂರು ಮೂಕಾಂಬಿಕಾ ದೇವಿ ದೇವಸ್ಥಾನಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ ನೀಡಿದ್ದಾರೆ.

ಮೂಕಾಂಬಿಕೆ ದೇವಿಯ ದರ್ಶನ ಪಡೆದು, ದೇವಾಲಯವನ್ನು ವೀಕ್ಷಿಸಿದರು. ಬಳಿಕ ದೇವಾಲಯದ ಮುಂಭಾಗದ ಗರುಡಗಂಭದ ಮುಂದೆ ದೇವಾಲಯದ ಅರ್ಚಕರ ಜೊತೆ ಫೋಟೋ ಕ್ಲಿಕ್ಕಿಸಿಕೊಂಡರು. ನಂತರ ದೇವಾಲಯದ ಆಡಳಿತ ಮಂಡಳಿಯಿಂದ ಸಚಿವೆಗೆ ಗೌರವಿಸಲಾಯಿತು. ದೇವಾಲಯ ಭೇಟಿಯ ಬಳಿಕ, ಉಡುಪಿಯ ಕಾರ್ಯಕ್ರಮವೊಂದಕ್ಕೆ ಅವರು ತೆರಳಿದರು.

### ನಾನು ಪಂಚಮಸಾಲಿ ಪೀಠಕ್ಕೆ ಬರೋದು ಭಕ್ತರಿಗೆ ಬಿಟ್ಟ ವಿಚಾರ

• ಉದಯವಾಹಿನಿ, ದಾವಣಗೆರೆ

ವಚನಾನಂದ ಶ್ರೀಗಳ ಬದಲು ಪಂಚಮಸಾಲಿ ಪೀಠಕ್ಕೆ ನಾನು ಬರೋದು ಭಕ್ತರು ಹಾಗೂ ಟ್ರಸ್ಟಿಗಳಿಗೆ ಬಿಟ್ಟ ವಿಚಾರ ಎಂದು ಮನಗುಳಿ ಸಂಗನಬಸವ ಸ್ವಾಮೀಜಿ ಹೇಳಿದ್ದಾರೆ.ಹರಿಹರ ಪಂಚಮಸಾಲಿ ಪೀಠದ ವಿವಾದ ಹಿನ್ನೆಲೆ ಅವರು ಹರಿಹರಕ್ಕೆ ಆಗಮಿಸಿದ್ದರು. ಈ ವೇಳೆ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ಈ ಹಿಂದೆ ಸಹ ವಚನಾನಂದ ಸ್ವಾಮೀಜಿಗಳ ವಿರುದ್ಧ ಅವರು ಅಸಮಾಧಾನ ಹೊರಹಾಕಿದ್ದರು. ಹರಜಾತ್ರೆಯಲ್ಲಿ ವಚನಾನಂದ ಸ್ವಾಮೀಜಿ ಗಣ್ಯರಿಗೆ ಅಪಮಾನ ಮಾಡಿದ್ದಾರೆ. ಭಕ್ತರಲ್ಲಿ ಒಡಕು ತರುವ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಅಲ್ಲದೇ ಈ ಪೀಠಕ್ಕೆ ನಾನು ಬರೋದು ಭಕ್ತರಿಗೆ ಹಾಗೂ ಟ್ರಸ್ಟಿಗಳಿಗೆ ಬಿಟ್ಟ ವಿಚಾರ. ಸಮಾಜ ದೊಡ್ಡದಿದೆ ನನಗೂ ಈ ಭಾಗದಲ್ಲಿ ಅಪಾರ ಭಕ್ತ ಸಮೂಹ ಇದೆ ಎಂದಿದ್ದರು. ಈ ವಾರದ ಒಳಗೆ ವಚನಾನಂದ ಸ್ವಾಮೀಜಿಯನ್ನು ಪೀಠದಿಂದ ಹೊರ ಕಳಿಸಲು ಟ್ರಸ್ಟಿಗಳು ಮುಂದಾಗಿದ್ದಾರೆ. ಮಠದ ಪ್ರಧಾನ ಧರ್ಮದರ್ಶಿ ಬಿ.ಸಿ ಉಮಾಪತಿ ಸುಧೀರ್ಘವಾಗಿ ಲೆಕ್ಕಪತ್ರ ಮಂಡನೆ ಮಾಡಿದ್ದರು. ಇದರ ಬೆನ್ನಲ್ಲೇ ಸ್ವಾಮೀಜಿಯನ್ನು ಹೊರ ಹಾಕಲು ಚಿಂತನೆ ನಡೆಸಲಾಗಿದೆ.

### ಮಂಗಳೂರಿನ ಪದವು ಕುಲಶೇಖರದಲ್ಲಿ ಜಿಲ್ಲೆಯ ಮೊದಲ ಶನೈಶ್ಚರ ದೇವಸ್ಥಾನ!

• ಉದಯವಾಹಿನಿ, ಮಂಗಳೂರು

ಶನೇಶ್ವರ ಮಹಾತ್ಮನಿಗೆ ಆಗಮೋಕ್ತ ಸಿದ್ಧಾಂತದ ಪ್ರಕಾರ ನಿರ್ಮಿಸಲಾಗಿರುವ ದ.ಕ.ಜಿಲ್ಲೆಯ ಮೊದಲ ದೇವಸ್ಥಾನ ನಗರದ ಪದವು ಕುಲಶೇಖರದಲ್ಲಿ ತಲೆ ಎತ್ತಿದೆ. ನೂತನವಾಗಿ ನಿರ್ಮಾಣಗೊಂಡ ಶ್ರೀ ಶನೈಶ್ಚರ ದೇವಸ್ಥಾನ ಲೋಕಾರ್ಪಣೆಗೊಂಡಿದೆ. ಈ ದೇವಸ್ಥಾನದಲ್ಲಿಂದು ಶ್ರೀ ಶನೈಶ್ಚರ, ಶ್ರೀಮಹಾಗಣಪತಿ, ಶ್ರೀದುರ್ಗಾದೇವಿ, ನವಗ್ರಹ ದೇವರುಗಳ ಬಿಂಬ ಪ್ರತಿಷ್ಠಾಪನೆಗೊಂಡು ಬ್ರಹ್ಮಕಲಶೋತ್ಸವ ನೆರವೇರಿತು.ಹಿಂದೂ ಯುವ ಸೇನೆ ಪದವು ಶಾಖೆಯು 1990 ರಿಂದ ಕುಲಶೇಖರ ಕೈಕಂಬದಲ್ಲಿನ ಅಶ್ವತ್ಥ ಕಟ್ಟೆಯಲ್ಲಿ ಶನಿ ದೇವರ ಆರಾಧನೆ ಮಾಡುತ್ತಾ ಬರುತ್ತಿತ್ತು. ಈ ನಡುವೆ ಎರಡು ಬಾರಿ ಶ್ರೀ ಸಗ್ರಹ ಮುಖ ಶನೈಶ್ಚರ ಮಹಾಯಾಗ ನಡೆಸಲಾಗಿತ್ತು.

2023ರಲ್ಲಿ ಶ್ರೀ ಶನೈಶ್ಚರ ದೇವಸ್ಥಾನ ನಿರ್ಮಾಣ ಸಮಿತಿ ರಚಿಸಿ, 10 ಸೆಂಟ್ಸ್ ಜಾಗ ಖರೀದಿಸಿ, ನೂತನ ಶಿಲಾಮಯ ಶ್ರೀ ಶನೈಶ್ಚರ ದೇವಸ್ಥಾನದ ಶಿಲಾನ್ಯಾಸ 2024ರಲ್ಲಿ ನಿರ್ಮಿಸಲಾಯಿತು. ಇದೀಗ ಪ್ರಶ್ನಾ ಚಿಂತನೆಯಲ್ಲಿ ಶನೈಶ್ಚರ ದೇವಸ್ಥಾನದಲ್ಲಿ ನವಗ್ರಹ ಸಹಿತ ಶ್ರೀ ಶನೈಶ್ಚರ, ಮಹಾಗಣಪತಿ, ದುರ್ಗಾದೇವಿ ಬಿಂಬ ಪ್ರತಿಷ್ಠಾಪನೆ ಮಾಡಿ ಬ್ರಹ್ಮಕಲಶ ನೆರವೇರಿದೆ.

ಈ ಶನೈಶ್ಚರ ದೇವಸ್ಥಾನದ ಬ್ರಹ್ಮಕಲಶ ಕಾರ್ಯಕ್ರಮ ಸೌಹಾರ್ದಯುತವಾಗಿ ಸಂಪನ್ನಗೊಂಡಿದೆ. ಸಾವಿರಾರು ಮಂದಿ ಸೇರುವ ಈ ಕಾರ್ಯಕ್ರಮಕ್ಕೆ ಸ್ಥಳಾವಕಾಶ ಅಷ್ಟೇ ಬೇಕಾಗುತ್ತದೆ.

# ಧಾರಾಕಾರ ಮಳೆಯಿಂದಾಗಿ ಮಲೆನಾಡು ತತ್ತರ

• ಉದಯವಾಹಿನಿ, ಚಿಕ್ಕಮಗಳೂರು

ಕಾಫಿನಾಡು ಚಿಕ್ಕಮಗಳೂರಲ್ಲಿ ವರುಣನ ಆರ್ಭಟಕ್ಕೆ ಜನ ತತ್ತರಿಸಿ ಹೋಗಿದ್ದಾರೆ. ಸುಡು ಬಿಸಿಲಿನಿಂದ ಕಂಗೆಟ್ಟಿದ್ದ ಮಲೆನಾಡಿಗರಿಗೆ ಮಳೆರಾಯ ತಂಪೆರೆದಿದ್ದರೂ ಕೂಡ ಬಿರುಗಾಳಿ ಮತ್ತು ಆಲಿಕಲ್ಲಿನ ಆರ್ಭಟ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಆಲ್ದೂರು ಮತ್ತು ಮೂಡಿಗೆರೆ ಭಾಗದಲ್ಲಿ ಪ್ರಕೃತಿ ವಿಕೋಪಕ್ಕೆ ರೈತರು ಕಣ್ಣೀರು ಹಾಕುವಂತಾಗಿದ್ದು, ನೂರಾರು ಹಳ್ಳಿಗಳು ಕತ್ತಲೆಯಲ್ಲಿ ಮುಳುಗಿವೆ.

ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಸುತ್ತಮುತ್ತಲಿನ ಬಿರುಗಾಳಿಯ ಅನಾಹುತಕ್ಕೆ ಬರೋಬ್ಬರಿ ಇಪ್ಪತ್ತಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಒಂದರ ಹಿಂದೆ ಒಂದರಂತೆ ರಸ್ತೆಗೆ ಉರುಳಿವೆ. ಹೀಗಾಗಿ, ಸುಮಾರು 60 ಕಿಮೀ ವ್ಯಾಪ್ತಿಯ ಹತ್ತಾರು ಹಳ್ಳಿಗಳು ಕತ್ತಲೆಯಲ್ಲಿಯೇ ಮುಳುಗಿವೆ.

ಇದರಿಂದಾಗಿ ಮೆಸ್ಕಾಂಗೆ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ.


ಉದಯವಾಹಿನಿ ಚಿತ್ರ

ವಿದ್ಯುತ್ ಸಂಪರ್ಕ ಸರಿಪಡಿಸಲು ಮೆಸ್ಕಾಂ ಸಿಬ್ಬಂದಿ ಮಳೆಯ ನಡುವೆಯೇ ಹರಸಾಹಸಪಟ್ಟರೂ ಯಾವುದೇ ಪ್ರಯೋಜನವಾಗಿಲ್ಲ. ಇನ್ನು ಕಾಫಿ ಬೆಳೆಗಾರರ ಸ್ಥಿತಿಯಂತೂ ಹೇಳ ತೀರದಾಗಿದೆ. ಕಳೆದ ಒಂದು ತಿಂಗಳಿನಿಂದ ಬಿಟ್ಟು ಬಿಟ್ಟು ಸುರಿಯುತ್ತಿರುವ ಆಲಿಕಲ್ಲು ಮಳೆಯಿಂದಾಗಿ ಕೈಗೆ ಬಂದಿದ್ದ ಕಾಫಿ ಮತ್ತು ಅಡಿಕೆ ಬೆಳೆಗಳು ನೆಲಕಚ್ಚುವ ಆತಂಕ ಎದುರಾಗಿದೆ. ಮಳೆಗಾಲ ಆರಂಭಕ್ಕೂ ಮುನ್ನವೇ ಸಂಭವಿಸಿದ ಈ ಅನಾಹುತದಿಂದ ಮಲೆನಾಡಿನ ರೈತರ ಬದುಕು ಬೀದಿಗೆ ಬಂದಂತಾಗಿದೆ.

ಚಿಕ್ಕಮಗಳೂರು ಮತ್ತು ಬಾಳೆಹೊನ್ನೂರು ಸಂಪರ್ಕಿಸುವ ಶಂಕರ್ ಫಾಲ್ಸ್ ರಸ್ತೆಯಲ್ಲಿ ಬೃಹತ್ ಮರವೊಂದು ಧರೆಗುರುಳಿದ್ದರಿಂದ ವಾಹನ ಸಂಚಾರ ಗಂಟೆಗಟ್ಟಲೆ ಸ್ಥಗಿತಗೊಂಡಿತ್ತು. ಈ ವೇಳೆ ಸಿಬ್ಬಂದಿಗೆ ಸ್ಥಳೀಯರು ಮತ್ತು ಪ್ರಯಾಣಿಕರೇ ಸ್ವತಃ ಮರವನ್ನು ತೆರವುಗೊಳಿಸಿ ಮಾನವೀಯತೆ ಮೆರೆದಿದ್ದಾರೆ.

ಪ್ರಮುಖವಾಗಿ ಚಿಕ್ಕಮಗಳೂರು ತಾಲ್ಲೂಕು, ವಸ್ತಾರೆ, ಆಲ್ದೂರು, ಕೂದುವಳ್ಳಿ, ಮೂಡಿಗೆರೆ, ಕೊಟ್ಟಿಗೆಹಾರ, ಸಾರಗೋಡು, ಕುಂದೂರು, ಬಾಳೆಹೊನ್ನೂರು, ಕಣತಿ, ದೇವರ ಮನೆ, ಕೊಪ್ಪ, ಜಯಪುರ, ಅದರಲ್ಲೂ ಆಲಿಕಲ್ಲು ಮಳೆ ಬೀಳುತ್ತಿರುವುದು ಕಾಫಿ ಬೆಳೆಗಾರರಲ್ಲಿ ಆತಂಕ ಮನೆ ಮಾಡುವಂತೆ ಮಾಡಿದೆ.

ಬೇಸಿಗೆಯಲ್ಲೂ ಕೂಡ ವರುಣ ದೇವನ ಆರ್ಭಟಕ್ಕೆ ಮಲೆನಾಡು ಕಂಗಾಲಾಗಿದೆ. ಮಳೆರಾಯನ ಈ ವಿಚಿತ್ರ ಆಟ ಕಾಫಿನಾಡ ಜನರಲ್ಲಿ ಅಚ್ಚರಿ ಮತ್ತು ಆತಂಕ ಎರಡನ್ನೂ ಏಕಕಾಲಕ್ಕೆ ಸೃಷ್ಟಿಸಿದೆ.

**ವಾಹನ ಸಂಚಾರ ಗಂಟೆಗಟ್ಟಲೆ ಸ್ಥಗಿತ**

### ಕ್ಷಣಾರ್ಧದಲ್ಲಿ ಮರಕ್ಕೆ ಬೆಂಕಿ

ಮೂಡಿಗೆರೆಯ ಜಾಣಿಗೆ ಗ್ರಾಮದಲ್ಲಿ ಸಿಡಿಲಿನ ಭೀಕರತೆಗೆ ಜನರು ಬೆಚ್ಚಿಬಿದ್ದಿದ್ದಾರೆ. ರೈತ ತಮ್ಮಣ್ಣಗೌಡ ಎಂಬುವವರ ತೋಟದಲ್ಲಿನ ಮರಕ್ಕೆ ನೇರವಾಗಿ ಸಿಡಿಲು ಬಡಿದು ಕ್ಷಣಾರ್ಧದಲ್ಲಿ ಮರಕ್ಕೆ ಬೆಂಕಿ ಹೊತ್ತಿಕೊಂಡಿದೆ. ಹಸಿರ ಕಾನನದ ನಡುವೆ ಮಳೆ ಸುರಿಯುತ್ತಿದ್ದರೂ ಮರಕ್ಕೆ ಹೊತ್ತಿಕೊಂಡ ಬೆಂಕಿಯ ಕೆನ್ನಾಲಿಗೆಯ ದೃಶ್ಯಗಳು ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿವೆ.

# ಬಿರುಗಾಳಿ ಮಳೆಗೆ ಹಾನಿಗೀಡಾದ ಪ್ರದೇಶಗಳಿಗೆ ಸಚಿವ ಮಧು ಬಂಗಾರಪ್ಪ ಭೇಟಿ; ತ್ವರಿತ ಪರಿಹಾರಕ್ಕೆ ಸೂಚನೆ

• ಉದಯವಾಹಿನಿ, ಶಿವಮೊಗ್ಗ

ಬಿರುಗಾಳಿ ಸಹಿತ ಭಾರೀ ಮಳೆಯಿಂದ ಹಾನಿಗೊಳಗಾದ ಭದ್ರಾವತಿ ತಾಲ್ಲೂಕಿನ ಅರಹತೊಳಲು, ವಡ್ಡರಹಟ್ಟಿ, ಮಲ್ಲಿಗೇನಹಳ್ಳಿ ಸೇರಿದಂತೆ ಇತರೆ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಮಧು ಬಂಗಾರಪ್ಪ ಭೇಟಿ ನೀಡಿದರು. ಹಾನಿಗೊಳಗಾದ ಅಡಿಕೆ, ತೆಂಗು ತೋಟ ಸೇರಿ ಬೆಳೆ ಹಾನಿಯಾದ ರೈತರಿಗೆ ಮತ್ತು ಮನೆ ಕಳೆದುಕೊಂಡವರಿಗೆ ತಕ್ಷಣವೇ ಸೂಕ್ತ ಪರಿಹಾರ ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಬಿರುಗಾಳಿ ಮತ್ತು ಮಳೆಯಿಂದ ಹಾನಿಗೀಡಾದ ಅಡಕೆ ತೋಟಗಳು, ಮನೆಗಳಿಗೆಬೆಳಿಗ್ಗೆಯಿಂದಲೇ ಸಚಿವರು ಭೇಟಿ ನೀಡಿ, ಪರಿಶೀಲಿಸಿದರು.

ಈ ವೇಳೆ ಸಂತ್ರಸ್ತ ರೈತರು ಮತ್ತು ಜನರ ಜೊತೆ ಮಾತನಾಡಿ ಅಹವಾಲು ಸ್ವೀಕರಿಸಿದರು. ಈ ವೇಳೆ ಅಧಿಕಾರಿಗಳ ಬಳಿ ನಷ್ಟದ ಕುರಿತು ಮಾಹಿತಿ ಪಡೆದುಕೊಂಡು, ತ್ವರಿತ ಪರಿಹಾರಕ್ಕೆ ಕ್ರಮ ವಹಿಸಬೇಕೆಂದು ಸೂಚಿಸಿದರು.ಈ ವೇಳೆ ಮಾತನಾಡಿದ ಸಚಿವರು, ಬಿರುಗಾಳಿ ಮಳೆಗೆ ಹಾನಿಗೂಳದಾಗ ತೋಟಗಳಿಗೆ ಹಾಗೂ


ಉದಯವಾಹಿನಿ ಚಿತ್ರ

ಮನೆಗಳನ್ನು ವೀಕ್ಷಣೆ ಮಾಡಿದ್ದೇನೆ. ತ್ವರಿತವಾಗಿ ಸರ್ವೇ ಮಾಡಲು ಸೂಚಿಸಿರುವೆ. ಬಿರುಗಾಳಿ, ಮಳೆಗೆ ಹಾನಿಗೊಳಗಾದ ಬೆಳೆ ಮತ್ತು ಮನೆಗಳ ಮಹಜರನ್ನು ಶೀಘ್ರದಲ್ಲೇ ಕೈಗೊಂಡು ವರದಿ ಸಲ್ಲಿಸಲು ತಿಳಿಸಿದ್ದೇನೆ. ವಿದ್ಯುತ್ ಕಡಿತವಾಗಿ ಕುಡಿಯುವ ನೀರಿಗೆ ತೊಂದರೆಯಾಗಿದ್ದು, ತಕ್ಷಣವೇ ಕುಡಿಯುವ ನೀರು ಮತ್ತು 36 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ನೀಡುವಂತೆ ಮೆಸ್ಕಾಂಗೆ ಸೂಚಿರುವೆ ಎಂದು ತಿಳಿಸಿದರು. ಅರಹತೊಳಲಿನಲ್ಲಿ ಓರ್ವ ವ್ಯಕ್ತಿ ಸಾವು ಪ್ರಕರಣ ಸಂಬಂಧ ವರದಿ ನೀಡಲು ಸೂಚನೆ ನೀಡಿದ್ದೇನೆ. ನಷ್ಟದ ಕುರಿತು ಸಮಗ್ರ ವರದಿ ನೀಡುವಂತೆ ಕಂದಾಯ ಇಲಾಖೆ, ಗ್ರಾ.ಪಂ. ವಿಪತ್ತು ನಿರ್ವಹಣೆ ಇಲಾಖೆ ಸಮನ್ವಯ ಸಾಧಿಸಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ನಾನು ಖುದ್ದಾಗಿ ಹಾನಿಗೆ ಪರಿಹಾರ ನೀಡುವ ಕುರಿತು ಮುಖ್ಯಮಂತ್ರಿಗಳ ಜೊತೆ ಮತ್ತು ಕಂದಾಯ ಸಚಿವರ ಜೊತೆ ಮಾತನಾಡುತ್ತೇನೆ. ಅಲ್ಲದೆ ಸಚಿವ ಸಂಪುಟ ಸಭೆಯಲ್ಲೂ ಸಹ ಈ ವಿಚಾರ ಗಮನಕ್ಕೆ ತರುತ್ತೇನೆ ಎಂದರು.ವಡ್ಡರಹಟ್ಟಿ ಭಾಗದ ಹಲವು ಮನೆಗಳಿಗೆ ಈವರೆಗೆ ಗ್ರಾ.ಪಂನಿಂದ ಹಕ್ಕುಪತ್ರ ಲಭ್ಯವಾಗಿಲ್ಲ. ಈ ಕುರಿತು ಪರಿಶೀಲಿಸಿ ಕ್ರಮ ವಹಿಸುವಂತೆ ಸೂಚನೆ ನೀಡಿರುವೆ.

ಮಳೆಗಾಲದಲ್ಲಿ ಮನೆ ಸುತ್ತಮುತ್ತ ದುರ್ಬಲ ಮರಗಳು, ಮನೆಗಳ ಶೀಟ್ ಚಾವಣಿಗಳ ಬಗ್ಗೆ ಸಾರ್ವಜನಿಕರು ಸಹ ಎಚ್ಚರಿಕೆ ವಹಿಸಬೇಕು. ಸರ್ಕಾರವು ಸಂತ್ರಸ್ತರ ಪರವಾಗಿದೆ. ಪ್ರಕೃತಿ ವಿಕೋಪದಿಂದ ಉಂಟಾದ ನಷ್ಟಕ್ಕೆ ನಿಯಮಾನುಸಾರ ಗರಿಷ್ಠ ಪರಿಹಾರ ಕೊಡಿಸಲು ಕ್ರಮ ಕೈಗೊಳ್ಳಲಾಗುವುದು. ಅಧಿಕಾರಿಗಳು ತಳಮಟ್ಟದಲ್ಲಿ ಕೆಲಸ ಮಾಡಿ ಸಾರ್ವಜನಿಕರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಸಚಿವರು ತಿಳಿಸಿದರು.

ಈ ವೇಳೆ ಅಡಕೆ ತೋಟದ ಮಾಲೀಕರಾದ ಜಯದೇವಪ್ಪ ಮಾತನಾಡಿ, ಬಂದ ಭಾರೀ ಗಾಳಿ ಮಳೆ ನಮ್ಮ ಜೀವಮಾನದಲ್ಲಿಯೇ ನೋಡಿರಲಿಲ್ಲ, ನಮ್ಮ ಭಾಗದಲ್ಲಿ ಅಡಕೆ ಪ್ರಮುಖ ಬೆಳೆ. ಇಲ್ಲಿ ಶೇ.50 ರಷ್ಟು ಅಡಕೆ ಬೆಳೆ ನಾಶವಾಗಿದೆ.

ಕೆಲವರದ್ದು ಮುಕ್ಕಾಲು ಭಾಗ ನಾಶವಾಗಿದೆ. ಅಡಕೆ ಮೇಲೆಯೇ ನಮ್ಮ ಜೀವನ ಅವಲಂಬಿತವಾಗಿದೆ. ಆರ್ಥಿಕವಾಗಿ ಸುಧಾರಿಸಿಕೊಳ್ಳುವುದು ಭಾರೀ ಕಷ್ಟವಾಗಿದೆ. ಇದರಿಂದ ಇದನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡಿ ಪರಿಹಾರ ನೀಡಬೇಕೆಂದರು.

ಕೇವಲ ಮುಕ್ಕಲು ಗಂಟೆ ಬಂದ ಭಾರೀ ಗಾಳಿ ಮಳೆಗೆ ನಮ್ಮ ಜೀವನವೇ ಮುರಿದು ಬಿದ್ದಿದೆ. 30ಕ್ಕೂ ಹೆಚ್ಚು ಗ್ರಾಮಗಳಲ್ಲಿ ಹಾನಿಯಾಗಿದೆ ಎಂದರು.

### ಸಣ್ಣಪುಟ್ಟ ಪರಿಹಾರ ಘೋಷಣೆ ಮಾಡಿ

ಭಾರೀ ಗಾಳಿ ಮಳೆಗೆ ನಮ್ಮ ಜೀವನವೇ ಕೊಚ್ಚಿಕೊಂಡು ಹೋಗಿದೆ. ಇದರಿಂದ ನಮ್ಮ ಮುಂದಿನ ಜೀವನ ಹೇಗೆ ಎಂದು ಗ್ರಾಮಸ್ಥರು ಚಿಂತೆಗೀಡಾಗಿದ್ದಾರೆ. ಭತ್ತ, ರಾಗಿಯಂತಹ ಬೆಳೆಗಳು ಮೂರು ತಿಂಗಳಿಗೆ ಬರುತ್ತದೆ. ಇದರಿಂದ ಜೀವನ, ಆರೋಗ್ಯ ಹೇಗೂ ಸಾಗಿಸಬಹುದು.

ಆದರೆ, ಅಡಕೆಗೆ ಕನಿಷ್ಠ 10 ವರ್ಷ ಬೇಕಿದೆ. ಸಣ್ಣಪುಟ್ಟ ಪರಿಹಾರ ಘೋಷಣೆ ಮಾಡಿದರೆ ಯಾವುದೇ ಅನುಕೂಲವಾಗಲ್ಲ. ಇದನ್ನು ಪ್ರಕೃತಿ ವಿಕೋಪ ಎಂದು ಘೋಷಣೆ ಮಾಡಿ ದೊಡ್ಡಮಟ್ಟದ ಪರಿಹಾರ ಘೋಷಿಸಬೇಕು.

ನನ್ನ ಎರಡು ಎಕರೆ ತೋಟದಲ್ಲಿ ಶೇ.90 ರಷ್ಟು ನಾಶವಾಗಿದೆ. 1200 ಅಡಕೆ ಮರದಲ್ಲಿ 1 ಸಾವಿರ ಅಡಕೆ ಮರಗಳು ಬಿದ್ದಿವೆ.

ನಾನು ಅವುಗಳನ್ನು ಮಕ್ಕಳಂತೆ ಸಾಕಿದ್ದೆ, ಇದರಿಂದ ತೋಟಕ್ಕೆ ಹೋಗಲು ಬೇಸರವಾಗುತ್ತಿದೆ. ಆದ್ದರಿಂದ ನಾನು ಎರಡು ದಿನಗಳಿಂದ ತೋಟಕ್ಕೆ ಹೋಗಿಲ್ಲ ಎಂದು ಅಡಕೆ ತೋಟದ ಮಾಲೀಕರಾದ ಚಂದ್ರಶೇಖರ್ ಬೇಸರ ಹೊರ ಹಾಕಿದರು.

# ನೈಟ್ ಕ್ಲಬ್‌ನಲ್ಲಿ ನಟಿಯ ಮೇಲೆ ಭೀಕರ ಹಲ್ಲೆ





ಸಾಮಾನ್ಯವಾಗಿ ವಾರಾಂತ್ಯ ಬಂದರೆ ಸಾಕು, ಜನಸಾಮಾನ್ಯರೇ.. ಪಬ್ಬು-ಪಾರ್ಟಿ ಅಂತೆಲ್ಲ ಮಜಾ ಮಾಡುತ್ತಾರೆ. ತಮ್ಮ ಪ್ರೀತಿ ಪಾತ್ರರ ಜೊತೆ ಕಾಲ ಕಳಿಯುತ್ತಾರೆ. ಇನ್ನೂ.. ಸೆಲೆಬ್ರಿಟಿಗಳ ಕಥೆ ಕೇಳ್ಬೇಕಾ..? ಮಬ್ಬುಗತ್ತಲು ಅನೇಕ ಧ್ರುವತಾರೆಯರ ಬದುಕಿನ ಬಹು ಮುಖ್ಯವಾಗಿರುತ್ತೆ. ಆದರೆ ಇಂದಿನ ಈ ಪಾರ್ಟಿ ಸಂಸ್ಕೃತಿ ಕೇವಲ ಮೋಜು ಮಸ್ತಿಗೆ ಮಾತ್ರ ಸೀಮಿತವಾಗಿಲ್ಲ. ಬದಲಿಗೆ ಅಹಂಕಾರ, ದರ್ಪ, ಅಧಿಕಾರದ ಪ್ರದರ್ಶನವಾಗಿದೆ.

ಅದರಲ್ಲಿಯೂ ಹೈ - ಫೈ ಕ್ಲಬ್‌ಗಳಿಗೆ ಬರುವ ಬಹುತೇಕರು ದೈಹಿಕ ಹಲ್ಲೆ ನಡೆಸುವ ಲೈಸನ್ಸ್ ತಮ್ಮ ಬಳಿ ಇದೆ ಎಂಬಂತೆ ವರ್ತಿಸಿತ್ತಿದ್ದಾರೆ. ಈಗೋಗೆ ಚೂರೇ ಚೂರು ಹರ್ಟ್ ಆದರೂ ಸಾಕು, ಕಣ್ಣೆದುರು ಯಾರಾದರೂ ಸಿಕ್ಕೂ ಚೂರು ಕಿರಿಕ್ ಆದರೂ ಸಾಕು, ರಂಪ-ರಾಮಾಯಣ ಮಾಡುತ್ತಿದ್ದಾರೆ.

ಇದಕ್ಕೆ ಪ್ರೀತ್ ಸಿಂಗ್ ಮೇಲೆ ನಡೆದ ಹಲ್ಲೆ ಸದ್ಯದ ಉದಾಹರಣೆ ಹೌದು, ಪ್ರೀತ್ ಸಿಂಗ್.. ಉದಯೋನ್ಮುಖ ತಾರೆ. ಮಾಡೆಲ್. ಜನಪ್ರಿಯ ರಿಯಾಲಿಟಿ ಶೋ ''ಸ್ಪ್ಲಿಟ್ ವಿಲ್ಲಾ'' ಸೀಸನ್ 16ರ ಸ್ಪರ್ಧಿ. ಫಿಟ್‌ನೆಸ್, ಫ್ಯಾಷನ್ ಮತ್ತು ಲೈಫ್ ಸ್ಟೈಲ್ ಬಗ್ಗೆ ಪೋಸ್ಟ್‌ಗಳನ್ನು ಹಾಕುವ ಮೂಲಕ ಇನ್ಫ್ಲುಯೆನ್ಸರ್ ಆಗಿಯೂ ಪ್ರೀತ್ ಗುರುತಿಸಿಕೊಂಡಿದ್ದಾರೆ. ಇಂಥಾ ಪ್ರೀತ್ ಸಿಂಗ್ ಅವರ ಮೇಲೆ ರಣಭೀಕರ ಹಲ್ಲೆ ಆಗಿದೆ. ಅದು ಮುಂಬೈನಲ್ಲಿ. ಈ ವಿಚಾರ ಹಲವರಿಗೆ ಸದ್ಯ ಆಘಾತವನ್ನುಂಟು ಮಾಡಿದೆ. ಯಾಕೆಂದರೆ ಮುಂಬೈ ಹೇಳಿ ಕೇಳಿ ನೈಟ್ ಲೈಫ್ ವಿಚಾರದಲ್ಲಿ ಬೇರೆ ನಗರಗಳಿಗೆ ಮಾದರಿ. ಯಾವತ್ತೂ ಮಲಗದ ಊರು ಇದು ಎಂದು ಅಲ್ಲಿದ್ದವರು ಮತ್ತು ಹಲವರು ಹೇಳುತ್ತಾರೆ. 2025 ವರದಿಯ ಪ್ರಕಾರ ಮಹಿಳೆಯರಿಗೆ ಅತ್ಯಂತ ಸುರಕ್ಷಿತ ನಗರ ಎಂಬ ಬಿರುದು ಪಡೆದ ಕೆಲವೇ ನಗರಗಳಲ್ಲಿ ಮುಂಬೈ ಕೂಡ ಒಂದು. ಹೆಣ್ಣು ಮಕ್ಕಳು ಮುಂಬೈನಲ್ಲಿ ಮಧ್ಯರಾತ್ರಿ 2 ಗಂಟೆಗೆ ಕೂಡ ಆರಾಮಾಗಿ ಓಡಾಡಬಹುದು.. ಕ್ಲಬ್‌ಗಳಲ್ಲಿ ಬಿಂದಾಸ್ ಆಗಿ ಪಾರ್ಟಿ ಮಾಡಬಹುದು.. ಎಂಬ ಮಾತಿದೆ. ಆದರೆ..ಈ ಕಲರ್ ಫುಲ್ ಲೈಟಿನ ಹಿಂದಿನ ಒಂದು ಕಥೆ ಈಗ ಬೆಳಕಿಗೆ ಬಂದಿದ್ದು ಇನ್‌ಸ್ಟಾಗ್ರಾಮ್‌ನಲ್ಲಿ ಪ್ರೀತ್ ಸಿಂಗ್ ತಮ್ಮ ನೋವನ್ನು ಹಂಚಿಕೊಂಡಿದ್ದಾರೆ.

ಈ ಕುರಿತು ಮಾತನಾಡಿರುವ ಪ್ರೀತ್ ಸಿಂಗ್, ಮುಂಬೈ ಮಹಿಳೆಯರಿಗೆ ಅತ್ಯಂತ ಸುರಕ್ಷಿತ ನಗರಗಳಲ್ಲಿ ಒಂದು ಎಂದು ನಾನು ಯಾವಾಗಲೂ ಕೇಳಿದ್ದೆ. ಆದರೆ ನನಗೆ ಇಂತಹ ಅನುಭವ ಆಗುತ್ತದೆ ಎಂದು ನಾನು ಕನಸು ಮನಸಿನಲ್ಲಿಯೂ ಊಹಿಸಿಲ್ಲ ಎಂದು ಹೇಳಿದ್ದಾರೆ. ಈ ವಿಚಾರ ಬರೆಯುತ್ತಿರುವಾಗಲೂ ನನ್ನ ದೇಹ ನಡಗುತ್ತಿದೆ ಎಂದಿದ್ದಾರೆ. ನನ್ನ ಕಣ್ಣುಗಳು ಊದಿವೆ, ಮುಖದ ಮೇಲೆ ಗಾಯಗಳಾಗಿವೆ ಎಂದು ಹೇಳಿರುವ ಪ್ರೀತ್ ಸಿಂಗ್ ನನಗೆ ಏನಾಯಿತು ಎಂದು ಈ ಕ್ಷಣಕ್ಕೂ ಇನ್ನೂ ನನಗೆ ಅರ್ಥವಾಗುತ್ತಿಲ್ಲ ಎಂದು ಹೇಳಿದ್ದಾರೆ. ತಮ್ಮ ಮೇಲೆ ನಡೆದ ಹಲ್ಲೆಯ ವಿವರವನ್ನು ಹಂಚಿಕೊಂಡಿರುವ ಪ್ರೀತ್ ಸಿಂಗ್, ನಾನು ನನ್ನ ಸ್ನೇಹಿತನೊಂದಿಗೆ ಕ್ಲಬ್‌ನಲ್ಲಿ ಸುಮ್ಮನೆ ಕುಳಿತಿದ್ದೆ. ಆಗ ಒಬ್ಬಳು ಹುಡುಗಿ ಬಂದು ಇವರನ್ನು ಒಳಗಡೆ ಬಿಟ್ಟಿದ್ಯಾರು ಎಂದು ಜೋರಾಗಿ ಕೀರುಚಾಡಲು ಶುರು ಮಾಡಿದಳು ಎಂದು ಹೇಳಿದ್ದಾರೆ.

> ಆರಂಭ ಚಿಕ್ಕ ಜಗಳದಿಂದಾಯ್ತು, ಮಾತಿಗೆ ಮಾತು ಬೆಳೆಯಿತು ಇದೇ ಸಮಯದಲ್ಲಿ ಆ ಹುಡುಗಿಯ ಸ್ನೇಹಿತ ಮಧ್ಯ ಪ್ರವೇಶಿಸಿ ಮನಸೋ ಇಚ್ಛೆ ನನ್ನ ಮೇಲೆ ಹಲ್ಲೆ ಮಾಡಿದ ಅವನು ಹೊಡೆದ ಏಟಿಗೆ ನನ್ನ ಒಂದು ಹಲ್ಲು ಮುರಿಯಿತು. ಅಲ್ಲಿದ್ದ ಬೇರೆ ಜನರು ನನ್ನ ಸಹಾಯಕ್ಕೆ ಬರುವವರೆಗೆ ಆ ವ್ಯಕ್ತಿ ನನ್ನ ಮೇಲೆ ಹಲ್ಲೆ ಮಾಡುತ್ತಲೇ ಇದ್ದ. ಇಷ್ಟೆಲ್ಲಾ ಹೇಗೆ ಆಯ್ತು ಎನ್ನುವುದೇ ನನಗೆ ಗೊತ್ತಾಗುತ್ತಿಲ್ಲ, ನಾನು ಇನ್ನೂ ಆಘಾತದಲ್ಲಿದ್ದೇನೆ ಯಾರಿಗೂ ಇಂತಹ ಪರಿಸ್ಥಿತಿ ಬರಬಾರದು.
>
> ■ ಪ್ರೀತ್ ಸಿಂಗ್

# ಆರು ವರ್ಷದ ಬಳಿಕ ರಿಯಾಗೆ ಸಿಕ್ತು ಹಣದ ಮೇಲೆ ಹಕ್ಕು

## ಸುಶಾಂತ್ ಸಿಂಗ್ ಪ್ರಕರಣ



ಸುಶಾಂತ್ ಸಿಂಗ್ ಸಾವು ಹಲವು ರೀತಿಯಲ್ಲಿ ಬಾಲಿವುಡ್ ಅನ್ನು ಕಾಡಿತ್ತು. ಅದರಲ್ಲೂ ಸುಶಾಂತ್ ಅವರ ಮಾಜಿ ಗೆಳತಿ ರಿಯಾ ಚಕ್ರವರ್ತಿ ಅಂತೂ ನಾನಾ ರೀತಿಯ ಸಂಕಟಗಳನ್ನು ಎದುರಿಸಬೇಕಾಯ್ತು. ಪ್ರಕರಣದಲ್ಲಿ ಅವರನ್ನು ವಿಲನ್ ಮಾಡಲಾಗಿತ್ತು. ಜೈಲಿಗೆ ಸಹ ಹೋಗಿ ಬಂದರು. ಆದರೆ ವಿಚಾರಣೆ ನಡೆದು ಸತ್ಯಗಳು ಒಂದೊಂದಾಗಿ ಹೊರಗೆ ಬರತೊಡಗಿದಾಗ ಅವರ ಮೇಲಿದ್ದ ಅನುಮಾನಗಳು ಕರಗತೊಡಗಿದವು. ಇದೀಗ ಸುಮಾರು ಆರು ವರ್ಷಗಳ ಬಳಿಕ ರಿಯಾಗೆ ತಮ್ಮ ಹಣದ ಮೇಲಿನ ಹಕ್ಕು ಮರಳಿ ದೊರೆತಿದೆ. ಬಾಲಿವುಡ್ ನಟ ಸುಶಾಂತ್ ಸಿಂಗ್ ನಿಧನವಾಗಿ ಆರು ವರ್ಷಗಳಾಗುತ್ತಾ ಬಂದಿದೆ. 2020ರ ಜೂನ್ ತಿಂಗಳಲ್ಲಿ ಸುಶಾಂತ್ ಅವರು ನಿಧನ ಹೊಂದಿದ್ದರು. ಅವರ ಶವ ನೇಣುಬಿಗಿದ ಸ್ಥಿತಿಯಲ್ಲಿ ಮುಂಬೈನ ಅವರ ಮನೆಯಲ್ಲಿ ಪತ್ತೆ ಆಗಿತ್ತು. ಸುಶಾಂತ್ ಸಿಂಗ್ ಸಾವು ಹಲವು ರೀತಿಯಲ್ಲಿ ಬಾಲಿವುಡ್ ಅನ್ನು ಕಾಡಿತ್ತು. ಅದರಲ್ಲೂ ಸುಶಾಂತ್ ಅವರ ಮಾಜಿ ಗೆಳತಿ ರಿಯಾ ಚಕ್ರವರ್ತಿ ಅಂತೂ ನಾನಾ ರೀತಿಯ ಸಂಕಟಗಳನ್ನು ಎದುರಿಸಬೇಕಾಯ್ತು. ಪ್ರಕರಣದಲ್ಲಿ ಅವರನ್ನು ವಿಲನ್ ಮಾಡಲಾಗಿತ್ತು. ಜೈಲಿಗೆ ಸಹ ಹೋಗಿ ಬಂದರು. ಆದರೆ ವಿಚಾರಣೆ ನಡೆದು ಸತ್ಯಗಳು ಒಂದೊಂದಾಗಿ ಹೊರಗೆ ಬರತೊಡಗಿದಾಗ ಅವರ ಮೇಲಿದ್ದ ಅನುಮಾನಗಳು ಕರಗತೊಡಗಿದವು. ಇದೀಗ ಸುಮಾರು ಆರು ವರ್ಷಗಳ ಬಳಿಕ ರಿಯಾಗೆ ತಮ್ಮ ಹಣದ ಮೇಲಿನ ಹಕ್ಕು ಮರಳಿ ದೊರೆತಿದೆ. ಮುಂಬೈನ ವಿಶೇಷ ನ್ಯಾಯಾಲಯವು ನಟಿ ರಿಯಾ ಚಕ್ರವರ್ತಿ, ಅವರ ಸಹೋದರ ಶೋವಿಕ್ ಮತ್ತು ತಾಯಿ ಸಂಧ್ಯಾ ಅವರಿಗೆ ಸೇರಿದ ಬ್ಯಾಂಕ್ ಖಾತೆಗಳನ್ನು ಡಿ-ಫ್ರೀಜ್ ಮಾಡಲು ಅನುಮತಿ ನೀಡಿದೆ. 2020ರಲ್ಲಿ ನಟ ಸುಶಾಂತ್ ಸಿಂಗ್ ರಾಜ್‌ಪೂತ್ ಅವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾದಕ ದ್ರವ್ಯ ನಿಯಂತ್ರಣ ಮಂಡಳಿ ಸುಶಾಂತ್ ಮತ್ತು ಅವರ ಸಹೋದರನ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಿತ್ತು. ಡ್ರಗ್ಸ್ ಜಾಲದೊಂದಿಗೆ ಲಿಂಕ್ ಇದೆ ಎಂಬ ಕಾರಣ ನೀಡಿ ಈ ಕ್ರಮ ಕೈಗೊಳ್ಳಲಾಗಿತ್ತು. ಇದೀಗ ನಡೆದ ವಿಚಾರಣೆಯಲ್ಲಿ ತನಿಖಾ ಸಂಸ್ಥೆಯು ಎನ್‌ಡಿಪಿಎಸ್ () ಕಾಯ್ದೆಯ ಸೆಕ್ಷನ್ 68 ಅಡಿಯಲ್ಲಿ ಅಗತ್ಯವಿರುವ ಕಾನೂನು ಪ್ರಕ್ರಿಯೆಗಳನ್ನು ಸರಿಯಾಗಿ ಪಾಲಿಸಿಲ್ಲ ಎಂದು ನ್ಯಾಯಾಲಯ ಗಮನಿಸಿದ್ದು, ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಿದ 30 ದಿನಗಳ ಒಳಗಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಿತ್ತು, ಆದರೆ ಈ ಪ್ರಕರಣದಲ್ಲಿ ಹಾಗೆ ಮಾಡಿಲ್ಲ ಎಂದು ಕೋರ್ಟ್ ಹೇಳಿದೆ. ಕಾನೂನುಬದ್ಧವಾಗಿ ಪ್ರಕ್ರಿಯೆ ನಡೆಯದ ಕಾರಣ, ಇನ್ನು ಮುಂದೆ ಈ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಿ ಇಡುವುದು ಸರಿಯಲ್ಲ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ಇದರಿಂದಾಗಿ ರಿಯಾ ಕುಟುಂಬಕ್ಕೆ ತಮ್ಮ ಹಣವನ್ನು ಬಳಸಲು ಈಗ ಅವಕಾಶ ಸಿಕ್ಕಿದೆ.

# ಕ್ಷಮೆಯಾಚಿಸಿದ ಸಂಜಯ್ ದತ್

50 ಬುಡಕಟ್ಟು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸ್ಪಾನ್ಸರ್

ಇದೀಗ ಸರ್ಕೆ ಚುನರ್ ತೇರಿ ಸರ್ಕೆ ಹಾಡಿನ ವಿವಾದಕ್ಕೆ ಸಂಬಂಧಿಸಿದಂತೆ ನಟ ಸಂಜಯ್ ದತ್ ಸೋಮವಾರ ರಾಷ್ಟ್ರೀಯ ಮಹಿಳಾ ಆಯೋಗದ ಮುಂದೆ ಹಾಜರಾಗಿ ಲಿಖಿತವಾಗಿ ಕ್ಷಮೆಯಾಚಿಸಿದ್ದಾರೆ. ಪ್ರೇಮ್ ನಿರ್ದೇಶನದ ಬಹುನಿರೀಕ್ಷಿತ 'ಕೆಡಿ' ಸಿನಿಮಾದ ಹಾಡು 'ಸರ್ಸೆ ನಿನ್ನ ಸೆರಗ ಸರ್ಸೆ'ಯ ಸಾಹಿತ್ಯ ಮತ್ತು ದೃಶ್ಯಗಳ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾದ ನಂತರ, ಕೇಂದ್ರ ಸರ್ಕಾರ ಹಿಂದಿ ಆವೃತ್ತಿ 'ಸರ್ಕೆ ಚುನರ್ ತೇರಿ ಸರ್ಕೆ'ಯನ್ನು ಬ್ಯಾನ್ ಮಾಡಿದೆ. ಇದೀಗ ಸರ್ಕೆ ಚುನರ್ ತೇರಿ ಸರ್ಕೆ ಹಾಡಿನ ವಿವಾದಕ್ಕೆ ಸಂಬಂಧಿಸಿದಂತೆ ನಟ ಸಂಜಯ್ ದತ್ ಸೋಮವಾರ ರಾಷ್ಟ್ರೀಯ ಮಹಿಳಾ ಆಯೋಗದ ಮುಂದೆ ಹಾಜರಾಗಿ ಲಿಖಿತವಾಗಿ ಕ್ಷಮೆಯಾಚಿಸಿದ್ದು, ಇದರಿಂದ ಸಮಾಜಕ್ಕೆ ಉದ್ದೇಶಪೂರ್ವಕವಲ್ಲದ ಹಾನಿ ಉಂಟಾಗಿದ್ದರೆ ವಿಷಾದ ವ್ಯಕ್ತಪಡಿಸುವುದಾಗಿ ಹೇಳಿದ್ದಾರೆ. ಅಧ್ಯಕ್ಷೆ ವಿಜಯ ರಹತ್ಕರ್ ನೇತೃತ್ವದಲ್ಲಿ ನಡೆದ ವಿಚಾರಣೆಯ ಸಮಯದಲ್ಲಿ, ಹಾಡಿನಲ್ಲಿ ಮಹಿಳೆಯರ ಬಗ್ಗೆ ಅಸಭ್ಯತೆ ಮತ್ತು ಅಶ್ಲೀಲ ಪ್ರಾತಿನಿಧ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಸರಿಪಡಿಸುವ ಕ್ರಮವಾಗಿ, ಸಾಮಾಜಿಕ ಕಲ್ಯಾಣ ಮತ್ತು ಮಹಿಳಾ ಸಬಲೀಕರಣದ ಪ್ರಯತ್ನಗಳ ಭಾಗವಾಗಿ 50 ಬುಡಕಟ್ಟು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸ್ಪಾನ್ಸರ್ ಮಾಡಲು ಸಂಜಯ್ ದತ್ ಬದ್ಧರಾಗಿದ್ದಾರೆ.



# ಆ ದೇವಾಲಯಕ್ಕೆ ಭೇಟಿ ನೀಡಿದ ಮೇಲೆ ಜೀವನ ಬದಲಾಯ್ತು: ಶ್ರುತಿ ಹಾಸನ್



ಪಾಶ್ಚಾತ್ಯ ಶೈಲಿಯ ಜೀವನ ನಿರ್ವಹಣೆ ಮಾಡುವ ನಟಿಯರಲ್ಲಿ ಒಬ್ಬರು. ಲಿವಿನ್ ರಿಲೇಶನ್ ಶಿಪ್, ಪದೇ ಪದೇ ಬದಲಾಗುವ ಬಾಯ್‌ಫ್ರೆಂಡ್, ನೈಟ್ ಲೈಫ್, ಪಾರ್ಟಿಗಳು, ಕಾನ್ಸರ್ಟ್‌ಗಳು ಇನ್ನೂ ಹಲವು. ಆದರೆ ಅವರು ಅಪ್ಪಟ ದೈವ ಭಕ್ತೆ. ದೇವಾಲಯ ಒಂದಕ್ಕೆ ಹೋಗಿದ್ದಕ್ಕೆ ತಮ್ಮ ಜೀವನ ಬದಲಾಯ್ತು ಎಂದು ಅವರು ಖುದ್ದು ಹೇಳಿಕೊಂಡಿದ್ದಾರೆ. ಯಾವುದು ಆ

ಚಿತ್ರರಂಗದ ( ) ಬಹುತೇಕರು ದೇವರಿನಲ್ಲಿ ವಿಶ್ವಾಸ ಇರುವವರೇ ಆಗಿದ್ದಾರೆ. ಸಿನಿಮಾಗಳ ಶೂಟಿಂಗ್ ಆರಂಭವಾಗುವುದೇ ದೇವರ ಪೂಜೆ ಮೂಲಕ, ಮುಗಿಯುವುದು ಸಹ ಪೂಜೆಯ ಮೂಲಕವೇ. ಆದರೆ ನಟ-ನಟಿಯರ ಐಶಾರಾಮಿ ಜೀವನ ಶೈಲಿ, ಪಾರ್ಟಿಗಳು, ಅವರ ಉಡುಪುಗಳು ಇನ್ನಿತರೆಗಳನ್ನು ಗಮನಿಸುವ ಜನ ದೇವರಲ್ಲಿ ನಂಬಿಕೆ ಇಲ್ಲದವರು ಎಂದು ನಿರ್ಧರಿಸಿಬಿಡುತ್ತಾರೆ. ನಟಿ ಶ್ರುತಿ ಹಾಸನ್, ಪಾಶ್ಚಾತ್ಯ ಶೈಲಿಯ ಜೀವನ ನಿರ್ವಹಣೆ ಮಾಡುವ ನಟಿಯರಲ್ಲಿ ಒಬ್ಬರು. ಲಿವಿನ್ ರಿಲೇಶನ್ ಶಿಪ್, ಪದೇ ಪದೇ ಬದಲಾಗುವ ಬಾಯ್‌ಫ್ರೆಂಡ್, ನೈಟ್ ಲೈಫ್, ಪಾರ್ಟಿಗಳು, ಕಾನ್ಸರ್ಟ್‌ಗಳು ಇನ್ನೂ ಹಲವು. ಆದರೆ ಅವರು ಅಪ್ಪಟ ದೈವ ಭಕ್ತೆ. ದೇವಾಲಯ ಒಂದಕ್ಕೆ ಹೋಗಿದ್ದಕ್ಕೆ ಜೀವನ ಬದಲಾಯ್ತು ಎಂದು ಅವರು ಖುದ್ದು ಹೇಳಿಕೊಂಡಿದ್ದಾರೆ. ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ ನಟಿ ಶ್ರುತಿ ಹಾಸನ್ ಅವರು ತಮ್ಮ ಜೀವನದಲ್ಲಿ ಉಂಟಾದ ದೊಡ್ಡ ಬದಲಾವಣೆಯ ಬಗ್ಗೆ ಮಾತನಾಡಿದ್ದಾರೆ. ಜೀವನದಲ್ಲಿ ಖಿನ್ನತೆಗೆ ಒಳಗಾಗಿದ್ದರಂತೆ ಶ್ರುತಿ ಹಾಸನ್, ಜೀವನದಲ್ಲಿ ಯಾವುದೂ ಸರಿಯಾಗಿ ನಡೆಯುತ್ತಿಲ್ಲ, ಸೋಲುತ್ತಿದ್ದೇನೆ ಎಂದು ಅನಿಸಲು ಆರಂಭಿಸಿತ್ತಂತೆ. ಕಷ್ಟಗಳ ಮೇಲೆ ಕಷ್ಟಗಳು ಬರುತ್ತಿದ್ದವಂತೆ. ಆಗ ಗೆಳೆಯನೊಬ್ಬ ದೇವಾಲಯವೊಂದಕ್ಕೆ ಭೇಟಿ ನೀಡುವಂತೆ ಸಲಹೆ ನೀಡಿದನಂತೆ. ಗೆಳೆಯನ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ ಶ್ರುತಿ ಹಾಸನ್, ಚೆನ್ನೈನ ವಾರಾಹಿ ಅಮ್ಮನ ಗುಡಿಗೆ ಭೇಟಿ ನೀಡಿದರು. ನಂತರ ತಮ್ಮ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆಗಳಾಗಿವೆ ಎಂದಿದ್ದಾರೆ

# ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್: ಭಾರತಕ್ಕೆ ಪ್ರಾಬಲ್ಯ ಸಾಧಿಸುವ ಗುರಿ





ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳು, ಮಂಗಳವಾರ ಇಲ್ಲಿ ಆರಂಭವಾಗುವ ವಿಶ್ವ ಟೀಮ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಎಂದಿನಂತೆ ಭರವಸೆ ಮತ್ತು ಒತ್ತಡದ ಸಮ್ಮಿಶ್ರಣದೊಡನೆ ಕಣಕ್ಕಿಳಿಯಲಿವೆ. ಏಳನೇ ಗುಂಪಿನಲ್ಲಿರುವ ಭಾರತ ಪುರುಷರ ತಂಡದಲ್ಲಿ ಮಾನವ್ ಠಕ್ಕರ್ , ಜಿ.ಸತ್ಯನ್ (42), ಮಾನುಷ್ ಶಾ (51), ಹರ್ಮೀತ್ ದೇಸಾಯಿ (80) ಮತ್ತು ಪಾಯಸ್ ಜೈನ್ (127) ಅವರನ್ನು ಒಳಗೊಂಡಿದೆ. ರ‍್ಯಾಂಕಿಂಗ್ ಗಣನೆಗೆ ತೆಗೆದುಕೊಂಡರೆ, ಗುಂಪಿನ ಇತರ ತಂಡಗಳಾದ ಸ್ಲೊವಾಕಿಯಾ, ಟ್ಯುನೀಷಿಯಾ ಮತ್ತು ಗ್ವಾಟೆಮಾಲಾ ಎದುರು ಭಾರತ ಗೆಲ್ಲುವ ಫೇವರಿಟ್ ಆಗಿದೆ.

ತಂಡಕ್ಕಿರುವ ಹಿನ್ನಡೆ ಎಂದರೆ ಅನುಭವಿ ಆಟಗಾರ ಶರತ್ ಕಮಲ್ ಅವರ ನಿವೃತ್ತಿ. ಒತ್ತಡದ ಸಂದರ್ಭಗಳಲ್ಲಿ ಅವರ ಅನುಭವ ತಂಡದ ಬೆನ್ನಿಗಿರುತಿತ್ತು. ಯುವ ಉತ್ಸಾಹಿಗಳಿರುವ ಮಹಿಳೆಯರ ತಂಡವು ಆರನೇ ಗುಂಪಿನಲ್ಲಿದ್ದು, ಉಕ್ರೇನ್, ಉಗಾಂಡ ಮತ್ತು ರ್‍ವಾಂಡಾ ಗುಂಪಿನ ಇತರ ತಂಡಗಳಾಗಿವೆ. ಮಣಿಕಾ ಬಾತ್ರ, ಯಶಸ್ವಿನಿ ಘೋರ್ಪಡೆ (88), ದಿಯಾ ಚಿತಳೆ (92), ಸುತೀರ್ಥ ಮುಖರ್ಜಿ (120), ಸಿಂಡರೆಲಾ ದಾಸ್ (175) ಅವರು ತಂಡದಲ್ಲಿದ್ದಾರೆ. 16 ವರ್ಷ ವಯಸ್ಸಿನ ಸಿಂಡ್ರೆಲಾ ತಂಡದ ಕಿರಿಯಾ ಆಟಗಾರ್ತಿ.

ಉಕ್ರೇನ್‌ನ ತಂಡಕ್ಕೆ ಮಾರ್ಗರಿಟಾ ಪೆಸೊಟ್‌ಸ್ಕಾ ನೇತೃತ್ವ ವಹಿಸಿದ್ದು ಮಹಿಳಾ ತಂಡಕ್ಕೆ ಪೈಪೋಟಿ ಎದುರಾಗಬಹುದು. ಬುಸಾನ್ (ದಕ್ಷಿಣ ಕೊರಿಯಾ)ನಲ್ಲಿ ನಡೆದ 2024ರ ಆವೃತ್ತಿಯಲ್ಲಿ ಭಾರತ ತಂಡಗಳು 32ರ ಸುತ್ತಿಗೆ ತಲುಪಿದ್ದರೂ, ಅದರಿಂದ ಮುಂದಕ್ಕೆ ಹೋಗಲು ವಿಫಲವಾಗಿದ್ದವು.

ಗುಂಪಿನಲ್ಲಿ ಅಗ್ರಸ್ಥಾನ ಪಡೆದ ತಂಡಗಳು ನೇರವಾಗಿ ಮುಖ್ಯ ಡ್ರಾಕ್ಕೆ ಪ್ರವೇಶಪಡೆಯಲಿವೆ. ಎರಡನೇ ಸ್ಥಾನ ಪಡೆದ ತಂಡಗಳು ಸಂಕೀರ್ಣ ಕ್ವಾಲಿಫಿಕೇಷನ್ ಪ್ರಕ್ರಿಯೆ ಮುಖಾಂತರ (ಪಂದ್ಯ ಅನುಪಾತ) ಅರ್ಹತೆ ಗಳಿಸಬೇಕಾಗುತ್ತದೆ. ಈ ವರ್ಷ ಈ ಚಾಂಪಿಯನ್‌ಷಿಪ್ ಶತಮಾನೋತ್ಸವ ಕಾಣುತ್ತಿದೆ. ಮೊದಲ ಆವೃತ್ತಿ 1926ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದಿತ್ತು.

# ಡೆಲ್ಲಿ, ಆರ್‌ಸಿಬಿ ಪಂದ್ಯದಲ್ಲಿ ದಾಖಲಾದ ದಾಖಲೆಗಳ ಪಟ್ಟಿ



ಡಿ ಆವೃತ್ತಿ ಐಪಿಎಲ್‌ನ 38ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಡೆಲ್ಲಿ ಕ್ಯಾಪಿಟಲ್ಸ್ (ಡಿಸಿ) ತಂಡಗಳು ಕಾದಾಟ ನಡೆಸಿದವು. ಈ ಪಂದ್ಯದಲ್ಲಿ ಆರ್‌ಸಿಬಿ ಅಮೋಘ ಪ್ರದರ್ಶನ ನೀಡಿ ಜಯ ಸಾಧಿಸಿದೆ.

ಡೆಲ್ಲಿ ಕ್ಯಾಪಿಟಲ್ಸ್ ಗೆಲುವಿನ ಆಸೆಗೆ ಕೊಳ್ಳಿ ಇಟ್ಟ ಆರ್‌ಸಿಬಿ 9 ವಿಕೆಟ್‌ಗಳಿಂದ ಪಂದ್ಯ ಗೆದ್ದು ಎರಡನೇ ಸ್ಥಾನ ಭದ್ರ ಪಡಿಸಿಕೊಂಡಿದೆ. 2026 ನಡೆದ ಪಂದ್ಯದಲ್ಲಿ ಟಾಸ್ ಸೋತರೂ ಮೊದಲು ಬ್ಯಾಟ್ ಮಾಡಿದ ಡೆಲ್ಲಿ 75 ರನ್‌ಗಳಿಗೆ ಆಲೌಟ್ ಆಯಿತು. ಈ ವೇಳೆ ಜೋಶ್ ಹ್ಯಾಜಲ್‌ವುಡ್ 4, ಭುವನೇಶ್ವರ್ ಕುಮಾರ್ 3 ವಿಕೆಟ್ ಪಡೆದು ಮಿಂಚಿದರು. ಅಲ್ಪ ಗುರಿಯನ್ನು ಬೆನ್ನಟ್ಟಿದ ಆರ್‌ಸಿಬಿ 6.3 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 77 ರನ್ ಸೇರಿಸಿ ಜಯ ಸಾಧಿಸಿತು. ಈ ಗೆಲುವಿನ ಮೂಲಕ ಆರ್‌ಸಿಬಿ ಎರಡನೇ ಬಾರಿ ಪ್ರಶಸ್ತಿ ಎತ್ತುವ ಆಸೆ ಚಿಗುರಿದೆ. - ಪವರ್ ಪ್ಲೇನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ 13 ರನ್ ಕಲೆ ಹಾಕಿದ್ದು, ಐಪಿಎಲ್ ಇತಿಹಾಸದಲ್ಲಿ ಮೊದಲ 6 ಓವರ್‌ಗಳಲ್ಲಿ ಕಲೆ ಹಾಕಿದ ಅಲ್ಪ ಮೊತ್ತವಾಗಿದೆ. ಇದಕ್ಕೂ ಮೊದಲು ಆರ್‌ಆರ್, ಆರ್‌ಸಿಬಿ ತಂಡಗಳು 14 ರನ್‌ಗಳನ್ನು 2009ರಲ್ಲಿ ಹಾಗೂ ಎಸ್‌ಆರ್‌ಎಚ್ ಇಷ್ಟೇ ರನ್‌ಗಳನ್ನು 2022ರಲ್ಲಿ ದಾಖಲಿಸಿತ್ತು. ಪವರ್‌ಪ್ಲೇನಲ್ಲಿ ಕನಿಷ್ಠ ಮೊತ್ತ ಕಲೆ ಹಾಕಿದ ತಂಡಗಳ ವಿವರ ಸ್ಕೋರ್ ತಂಡ ವಿರುದ್ಧ ಸ್ಥಳ ವರ್ಷ 14/2 ರಾಜಸ್ಥಾನ್ ರಾಯಲ್ಸ್ ಆರ್.ಸಿ.ಬಿ ಕೇಪ್ ಟೌನ್ 2009 14/3 ಸನ್ ರೈಸರ್ಸ್ ಹೈದರಾಬಾದ್ ರಾಜಸ್ಥಾನ್ ರಾಯಲ್ಸ್ ಪುಣೆ 2022 15/2 ಚೆನ್ನೈ ಸೂಪರ್ ಕಿಂಗ್ಸ್ ಕೆ.ಕೆ.ಆರ್ ಕೋಲ್ಕತ್ತಾ 2011 15/4 ಡೆಲ್ಲಿ ಕ್ಯಾಪಿಟಲ್ಸ್ ಗುಜರಾತ್ ಟೈಟಾನ್ಸ್ ಅಹಮದಾಬಾದ್ 2023 16/1 ಚೆನ್ನೈ ಸೂಪರ್ ಕಿಂಗ್ಸ್ ಡೆಲ್ಲಿ ಡೇರ್ ಡೆವಿಲ್ಸ್ ರಾಯ್‌ಪುರ 2015 16/1 ಚೆನ್ನೈ ಸೂಪರ್ ಕಿಂಗ್ಸ್ ಆರ್.ಸಿ.ಬಿ ಚೆನ್ನೈ 2019 - ಡೆಲ್ಲಿ ಕ್ಯಾಪಿಟಲ್ಸ್ ಕೇವಲ 7 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತು. ಇದು ಐಪಿಎಲ್ ಇತಿಹಾಸದ ಇನ್ನಿಂಗ್ಸ್‌ವೊಂದರಲ್ಲಿ ತಂಡ 5 ವಿಕೆಟ್‌ಗೆ ದಾಖಲಿಸಿದ ಎರಡನೇ ಕನಿಷ್ಠ ಮೊತ್ತವಾಗಿದೆ. - ಡೆಲ್ಲಿ ತಂಡ ಪವರ್ ಪ್ಲೇನಲ್ಲಿ 6 ವಿಕೆಟ್ ಕಳೆದುಕೊಂಡಿತು. ಈ ಮೂಲಕ ಡಿಸಿ ಮತ್ತೊಂದು ಬೇಡವಾದ ದಾಖಲೆಯನ್ನು ತನ್ನದಾಗಿಸಿಕೊಂಡಿದೆ. 2011 ರಲ್ಲಿ ಡೆಕ್ಕನ್ ಚಾರ್ಜಸ್ ವಿರುದ್ಧ ಕೊಚ್ಚಿ ತಂಡವೂ ಪವರ್‌ಪ್ಲೇನಲ್ಲಿ 6 ವಿಕೆಟ್ ಕಳೆದುಕೊಂಡಿತ್ತು. ಐಪಿಎಲ್‌ನಲ್ಲಿ 9000 ರನ್‌ಗಳ ಮೈಲಿಗಲ್ಲು ದಾಟಿದ ಕಿಂಗ್ ಕೊಹ್ಲಿ - ಐಪಿಎಲ್‌ನಲ್ಲಿ ಅತಿ ಹೆಚ್ಚು ಎಸೆತಗಳು ಬಾಕಿ ಇರುವಂತೆ ಪಂದ್ಯವನ್ನು ಗೆದ್ದ ಎರಡನೇ ಪಂದ್ಯ ಎಂಬ ಹೆಗ್ಗಳಿಕೆ ಆರ್‌ಸಿಬಿ ತಂಡದ್ದಾಗಿದೆ. ಆರ್‌ಸಿಬಿ, ಡೆಲ್ಲಿ ವಿರುದ್ಧ 81 ಎಸೆತ ಬಾಕಿ ಇರುವಂತೆ ಜಯ ಸಾಧಿಸಿತು. ಇದಕ್ಕೂ ಮೊದಲು ಮುಂಬೈ 87 ಎಸೆತ ಬಾಕಿ ಇರುವಂತೆ ಕೆಕೆಆರ್ ವಿರುದ್ಧ ಜಯ ಸಾಧಿಸಿತ್ತು. - ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯದಲ್ಲಿ ಆರ್‌ಸಿಬಿ ತಂಡದ ಸುಯಶ್ ಶರ್ಮಾ 20 ಡಾಟ್ ಬೌಲ್‌ಗಳನ್ನು ಮಾಡಿದರು. ಇದು ಐಪಿಎಲ್‌ನಲ್ಲಿ ಅನ್‌ಕ್ಯಾಪ್ಡ್ ಆಟಗಾರ ಮಾಡಿದ ಅತಿ ಹೆಚ್ಚು ಡಾಟ್ ಬೌಲ್‌ಗಳಾಗಿವೆ. ಈ ಮೂಲಕ ಸುಯಶ್ ಶರ್ಮಾ, ಜೊತೆಯಾಗಿ ಅಗ್ರಸ್ಥಾನದಲ್ಲಿದ್ದಾರೆ. ಇವರು ಮುನಫ್ ಪಟೇಲ್ ಅವರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಮುನಫ್ ಆರ್‌ಆರ್ ಪರ ಆಡುವಾಗ ಕೆಕೆಆರ್ ವಿರುದ್ಧ ಈ ಸಾಧನೆ ಮಾಡಿದ್ದರು. ಸುಯಶ್ ಸಾಧನೆ - ಸುಯಶ್ ಶರ್ಮಾ ತಮ್ಮ 4 ಓವರ್‌ಗಳ ಕೋಟಾದಲ್ಲಿ 7 ರನ್ ನೀಡಿ 1 ವಿಕೆಟ್ ಪಡೆದಿದ್ದು, ಅನ್‌ಕ್ಯಾಪ್ಡ್ ಬೌಲರ್ ಬೆಸ್ಟ್ ಎಕನಾಮಿ ಆಗಿದೆ. ಇದಕ್ಕೂ ಮೊದಲು ರಾಹುಲ್ ಶರ್ಮಾ (2/7) ಮುಂಬೈ ವಿರುದ್ಧ ಪುಣೆ ಪರ ಆಡುವಾಗ ಈ ಸಾಧನೆ ಮಾಡಿದ್ದರು.

# ವೈಭವ್ ಸೂರ್ಯವಂಶಿ ಗಾಯ ಗಂಭೀರವಾಗಿಲ್ಲ ಎಂದ ಕೋಚ್:



ಪಂಜಾಬ್ ಹಾಗೂ ರಾಜಸ್ಥಾನ್ ತಂಡಗಳು ಹಣಾಹಣಿಗೆ ಸಿದ್ದವಾಗಿದ್ದು, ವಿರುದ್ದದ ಮ್ಯಾಚ್ ನಲ್ಲಿ ಗಾಯಗೊಂಡಿದ್ದ ವೈಭವ್ ಸೂರ್ಯವಂಶಿ ಈ ಪಂದ್ಯದಲ್ಲಿ ಆಡಲಿದ್ದಾರಾ ಎಂಬ ಪ್ರಶ್ನೆಗಳು ಕೇಳಿಬಂದಿವೆ. ಇದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದು, ಗಾಯ ಗಂಭೀರವಾಗಿಲ್ಲ ಎಂದು ತಿಳಿಸಿದೆ. ಇದು ಸದ್ಯ ಈ ಪಂಜಾಬ್ ವಿರುದ್ದ ಸೂರ್ಯವಂಶಿ ಮೈದಾನಕ್ಕಿಳಿಯುವ ನೀರಿಕ್ಷೆ ಹೆಚ್ಚಿಸಿದೆ. ಇತ್ತ ವೈಭವ್ ಸೂರ್ಯವಂಶಿ ಕುರಿತು ಮಾಧ್ಯಮಗಳು ಒಲಂಪಿಕ್ ಶೂಟರ್ ಮನು ಭಾಕರ್ ಅವರಿಗೆ ಪ್ರಶ್ನೆ ಕೇಳಿದ್ದು, ಇದು ಸದ್ಯ ಅವರ ಸಾಧನೆಗೆ ಮಾಡಿದ ಅವಮಾನ ಎಂದು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಏ. 28 ರಂದು ಪಂಜಾಬ್ ಕಿಂಗ್ಸ್ () ವಿರುದ್ಧದ ಮುಂದಿನ ದೊಡ್ಡ ಪಂದ್ಯಕ್ಕೆ ರಾಜಸ್ಥಾನ್ ರಾಯಲ್ಸ್ ತಂಡ ಸಜ್ಜಾಗುತ್ತಿವೆ. ಈ ನಡುವೆ ಇದೀಗ ತಂಡ ಯುವ ಪ್ರತಿಭೆಯಾಗಿರುವ ವೈಭವ್ ಸೂರ್ಯವಂಶಿ ಗಾಯಗೊಂಡಿದ್ದು, ಈ ನಿರ್ಣಾಯಕ ಪಂದ್ಯದಲ್ಲಿ ಮೈದಾನಕ್ಕಿಳಿಯುತ್ತಾರಾ ಎಂಬುದರ ಮೇಲೆ ಎಲ್ಲರ ಚಿತ್ತ ನೆಟ್ಟಿದೆ.

ಸನ್ ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ ಪರ ಅಬ್ಬರಿಸಿದ್ದ 15 ವರ್ಷದ ವೈಭವ್ ಸೂರ್ಯವಂಶಿ ಅದ್ಭುತ ಶತಕ ಬಾರಿಸುವ ಮೂಲಕ ತಂಡಕ್ಕೆ ಬಲ ತುಂಬಿದ್ದರು. ಆದರೆ, 2ನೇ ಇನ್ನಿಂಗ್ಸ್ ಅಷ್ಟರಲ್ಲಿ ರಿಂಗ್ ಒಳಗೆ ಫೀಲ್ಡಿಂಗ್ ಮಾಡುತ್ತಾ, ಲಾಫ್ಟೆಡ್ ಶಾಟ್ ಅನ್ನು ಬೆನ್ನಟ್ಟಲು ವೇಗವಾಗಿ ಓಡಿದ್ದು, ಈ ವೇಳೆ ಅವರು ಹ್ಯಾಮ್ ಸ್ಟ್ರಿಂಗ್ ಇಂಜ್ಯೂರಿಗೆ ತುತ್ತಾಗಿದ್ದರು. ಇದು ಸದ್ಯ ಅವರು ಪಂಜಾಬ್ ವಿರುದ್ಧ ಮ್ಯಾಚ್ ನಲ್ಲಿ ಆಡುತ್ತಾರೆಯೇ ಎಂಬ ಪ್ರಶ್ನೆಗಳನ್ನು ಹುಟ್ಟುಹಾಕಿದೆ.



ಈಗಾಗಲೇ ಚೆನ್ನೈ ಹಲವು ಪಂದ್ಯಗಳನ್ನು ಆಡಿದೆ. ಈ ಸೀಸನ್ ನಲ್ಲಿ ಚೆನ್ನೈ ಹೇಳಿಕೊಳ್ಳುವಂತಹ ಪ್ರದರ್ಶನ ನೀಡುತ್ತಿಲ್ಲ. ಹೀಗಿರುವಾಗ ತಂಡಕ್ಕೆ ಧೋನಿ ಆಸರೆಯಾಗುತ್ತಾರೆ, ಜೊತೆಗೆ ಅವರು ಮೈದಾನದಲ್ಲಿ ಆಡುವುದನ್ನು ಕಣ್ತುಂಬಿಕೊಳ್ಳಬೇಕು ಎಂಬ ಅಭಿಮಾನಿಗಳ ಆಸೆ ಮಾತ್ರ ಈವರೆಗೂ ಈಡೇರಿಲ್ಲ. ಗಾಯಕ್ಕೆ ಒಳಗಾಗಿರುವ ಧೋನಿ ತಂಡದಲ್ಲಿ ಇದ್ದಾಗಲೂ ಸಹ ಈವರೆಗೂ ಒಂದೇ ಒಂದು ಪಂದ್ಯವನ್ನು ಸಹ ಆಡಿಲ್ಲ. ಧೋನಿ ಫಿಟ್ ಆಗಿದ್ದರೂ ಪಂದ್ಯಕ್ಕೆ ಹಾಜರ್ ಯಾಕಾಗುತ್ತಿಲ್ಲ? ಧೋನಿ ಅನಾರೋಗ್ಯದ ಕಾರಣದಿಂದ ಎಲ್ಲಾ ಪಂದ್ಯಗಳಿಂದ ದೂರ ಉಳಿದಿದ್ದು, ಸದ್ಯ ಇದೀಗ ಧೋನಿ ಪೂರ್ಣವಾಗಿ ಫಿಟ್ ಆಗಿದ್ದಾರೆ. ಹಾಗಾಗಿ ಹಾಗೂ ಗುಜರಾತ್ ಟೈಟಾನ್ಸ್ ವಿರುದ್ದ ಪಂದ್ಯಗಳ ಮೂಲಕ ಮರಳುತ್ತಾರೆ ಎಂಬ ಮತ್ತೆ ಆಟವಾಡುತ್ತಾರೆ ಎಂಬ ನೀರಿಕ್ಷೆಗಳು ಸುಳ್ಳಾಗಿವೆ. ಈ ನಡುವೆ ಇತ್ತೀಚೆಗೆ ಕೇವಲ ತಾಲೀಮಿನಲ್ಲಿ ಸಕ್ರಿಯರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ, ಪಂದ್ಯಕ್ಕಾಗಿ ಮೈದಾನವನ್ನು ಮಾತ್ರ ಪ್ರವೇಶಿಸುತ್ತಿಲ್ಲ. ಇದಕ್ಕೇನು ಕಾರಣ ಎಂದು ಹಲವರಲ್ಲಿ ಪ್ರಶ್ನೆ ಮೂಡಿದೆ. ಆದರೆ, ಪಂದ್ಯದಲ್ಲಿ ಧೋನಿ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಾಣಿಸಿಕೊಳ್ಳುವ ಮೂಲಕ ಯುವ ಆಟಗಾರನ ಸ್ಥಾನವನ್ನು ತೆಗೆದುಕೊಳ್ಳಲು ಹಾಗೂ ಕಳೆದ ಪಂದ್ಯಗಳಲ್ಲಿನ ಸಂಯೋಜನೆಯನ್ನು ಬದಲಾಯಿಸುವ ಬಗ್ಗೆ ಹಿಂಜರಿಯುತ್ತಿದ್ದಾರೆ ಎಂದು ದಿ ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ. ಇದರ ಜೊತೆಗೆ ಅಲ್ಲದೆ, ಈ ಸೀಸನ್ ನಲ್ಲಿ ಮಧ್ಯಮ ಕ್ರಮಾಂಕವು ಉತ್ತಮ ಪ್ರದರ್ಶನ ನೀಡದಿದ್ದರೂ, ಪುನರಾಗಮನ ಮಾಡುವ ನಿರ್ಧಾರವು ಸಂಪೂರ್ಣವಾಗಿ ಧೋನಿಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ವರದಿಯಾಗಿದೆ.

ಧೋನಿ ಫಿಟ್ನೆಸ್ ಹಾಗೂ ಆಟದ ಬಗ್ಗೆ ತಂಡ ಕೋಚ್ ಹಾಗೂ ಆಟಗಾರರು ಹೇಳಿದಿಷ್ಟು

ಇನ್ನು, ಸೀಸನ್ ಆರಂಭದಲ್ಲಿ ಫ್ರಾಂಚೈಸಿ ಧೋನಿ ಅವರು ಕಾಲಿನ ಗಾಯದಿಂದ ಬಳಲುತ್ತಿದ್ದಾರೆ ಮತ್ತು ಎರಡು ವಾರಗಳ ಕಾಲ ಆಟದಿಂದ ಹೊರಗುಳಿಯುತ್ತಾರೆ ಎಂದು ಬಹಿರಂಗಪಡಿಸಿತ್ತು. ಆದಾಗ್ಯೂ, ಹೇಳಿಕೆ ಬಿಡುಗಡೆಯಾಗಿ ಸುಮಾರು 1 ತಿಂಗಳು ಕಳೆದಿದೆ. ಸದ್ಯ ಅವರು ಉತ್ತಮವಾಗಿ ಚೇತರಿಸಿಕೊಳ್ಳುತ್ತಿದ್ದಾರೆಂದು ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ತಿಳಿಸಿದಾಗ್ಯೂ, ಈ ಕುರಿತಂತೆ ಫ್ರಾಂಚೈಸಿಯಿಂದ ಅಧಿಕೃತ ಹೇಳಿಕೆ ಬಂದಿಲ್ಲ. ಇನ್ನು, ಮುಂಬೈ ವಿರುದ್ದ ಧೋನಿ ಆಡುವ ನಿರೀಕ್ಷೆಯಿತ್ತು, ಅಲ್ಲದೆ, ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಬಳಸಿಕೊಂಡು ಧೋನಿ ತಜ್ಞ ಬ್ಯಾಟ್ಸ್‌ಮನ್ ಆಗಿ ಮರಳಬಹುದು ಎಂಬ ವರದಿಗಳಿತ್ತು. ಆದಾಗ್ಯೂ, ಈ ಸಾಧ್ಯತೆಯನ್ನು ಬ್ಯಾಟ್ಸ್‌ಮನ್ ಮೈಕ್ ಹಸ್ಸಿ ತಳ್ಳಿ ಹಾಕಿದ್ದು, ಧೋನಿ ಸ್ಟಂಪ್‌ಗಳ ಹಿಂದೆ ಇರುತ್ತಾರೆ. ಏಕೆಂದರೆ, ಅವರ ಕಾಲಿನ ಗಾಯವಾಗಿದ್ದು, ಪಂದ್ಯದಲ್ಲಿ ಆಡುವಾಗ ಒಂದು ಮತ್ತು ಎರಡು ರನ್‌ಗಳನ್ನು ಗಳಿಸಬೇಕಾದದರಿಂದ ಈ ಓಟದ ಸಮಯದಲ್ಲಿ ಕಾಲಿನ ಸ್ನಾಯುಗಳು ಅದನ್ನು ತಡೆದುಕೊಳ್ಳುವಷ್ಟು ಬಲಶಾಲಿಯಾಗಿವೆ ಎಂದು ನಾವು ಖಚಿತಪಡಿಸಿಕೊಳ್ಳಬೇಕು. ಆದರೆ ಕೌಶಲ್ಯದ ದೃಷ್ಟಿಕೋನದಿಂದ, ಕೀಪರ್ ಆಗಿ ಅವರು ಏನು ಮಾಡಬಹುದೆಂದು ನಮಗೆ ತಿಳಿದಿದೆ ಮತ್ತು ಅವರು ಚೆನ್ನಾಗಿ ಬ್ಯಾಟಿಂಗ್ ಮಾಡುತ್ತಿದ್ದಾರೆ ಎಂದಿದ್ದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news